ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಅಕ್ಟೋಬರ್ 14 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಮೈಸೂರು ಮಿತ್ರ 45

ಸಂಪುಟ: 45 | ಸಂಚಿಕೆ: 178 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಜನಸಾಗರ

- ಅಡಿಗಡಿಗೂ ವಾಹನ, ಜನ ದಟ್ಟಣೆ ; ಸಂಚಾರ ನಿಯಂತ್ರಣಕ್ಕೆ ಪೊಲೀಸರು ಹರಸಾಹಸ
- ಅರಮನೆ ಸುತ್ತಮುತ್ತಲ ರಸ್ತೆಗಳಲ್ಲಿ ಜನಜಾತ್ರೆ
- ಎತ್ತ ನೋಡಿದರತ್ತ ಜನವೋ ಜನ
- ಭಾನುವಾರ ಅರಮನೆಗೆ 27,040 ಜನ ಭೇಟಿ
- ಮೃಗಾಲಯಕ್ಕೂ ಸಹಸ್ರಾರು ಪ್ರವಾಸಿಗರು

ಮೈಸೂರು,ಅ.13(ಪಿಎಂ/ಎಂಟಿವೈ)– ಜಂಬೂ ಸವಾರಿಯ ಮಾರನೇ ದಿನವಾದ ಭಾನುವಾರ ಮೈಸೂರಿನಲ್ಲಿ ಎಲ್ಲಿ ನೋಡಿದರೂ ಜನವೋ ಜನ. ಅರಮನೆ ಸುತ್ತಮುತ್ತಲ ರಸ್ತೆಗಳಲ್ಲಿ ಬೆಳಗ್ಗೆಯೇ ವಾಹನ ಹಾಗೂ ಜನ ದಟ್ಟಣೆ. ಸಂಜೆಯಾಗುತ್ತಿದ್ದಂತೆ ಹೇಳಲೇಬೇಕಿಲ್ಲ, ಜನಸಾಗರವೇ ನೆರೆದಿತ್ತು. ನೆರೆದ ಜನರಲ್ಲಿ ಸಂಭ್ರಮವೋ ಸಂಭ್ರಮ. ಆದರೆ ಸಂಚಾರ ನಿರ್ವಹಣೆಗೆ ಪೊಲೀಸರು ಹೈರಾಣಾದರು.

ದಸರಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಪ್ರವಾಸಿಗರು ಮೈಸೂರಿನಲ್ಲಿ ಬೀಡು ಬಿಟ್ಟಿದ್ದು, ಶನಿವಾರ ಜಂಬೂಸವಾರಿ ಸಂಪನ್ನಗೊಂಡರೂ ಭಾನುವಾರ ಮೈಸೂರಿನಲ್ಲಿ ಜನ ಮತ್ತು ವಾಹನ ದಟ್ಟಣೆ ಇದ್ದಿದ್ದನ್ನು ನೋಡಿದರೆ, ಹೆಚ್ಚಿನ ಪ್ರವಾಸಿಗರು, ಮೈಸೂರಿಗರ ನೆಂಟರಿಷ್ಟರು ಇನ್ನು ತಮ್ಮ ಊರುಗಳಿಗೆ ಮರಳಿಲ್ಲವೆಂಬುದು ಖಾತರಿಯಾಗಿದೆ. ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ ಸೇರಿದಂತೆ ವಿವಿಧ ತಾಣಗಳಿಗೆ ಭೇಟಿ ■6ನೇ ಪುಟಕ್ಕೆ


ಮೈಸೂರಿನ ವಸ್ತು ಪ್ರದರ್ಶನ ಹಾಗೂ ಅರಮನೆ ಜಯಮಾರ್ತಾಂಡ ದ್ವಾರದ ಸಮೀಪದ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಭಾನುವಾರ ಸಂಜೆ ಕಂಡುಬಂದ ಭಾರೀ ಜನಸ್ತೋಮ.

ದಸರಾ ವಸ್ತುಪ್ರದರ್ಶನದಲ್ಲೂ ಜನಸ್ತೋಮ

ಜಂಬೂಸವಾರಿ ನಂತರ ಉಳಿದಿರುವ ಏಕಮಾತ್ರ ಆಕರ್ಷಣೆ


ದಸರಾ ವಸ್ತು ಪ್ರದರ್ಶನದ ಮುಖ್ಯ ದ್ವಾರದ ಬಳಿ ನೆರೆದಿರುವ ಜನಸಾಗರ.

ಮೈಸೂರು, ಅ.13 (ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂಪನ್ನಗೊಂಡ ಬೆನ್ನಲ್ಲೇ ದಸರಾ ವಸ್ತು ಪ್ರದರ್ಶನದತ್ತ ಜನಸಾಗರವೇ ಹರಿದು ಬರುತ್ತಿದೆ. ರಜಾ ದಿನವಾದ ಭಾನುವಾರ ಇಡೀ ವಸ್ತು ಪ್ರದರ್ಶನ ಆವರಣದ ಎತ್ತ ನೋಡಿದರೂ ಜನಸ್ತೋಮವೇ ಕಾಣುತ್ತಿತ್ತು.

ಮಧ್ಯಾಹ್ನವಾಗುತ್ತಿದ್ದಂತೆ ತಂಡೋಪ ತಂಡವಾಗಿ ಧಾವಿಸಿ ಬಂದ ಪ್ರವಾಸಿಗರು, ಸ್ಥಳೀಯ ನಿವಾಸಿಗಳು ವಸ್ತುಪ್ರದರ್ಶನದ ಮೂಲೆ ಮೂಲೆಯನ್ನು ಸುತ್ತುವರಿದರು. ಸರ್ಕಾರಿ ಮತ್ತು ಖಾಸಗಿ ಮಳಿಗೆಗಳಲ್ಲಿ ಸುತ್ತಾಡಿ ಸಂಭ್ರಮಿಸಿದರು. ಆಕರ್ಷಣೀಯ ಸೆಲ್ಫಿಸ್ಪಾಟ್‌ಗಳಾದ ಬೃಹತ್ ಪಾಂಡ, ಬ್ರಾಂಡ್ ಮೈಸೂರು ಶೀರ್ಷಿಕೆಯ ಹಳೆ ಮೈಸೂರು ಅರಮನೆ, ಮುಖ್ಯ ಗೇಟ್ ಬಳಿಯ ಹೂವಿನ ಅಲಂಕೃತ ಸೆಲ್ಫಿ ಸ್ಪಾಟ್‌ಗಳು ಹಾಗೂ ನೀರಿನ ಝರಿ ಎದುರು ಫೋಟೋ ಕ್ಲಿಕ್ಕಿಸಿಕೊಂಡು ಹರ್ಷಪಟ್ಟರು. ಹಾಗೆಯೇ ಆಹಾರ ಮಳಿಗೆಗಳತ್ತ ಸುತ್ತಾಡಿ ಇಷ್ಟದ ತಿಂಡಿ–ತಿನಿಸು ಗಳನ್ನು ಸವಿದರು. ದಸರಾ ಆಹಾರ ಮೇಳ ಮುಕ್ತಾಯಗೊಂಡ ಹಿನ್ನಲೆಯಲ್ಲಿ ವೆಜ್ ಮತ್ತು ನಾನ್ ವೆಜ್ ಮಳಿಗೆಗಳತ್ತ ಧಾವಿಸಿದರು. ದಾವಣಗೆರೆ ಬೆಣ್ಣೆ ದೋಸೆ ಸೇರಿದಂತೆ ತರಾವ ■6ನೇ ಪುಟಕ್ಕೆ

ಖ್ಯಾತ ಗಾಯಕರಿಂದ ಸಂಗೀತ ರಸಸಂಜೆ...!

ಕನ್ನಡ ಮತ್ತು ಹಿಂದಿ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕರು, ಹಿನ್ನಲೆ ಗಾಯಕರಿಂದ ದಸರಾ ವಸ್ತುಪ್ರದರ್ಶನದಲ್ಲಿ ವಾರಕ್ಕೊಮ್ಮೆ ಸಂಗೀತ ಕಾರ್ಯಕ್ರಮ ಆಯೋಜಿಸಲು ಚಿಂತನೆ ನಡೆಸಲಾಗಿದೆ. ಪ್ರತೀ ಭಾನುವಾರ ಸಂಜೆ 7 ರಿಂದ ರಾತ್ರಿ 10 ಗಂಟೆಯವರೆಗೆ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಸಲು ಈಗಾಗಲೇ ಖರ್ಚು–ವೆಚ್ಚದ ಲೆಕ್ಕಾಚಾರದ ಜೊತೆಗೆ ಗಾಯಕರ ಆಯ್ಕೆ ಕುರಿತು ಚರ್ಚೆಗಳನ್ನು ನಡೆಸಲಾಗುತ್ತಿದೆ.

ಪತ್ನಿ ಜೊತೆ ಸಂಬಂಧ ಹೊಂದಿದ್ದ ಯುವಕನ ಗುಂಡಿಕ್ಕಿ ಹತ್ಯೆ ಯತ್ನ

- ಪಾಂಡವಪುರ ತಾಲೂಕು ಶಂಭುನಹಳ್ಳಿಯಲ್ಲಿ ಘಟನೆ
- ಈ ಹಿಂದೆ ಇದೇ ಕಾರಣಕ್ಕೆ ಚಾಕು ಇರಿತವೂ ಆಗಿತ್ತು
- ಹತ್ಯೆಗಾಗಿಯೇ ಮುಂಬೈನಿಂದ ನಾಡ ಪಿಸ್ತೂಲ್ ಖರೀದಿ
- ಪಿಸ್ತೂಲ್ ಬಿಸಾಡಿ ಓಡಿ ಹೋಗುತ್ತಿದ್ದ ಆರೋಪಿಯ ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

ಪಾಂಡವಪುರ, ಅ.13– ತನ್ನ ಪತ್ನಿ ಜೊತೆ ಸಂಬಂಧ ಹೊಂದಿದ್ದ ನೆಂಬ ಕಾರಣಕ್ಕೆ ಯುವಕನ ಮೇಲೆ ಆಕೆಯ ಗಂಡ ಗುಂಡು ಹಾರಿಸಿ ಕೊಲೆಗೆ ಯತ್ನಿಸಿರುವ ಘಟನೆ ತಾಲೂಕಿನ ಶಂಭುನಹಳ್ಳಿ ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದೆ.

ತಾಲೂಕಿನ ಶಂಭುನಹಳ್ಳಿ ಗ್ರಾಮದ ಮಂಜು(29) ಗುಂಡೇಟಿನಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವಕ. ಅದೇ ಗ್ರಾಮದ ಶಿವರಾಜು(37) ಕೊಲೆಗೆ ಯತ್ನಿಸಿ ಪೊಲೀಸರ ಅತಿಥಿಯಾಗಿದ್ದಾನೆ.

ಈ ಇಬ್ಬರೂ ಶಂಭುನಹಳ್ಳಿ ಗ್ರಾಮದವರಾಗಿದ್ದು, ಶಿವರಾಜು ಪತ್ನಿಯ ಜತೆ ಮಂಜು ಸಂಬಂಧ ಹೊಂದಿದ್ದನೆಂದು ದೂರಲಾಗಿದೆ. ಇದೇ ವಿಚಾರವಾಗಿ ಕಳೆದ ಮೂರು ವರ್ಷದ ಹಿಂದೆ ಜಗಳವಾಗಿ ಶಿವರಾಜು, ಮಂಜುಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ. ಆ ಸಂಬಂಧ ಗ್ರಾಮದಲ್ಲಿ ರಾಜೀ ಸಂಧಾನ ಮಾಡಲಾಗಿತ್ತು. ಆ ಬಳಿಕ ಶಿವರಾಜು ಮುಂಬೈಗೆ ತೆರಳಿದ್ದ.

ಆದರೆ ದ್ವೇಷ ಹೊಗೆಯಾಡುತ್ತಲೇ ಇತ್ತು. ಶಿವರಾಜು ಕಳೆದ ಆರು ತಿಂಗಳಿಂದ ಮಂಜು ಕೊಲೆಗೆ ಸಂಚು ನಡೆಸಿ, ಕೊಲೆಗೆ ನಿರ್ಧರಿಸಿ, ಮುಂಬೈನ ಚೋರ್ ಬಜಾರ್‌ನಲ್ಲಿ ನಾಡ ಪಿಸ್ತೂಲ್ ■6ನೇ ಪುಟಕ್ಕೆ


ಆರೋಪಿ ಶಿವರಾಜು



ಕೃತ್ಯಕ್ಕೆ ಬಳಸಿದ ನಾಡ ಪಿಸ್ತೂಲ್


ಗಾಯಾಳು ಮಂಜು


ಸ್ಥಳಕ್ಕೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿಕೊಟ್ಟು ಪರಿಶೀಲನೆ ನಡೆಸಿದರು.

ಚನ್ನಪಟ್ಟಣ ಉಪಚುನಾವಣೆ

ನಾನೇ ಅಭ್ಯರ್ಥಿ, ನನ್ನ ಹೆಸರಲ್ಲೇ ಮತಯಾಚನೆ



ಮೈಸೂರು, ಅ.13(ಬಿಎಲ್‌ಯು)– ಚನ್ನಪಟ್ಟಣ ಉಪ ಚುನಾವಣೆಯಲ್ಲಿ ನಮ್ಮ ಕುಟುಂಬದ ಯಾರೂ ಸ್ಪರ್ಧೆ ಮಾಡುವುದಿಲ್ಲ. ಆದರೆ, ಅಲ್ಲಿ ನಾನೇ ಅಭ್ಯರ್ಥಿಯಾಗಿದ್ದು, ನನ್ನ ಹೆಸರಲ್ಲೇ ಮತ ಕೇಳುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲವು ಸಾಧಿಸಲು ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದೆ ಎಂದು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕಡಿಮೆ ಅಂತರದಲ್ಲಿ ಹಿನ್ನಡೆಯಾಗಿತ್ತು. ವಿಧಾನಸಭಾ ಚುನಾವಣೆಯಲ್ಲಿ ಕೂಡ ಹೆಚ್ಚು ಹಿನ್ನಡೆಯಾಗಿತ್ತು. ಆದರೆ ಈಗ ನಮ್ಮ ಪಕ್ಷದ ತಳಪಾಯವನ್ನು ಶಕ್ತಿಯುತಗೊಳಿಸುತ್ತಿದ್ದೇವೆ. ಹಾಗಾಗಿ ಗೆಲುವು ಸಾಧಿಸಲು ನಮಗೆ ಪೂರಕ ವಾತಾವರಣವಿದೆ. ನಾವು ಮಾಡಿರುವ ಅಭಿವೃದ್ಧಿ ಕಾರ್ಯ ನೋಡಿ ಜನರು ಕೂಡ ನಮ್ಮ ಕೈ ಹಿಡಿಯುತ್ತಾರೆ ಎಂಬ ವಿಶ್ವಾಸವಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಕೇಳಿ ಬರುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಡಿ.ಕೆ.ಶಿವಕುಮಾರ್, ಬಿಜೆಪಿಯವರಾದರೂ ಸ್ಪರ್ಧಿಸಲಿ, ಜೆಡಿಎಸ್‌ನವರಾದರೂ ಸ್ಪರ್ಧಿಸಲಿ, ಎನ್‌ಡಿಎ ಅಭ್ಯರ್ಥಿಯಾದರೂ ಸ್ಪರ್ಧಿಸಲಿ. ಅದು ಅವರ ವಿವೇಚನೆಗೆ ಬಿಟ್ಟಿದೆ. ನಮ್ಮ ಮನೆ ನಾವು ರಿಪೇರಿ ಮಾಡಿಕೊಂಡರೆ ಸಾಕು ಎಂದು ಹೇಳಿದರು.

ಚನ್ನಪಟ್ಟಣದಲ್ಲಿ ವ್ಯಕ್ತಿ ಮೇಲೆ ಚುನಾವಣೆ ನಡೆಯಲ್ಲ. ಪಕ್ಷದ ಸಿದ್ಧಾಂತದ ಮೇಲೆ ಚುನಾವಣೆ ನಡೆಸಲು ನಾವು ಹೊರಟಿದ್ದೇವೆ ಎಂದರು.

ದಸರಾ ವಿಜೃಂಭಣೆ: ಈ ಬಾರಿ ಮೈಸೂರು ದಸರಾ ಮಹೋತ್ಸವ ವಿಜೃಂಭಣೆಯಿಂದ ನಡೆದಿದೆ. ಲಕ್ಷಾಂತರ ಜನರು ಸಂತೋಷದಿಂದ ದಸರಾ ವೀಕ್ಷಣೆ ಮಾಡಿದ್ದಾರೆ. ಇದೇ ರೀತಿಯ ಸಮೃದ್ಧ ಮಳೆ, ಬೆಳೆಯಾಗಲಿ ಎಂದು ದೇವರನ್ನು ಬೇಡಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಿದ್ಧಕಿ ಹತ್ಯೆಗೆ ಖಂಡನೆ: ಮುಂಬೈನಲ್ಲಿ ಸಿದ್ಧಕಿ ಬಾಬಾ ಹತ್ಯೆ ಪ್ರಕರಣವನ್ನು ಇದೇ ವೇಳೆ ಖಂಡಿಸಿದ ಡಿ.ಕೆ.ಶಿವಕುಮಾರ್, ಮಹಾರಾಷ್ಟ್ರದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ನಿದರ್ಶನ ಎಂದು ದೂರಿದರು.

ಇದೇ ಕೂಗಿರುತ್ತೇ...: ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಇಳಿಯುತ್ತಾರೆ ಎಂಬ ಬಿಜೆಪಿ ಭವಿಷ್ಯದ ನುಡಿ ಬಗ್ಗೆ ಕೂಡ ಪ್ರತಿಕ್ರಿಯೆ ನೀಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿಯವರು ಇದಕ್ಕೆ ಕಾಯುತ್ತಲೆ ಇರುತ್ತಾರೆ. ಆದರೆ ಹತ್ತು ವರ್ಷವಾದರೂ ಬಿಜೆಪಿಯವರಲ್ಲಿ ಇದೇ ಕೂಗು ಇರುತ್ತದೆ ಎಂದು ಗೇಲಿ ಮಾಡಿದರು.

ಅಭಿಮನ್ಯು ಮೈಸೂರಿಗೆ ಬರುತ್ತಲೇ ಅಂಬಾರಿ ಹೊರಲು ಸಜ್ಜಾದಂತೆ ಭಾಸವಾಗುತ್ತಾನೆ!

ಯಶಸ್ವಿ ಜಂಬೂಸವಾರಿ ರೂವಾರಿ ಅಭಿಮನ್ಯು ಮಾವುತ ವಸಂತ ವರ್ಣನೆ

ಮೈಸೂರು, ಅ.13(ಎಂಟಿವೈ)– ಜಂಬೂಸವಾರಿ ಮಾರ್ಗದುದ್ದಕ್ಕೂ ಲಕ್ಷೋಪಲಕ್ಷ ಜನರಿಗೆ ತಾಯಿ ಚಾಮುಂಡೇಶ್ವರಿಯ ದರ್ಶನ ಮಾಡಿಸುವಲ್ಲಿ ಅಭಿಮನ್ಯು ಯಶಸ್ವಿಯಾಗಿದ್ದಾನೆ ಎಂದು ಅಂಬಾರಿ ಆನೆ ಅಭಿಮನ್ಯು ಮಾವುತ ವಸಂತ ಸಂತಸದಿಂದ ನುಡಿದಿದ್ದಾರೆ.

ಜಂಬೂಸವಾರಿಯಲ್ಲಿ ಸತತ 5ನೇ ಬಾರಿಗೆ ಅಂಬಾರಿ ಹೊತ್ತ ಅಭಿಮನ್ಯು ಮುನ್ನಡೆಸಿದ ಹೆಗ್ಗಳಿಕೆ ಇವರದು. ಭಾನುವಾರ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ತಾಯಿ ಚಾಮುಂಡೇಶ್ವರಿಯ ಆಶೀರ್ವಾದದಿಂದ ಜಂಬೂಸವಾರಿಯಲ್ಲಿ ಅಂಬಾರಿ ಹೊತ್ತು ಅಭಿಮನ್ಯು ಯಶಸ್ವಿಯಾಗಿ ಸಾಗಿದ. ದೇವಿಯ ಮೆರೆಸುವುದಕ್ಕೆ ಹುಟ್ಟಿದ್ದೇನೆ ಎನ್ನುವುದು ಅಭಿಮನ್ಯುವಿನ ಇಚ್ಛೆಯೂ ಇರಬೇಕು. ಮೈಸೂರಿಗೆ ಕರೆ ತರುತ್ತಿದ್ದಂತೆ ಅಭಿಮನ್ಯು ಅಂಬಾರಿ ಹೊರಲು ಸಜ್ಜಾದಂತೆ ಭಾಸವಾಗುತ್ತಾನೆ. ಬಣ್ಣ ಬಳಿದು, ಸಿಂಗರಿಸಿದಾಗ ಅವನ ಸ್ಫೂರ್ತಿ ಇಮ್ಮಡಿಯಾದಂತೆ ಕಂಡು ಬರುತ್ತದೆ. ಜಂಬೂಸವಾರಿಯಲ್ಲಿ ಗಾಂಭೀರ್ಯದಿಂದ ಹೆಜ್ಜೆ ಹಾಕಿ ಎಲ್ಲರ ನಂಬಿಕೆ ಉಳಿಸಿಕೊಂಡಿದ್ದಾನೆ ಎಂದರು.



ಅಭಿಮನ್ಯುವಿಗೆ ಅದರ ಸಾರಥಿ ವಸಂತನ ಅವಿನಾಭಾವ ಸಂಬಂಧ.

ಈ ಬಾರಿ ಜಂಬೂಸವಾರಿ ಸಾಗುವಾಗ ಕತ್ತಲೆ ಕವಿದಿತ್ತು. ದೀಪಾಲಂಕಾರಗಳ ನಡುವೆಯೂ ಅಂಬಾರಿ ಹೊತ್ತು ಸಾಗಿದ. ಸ್ವಲ್ಪವೂ ಮಿಸುಕಾಡದೇ ಕೊನೆಯವರೆಗೂ ಶಾಂತವಾಗಿದ್ದ. ಚಾಮುಂಡೇಶ್ವರಿಯ ಕೃಪಾಶೀರ್ವಾದವೂ ಅಭಿಮನ್ಯು ಮೇಲಿದೆ. ತಾಯಿಯ ಆಶೀರ್ವಾದದಿಂದ ಜಂಬೂಸವಾರಿ ಯಶಸ್ವಿಯಾಗಿ ನೆರವೇರಿದೆ ಎಂದರು.

ನಾನು ಅವನ ಸಾರಥಿಯಾಗಿದ್ದು ಕೂಡ ದೇವರ ದಯೆ. ನನಗೆ ಇಂತಹ ಜವಾಬ್ದಾರಿ ಲಭಿಸಿರುವುದೇ ನನ್ನ ಪುಣ್ಯ ಎಂದು ಆನಂದಭರಿತರಾದರು.

ಲಕ್ಷಾಂತರ ಜನರು ನೆರೆದಿರುವ ಜಾಗದಲ್ಲಿ ಅಂಬಾರಿ ಹೊತ್ತ ಆನೆಯನ್ನು ಮುನ್ನಡೆಸುವುದು ಸುಲಭವಲ್ಲ. ಪುಂಡಾನೆ ಅಥವಾ ಹುಲಿ ಓಡಿಸುವಷ್ಟು ಸುಲಭದ ಕೆಲಸವೂ ಅಲ್ಲ. ಅಂತೂ ದೇವರು, ಜನರ ಆಶೀರ್ವಾದದಿಂದ ಜಂಬೂಸವಾರಿ ಮೆರವಣಿಗೆ ಯಶಸ್ವಿಯಾಗಿ ಮುಗಿದಿದೆ ಎಂದು ವಸಂತ ಧನ್ಯತೆ ಮೆರೆದರು.

ಲಕ್ಷಾಂತರ ಜನ ನೋಡಿದರು: ನಾನು ಕಳೆದ 25 ವರ್ಷಗಳಿಂದ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಆದರೆ, ಈ ಬಾರಿ ದಸರಾ ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ ಸೇರಿದ್ದಷ್ಟು ಜನರನ್ನು ನಾನು ಎಂದೂ ನೋಡಿರಲಿಲ್ಲ. ವರ್ಷದಿಂದ ವರ್ಷಕ್ಕೆ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗಿಯಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ಬಾರಿ ದೇಶ, ವಿದೇಶದಿಂದ ಆಗಮಿಸಿದ್ದ ಜನರನ್ನು ಕಂಡು ಖುಷಿಯಾಯಿತು. ಇಷ್ಟು ಜನರ ಮುಂದೆ ನನ್ನ ಮತ್ತು ಅಭಿಮನ್ಯು ಮೇಲೆ ಅಂಬಾರಿಯ ಜವಾಬ್ದಾರಿ ಇದ್ದಿದ್ದು ಹೆಮ್ಮೆ ಎನಿಸಿತು ಎಂದರು.

ಜಂಬೂಸವಾರಿ ಮೆರವಣಿಗೆಯಲ್ಲಿ ಮೊದಲು ಅಭಿಮನ್ಯುವಿನ ಮೇಲೆ ಕುಳಿತು ಛತ್ರಿ–ಛಾಮರ ಹಿಡಿದು ಸಾಗುತ್ತಿದ್ದೆವು. ಬಳಿಕ 8 ವರ್ಷ ಅಭಿಮನ್ಯು ಆನೆ ಗಾಡಿ ಎಳೆದ. 5 ವರ್ಷದಿಂದ ಅಂಬಾರಿ ಹೊರುವ ಜವಾಬ್ದಾರಿ ನಮ್ಮದಾಗಿದೆ ಎಂದರು. ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಕಾವಾಡಿ ರಾಜು ಅವರಿದ್ದರು.

“ ನನಗೆ ಭಯವಾಗಲಿಲ್ಲ

ಅಭಿಮನ್ಯು ಐದು ಬಾರಿ ಅಂಬಾರಿ ಹೊತ್ತಿದ್ದಾನೆ. ಈ ಪೈಕಿ ಕೊರೊನಾ ಕಾರಣದಿಂದಾಗಿ ಮೊದಲ ಎರಡು ಬಾರಿ ಅರಮನೆ ಅಂಗಳಕ್ಕೆ ಮಾತ್ರ ಜಂಬೂ ಸವಾರಿ ಸೀಮಿತವಾಗಿತ್ತು. ಆದರೆ ಕಳೆದ ಮೂರು ವರ್ಷಗಳಿಂದ ಅರಮನೆ ಅಂಗಳದಿಂದ ಬನ್ನಿಮಂಟಪದವರೆಗೆ ಅಂಬಾರಿ ಹೊತ್ತು ಸಾಗಿ ಯಶಸ್ವಿಯಾಗಿದ್ದಾನೆ. 2022ರಲ್ಲಿ ಪೂರ್ಣ ಪ್ರಮಾಣದಲ್ಲಿ ಅರಮನೆ ಅಂಗಳದಿಂದ ಬನ್ನಿಮಂಟಪದವರೆಗೆ ಆನೆಯನ್ನು ಮುನ್ನಡೆಸಿದಾಗ ನನಗೆ ಸಾಕಷ್ಟು ಆತಂಕ ಎದುರಾಗಿತ್ತು. ಆ ಸಂದರ್ಭ ಅರಣ್ಯ ಇಲಾಖೆ ಅಧಿಕಾರಿಗಳು ಸೇರಿದಂತೆ ಹಲವರು ಧೈರ್ಯ ತುಂಬಿದ್ದರು. ಅಭಿಮನ್ಯು ಕೂಡ ಉತ್ತಮ ರೀತಿ ಸ್ಪಂದಿಸಿದ್ದ. ಕಳೆದ ವರ್ಷದ ಜಂಬೂಸವಾರಿ ಮೆರವಣಿಗೆಯಿಂದ ನನಗೆ ಇದ್ದ ಆತಂಕ ಮಾಯವಾಗಿತ್ತು. ಈ ಬಾರಿ ನನ್ನ ನಂಬಿಕೆಯನ್ನು ಅಭಿಮನ್ಯು ಮತ್ತೆ ಉಳಿಸಿಕೊಂಡ. ಅಭಿಮನ್ಯು ಮತ್ತು ನನ್ನ ನಡುವೆ ಉತ್ತಮ ಬಾಂಧವ್ಯ ಇದೆ. ಹಾಗಾಗಿ, ಯಶಸ್ವಿಯಾಗಿ ಐದು ವರ್ಷ ಆತನನ್ನು ಮುನ್ನಡೆಸಲು ಸಾಧ್ಯವಾಯಿತು. ಅಭಿಮನ್ಯುವಿನ ಸಾಮರ್ಥ್ಯ, ಜತೆಗೆ ನಾಡದೇವತೆ ತಾಯಿ ಚಾಮುಂಡೇಶ್ವರಿ ಆಶೀರ್ವಾದಿಂದ ಎಲ್ಲವೂ ನಿರ್ವಿಘ್ನವಾಗಿ ನಡೆಯಿತು. **–ವಸಂತ, ಅಭಿಮನ್ಯು ಮಾವುತ.**

ಪೌರಕಾರ್ಮಿಕರಿಗೆ ಸಿಹಿ ವಿತರಿಸಿ, ಅಭಿನಂದನೆ...



ಆಯುಧ ಪೂಜೆ, ದಸರಾ ಪ್ರಯುಕ್ತ ಮೈಸೂರು ವಾರ್ಡ್ ನಂ.2ರ ಮಂಚೇಗೌಡನಕೊಪ್ಪಲಿನ ಪೌರಕಾರ್ಮಿಕರಿಗೆ ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಸಿಹಿ ವಿತರಿಸಿ, ಅಭಿನಂದಿಸಿದರು. ಮಾಜಿ ಉಪಮೇಯರ್ ಮಹದೇವಪ್ಪ, ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ರಾಮಚಂದ್ರ, ಮುಖಂಡರಾದ ಮೂರ್ತಿ, ಚೆನ್ನೇಗೌಡ, ಜಗದೀಶ್ ಇನ್ನಿತರರಿದ್ದರು.

ದಸರಾ ಯಶಸ್ಸಿಗೆ ಸಹಕರಿಸಿದ ಪತ್ರಕರ್ತರಿಗೆ ಜಿಲ್ಲಾಧಿಕಾರಿ ಕೃತಜ್ಞತೆ

ಮೈಸೂರು, ಅ.13(ಬಿಎಲ್‌ಯು)– ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಅದ್ದೂರಿಯಿಂದ ನಡೆದಿದ್ದು, ಇದಕ್ಕೆ ಸಹಕರಿಸಿದ ಮಾಧ್ಯಮದವರಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಕೃತಜ್ಞತೆ ಸಲ್ಲಿಸಿದ್ದಾರೆ.

ದಸರಾ ಆರಂಭವಾದ ದಿನದಿಂದ ಮುಗಿಯುವ ತನಕ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ವರದಿ ಮಾಡಿ ದಸರಾ ಕಾರ್ಯಕ್ರಮಗಳಿಗೆ ಹೆಚ್ಚಿನ ಮೆರಗು ನೀಡಿದ ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ ಹಾಗೂ ಛಾಯಾಗ್ರಾಹಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ದಸರಾ ಕಾರ್ಯಕ್ರಮಗಳ ಸುದ್ದಿ ಬಿತ್ತರಿಸಿ ಕಾರ್ಯಕ್ರಮ ಯಶಸ್ವಿಯಾಗಲು ಕಾರಣೀಭೂತರಾಗಿದ್ದೀರಾ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ದಸರಾ ಮಹೋತ್ಸವದ ಸಂದರ್ಭದಲ್ಲಿ ನಡೆದ ಆಹಾರ ಮೇಳ, ಚಲನಚಿತ್ರೋತ್ಸವ, ಕುಸ್ತಿ, ಯೋಗ, ಕವಿಗೋಷ್ಠಿ ಸೇರಿದಂತೆ ಹಲವು ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡಿದ ಪತ್ರಕರ್ತರನ್ನು ಲಕ್ಷ್ಮಿಕಾಂತರೆಡ್ಡಿ ಅಭಿನಂದಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ಹಗರಣ

ಲೋಕಾಯುಕ್ತರಿಗೆ ಸಾಕ್ಷ್ಯ ಮಾಹಿತಿ ಸಲ್ಲಿಸಿದ ದೂರುದಾರ ಸ್ನೇಹಮಯಿ ಕೃಷ್ಣ



ಮೈಸೂರು, ಅ.13(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡಿರುವ ಮುಡಾ ಹಗರಣದ ಸಾಕ್ಷ್ಯ ಕುರಿತ ಮಾಹಿತಿಯನ್ನು ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ಸಲ್ಲಿಸಿದ್ದಾರೆ.

ಲೋಕಾಯುಕ್ತರಿಗೆ ಸಲ್ಲಿಸಿರುವ 25 ಪುಟಗಳ ಸಾಕ್ಷ್ಯ ಮಾಹಿತಿಯಲ್ಲಿ ಯಾವ ಯಾವ ವಿಚಾರಗಳ ಆಧಾರದ ಮೇಲೆ ಸಿದ್ದರಾಮಯ್ಯ ಸೇರಿದಂತೆ ಇತರೆ ಆರೋಪಿಗಳನ್ನು ವಿಚಾರಣೆಗೊಳಪಡಿಸಬೇಕು ಎಂದು ಸ್ನೇಹಮಯಿ ಕೃಷ್ಣ ಪಿನ್ ಟು ಪಿನ್ ವಿವರಿಸಿದ್ದಾರೆ.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಬಂದಿರುವ ಕೆಸರೆ ಸರ್ವೆ ನಂಬರ್ 464ರ 3.16 ಎಕರೆ ಭೂಮಿ ದೇವರಾಜು ಹೆಸರಿನಿಂದ 1968ರಲ್ಲಿ ಹಕ್ಕು ಖುಲಾಸೆಯಾಗಿದೆ. ಇದರಿಂದ ಈ ಭೂಮಿಗೆ ದೇವರಾಜು ಮಾಲೀಕರೆ ಅಲ್ಲ. ಹೀಗಿರುವಾಗ ಸಿದ್ದರಾಮಯ್ಯ ಬಾವಮೈದ ಮಲ್ಲಿಕಾರ್ಜುನಸ್ವಾಮಿ ಈ ಭೂಮಿ ಹೇಗೆ ಖರೀದಿ ಮಾಡಿದರು, ಇದು ಕಾನೂನು ಬಾಹಿರವಲ್ಲವೆ ಎಂಬುದು ಸೇರಿದಂತೆ ಹಲವು ವಿಚಾರಗಳನ್ನು ಉಲ್ಲೇಖಿಸಿದ್ದು, ಈ ಪ್ರಶ್ನೆಗಳ ಆಧಾರದ ಮೇಲೆ ತನಿಖೆ ನಡೆಸುವಂತೆ ಕೋರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕೋರ್ಟ್‌ಗೆ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿರುವ ಹಲವು ಅಂಶಗಳನ್ನು ಆಧರಿಸಿ ತನಿಖೆ ನಡೆಸಿದರೆ ಅವರ ಮೇಲಿನ ಆರೋಪ ಸಾಬೀತಾಗುತ್ತದೆ ಎಂದು ಪ್ರತಿಪಾದಿಸಿರುವ ಸ್ನೇಹಮಯಿ ಕೃಷ್ಣ, ಪಾರ್ವತಿ ಅವರು 14 ನಿವೇಶನ ವಾಪಸ್ ನೀಡಲು ಕಾರಣವೇನು, ವಾಪಸ್ ಕೊಟ್ಟ ಪತ್ರ ಸಿದ್ದರಾಮಯ್ಯ ಅವರ ಅಧಿಕೃತ ವಾಟ್ಸ್ ಆಪ್ ಗ್ರೂಪ್‌ನಲ್ಲಿ ಬಂದಿದ್ದರೂ ಅವರಿಗೆ ತಿಳಿದಿರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಲೋಕಾಯುಕ್ತರು ತನಿಖೆ ನಡೆಸುವ ವೇಳೆ ಬಹಳಷ್ಟು ವಿಚಾರಗಳನ್ನು ಮರೆಮಾಚುವ ಸಾಧ್ಯತೆ ಇದೆ. ಆದ ಕಾರಣ ನಾನೇ ಯಾವ ವಿಚಾರವಾಗಿ ತನಿಖೆ ನಡೆಸಬೇಕು ಎಂದು ಉಲ್ಲೇಖಿಸಿ ಸಾಕ್ಷ್ಯ ಮಾಹಿತಿ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಕೆಲವು ಸಾಕ್ಷ್ಯಗಳು ತನಿಖಾ ವರದಿಯಲ್ಲಿ ಇಲ್ಲದ ಪಕ್ಷದಲ್ಲಿ ನೀವು ಈ ವಿಚಾರವನ್ನು ಲೋಕಾಯುಕ್ತರಿಗೆ ತಿಳಿಸಲಿಲ್ಲವೇ ಎಂದು ನ್ಯಾಯಾಲಯ ನನ್ನ ಕೇಳಿದ ಸಂದರ್ಭದಲ್ಲಿ ಸಾಕ್ಷ್ಯ ಮಾಹಿತಿ ನನಗೆ ಬಲವಾದ ದಾಖಲೆಯಾಗುತ್ತದೆ. ಆದ ಕಾರಣ ನಾನು ಸಾಕ್ಷ್ಯ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದ್ದಾರೆ.

ಯುವ ಜನತೆ ಗಾಂಧೀಜಿ ತತ್ವಾದರ್ಶ ಅನುಸರಿಸಬೇಕು

ಚಿಂತನ–ಮಂಥನ ದುಂಡು ಮೇಜಿನ ಸಭೆ ಉದ್ಘಾಟಿಸಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಕರೆ

ಮೈಸೂರು, ಅ.13(ಬಿಎಲ್‌ಯು)– ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಆದರ್ಶ, ಚಿಂತನೆಗಳನ್ನು ಯುವ ಜನತೆ ಅನುಸರಿಸಬೇಕು ಎಂದು ಶಾಸಕ ಜಿ.ಟಿ. ದೇವೇಗೌಡರು ಕರೆ ನೀಡಿದ್ದಾರೆ.

ಮೈಸೂರಿನ ಅಗ್ರಹಾರದ ನಟರಾಜ ಸಭಾಭವನದಲ್ಲಿ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ 21ನೇ ಶತಮಾನದಲ್ಲಿ ಗಾಂಧೀಜಿ ರಾಜಕೀಯ ನಿಲುವುಗಳ ಪ್ರಸ್ತುತತೆ ಕುರಿತ ಚಿಂತನ–ಮಂಥನ ದುಂಡು ಮೇಜಿನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಗಾಂಧೀಜಿ ನೀಡಿರುವ ಸಂದೇಶಗಳು ಎಂದೆಂದಿಗೂ ಉಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಜಾತಿ ಪದ್ಧತಿ ನಿರ್ಮೂಲನೆ ಸೇರಿದಂತೆ ಇತರೆ ವಿಚಾರಗಳನ್ನು ಗಾಂಧೀಜಿ ಪ್ರತಿಪಾದಿಸಿದ್ದರು. ಈ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸುವುದು ಅವರ ನಿಲುವಾಗಿತ್ತು. ದೇಶ ಉದ್ಧಾರವಾಗಬೇಕಾದರೆ ಮೊದಲು ಗ್ರಾಮ ಉದ್ಧಾರವಾಗಬೇಕು ಎಂದು ಹೇಳುತ್ತಿದ್ದರು. ಈ ಮೂಲಕ ಗಾಂಧೀಜಿ ಅವರ ವಿಚಾರಧಾರೆಗಳು ಸದಾ ಕಾಲಕ್ಕೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಸನ್ಮಾರ್ಗದಲ್ಲಿ ಸಾಗದ ಕಾರಣ ಆದರ್ಶ ಸಮಾಜ ಬೋಧನೆ ಮಾಡಿದ ಮಹನೀಯರ ದಿನಾಚರಣೆಗಳು ಕಳೆಗುಂದಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನ ಸೇವೆ ಇಂದಿನ ರಾಜಕಾರಣಿಗಳ ಮೂಲ ಕರ್ತವ್ಯವಾಗಬೇಕು. ಆಗ ದೇಶ ಅಭಿವೃದ್ಧಿ ಪಥದತ್ತ ಸಾಗುತ್ತದೆ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಹಿಳೆ ಮಧ್ಯರಾತ್ರಿ ಸ್ವತಂತ್ರವಾಗಿ ಓಡಾಡುವಂತಹ ಪರಿಸ್ಥಿತಿ ನೆಲೆಗೊಳ್ಳಬೇಕು ಎಂದು ಗಾಂಧೀಜಿ ಆಶಿಸಿದರು. ಆದರೆ ಇಂದು ಮಹಿಳೆ 4 ಗೋಡೆ ಮಧ್ಯೆಯೇ ಇರಬೇಕಾಗಿ ಬಂದಿದ್ದು, ಆದರೂ ರಕ್ಷಣೆ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.


ತಾಂತ್ರಿಕತೆಯ ಆದ್ಯತೆಯಿಂದ ಸಂಬಂಧಗಳು ಹಾಳಾಗುತ್ತಿವೆ. ಪ್ರಕೃತಿ ಜೊತೆಗಿನ ಸಂಬಂಧಗಳು ಕಳೆದು ಹೋಗುತ್ತಿವೆ. ಪ್ರಸ್ತುತ ಶ್ರೀಮಂತಿಕೆ ಹಾಗೂ ಅಧಿಕಾರಕ್ಕೆ ಬೆಲೆ ಇದೆಯೇ ಹೊರತು, ಮೌಲ್ಯಗಳಿಗಲ್ಲ ಎಂದರು.

ಬೆಂಗಳೂರಿನ ಗಾಂಧಿ ಭವನದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಹಿರಿಯ ಗಾಂಧಿ ಮಾರ್ಗಿ ವೈ.ಸಿ.ರೇವಣ್ಣ, ಶ್ರೀ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಶಾರದಾ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಹೆಚ್.ಎ.ಪೂರ್ಣಿಮಾ, ನಿವೃತ್ತ ಪ್ರಾಧ್ಯಾಪಕ ಡಾ.ಜೆ.ಬಿ.ವಿಶ್ವನಾಥಯ್ಯ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ನಟರಾಜ ಸಭಾಭವನದಲ್ಲಿ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ 21ನೇ ಶತಮಾನದಲ್ಲಿ ಗಾಂಧೀಜಿ ರಾಜಕೀಯ ನಿಲುವುಗಳ ಪ್ರಸ್ತುತತೆ ಕುರಿತ ಚಿಂತನ–ಮಂಥನ ದುಂಡು ಮೇಜಿನ ಸಭೆಯನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಇನ್ನಿತರರಿದ್ದಾರೆ.

ರಾಜವಂಶಸ್ಥ ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ ಗಂಡು ಮಗುವಿಗೆ ಜನ್ಮ



ಮೈಸೂರು, ಅ.13(ಬಿಎಲ್‌ಯು)– ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪತ್ನಿ ತ್ರಿಷಿಕಾ ಕುಮಾರಿ ಎರಡನೇ ಮಗುವಿಗೆ ಜನ್ಮ ನೀಡಿದ್ದಾರೆ. ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಮುಂಜಾನೆ ತ್ರಿಷಿಕಾ ಕುಮಾರಿ ಗಂಡು ಮಗುವಿಗೆ ಜನ್ಮ ನೀಡಿದರು. ಅರಮನೆಯಲ್ಲಿ ನಡೆಯುತ್ತಿದ್ದ ನವರಾತ್ರಿಯ ಸಂಭ್ರಮದಲ್ಲಿ ರಾಜಮನೆತನಕ್ಕೆ ಮತ್ತೊಬ್ಬ ಸದಸ್ಯರ ಆಗಮನ ಅರಮನೆಯ ಸಂತಸವನ್ನು ಇಮ್ಮಡಿಗೊಳಿಸಿದೆ. ಯದುವೀರ್ ಕಂಕಣಧಾರಿಯಾಗಿದ್ದ ಕಾರಣ ಮಗು ನೋಡಲು ಆಸ್ಪತ್ರೆಗೆ ಹೋಗಿರಲಿಲ್ಲ. ವಿಜಯದಶಮಿಯ ಎಲ್ಲಾ ಧಾರ್ಮಿಕ ಕಾರ್ಯಗಳು ಸಮಾಪ್ತಿಗೊಳಿಸಿ, ಆಸ್ಪತ್ರೆಗೆ ಭೇಟಿ ನೀಡಿ ಮಗುವನ್ನು ನೋಡಿದ್ದಾರೆ. ಜೇಷ್ಠ ಪುತ್ರ ಆದ್ಯವೀರ್ ಜೊತೆಗೆ ಯದುವೀರ್‌ಗೆ ಮತ್ತೊಂದು ಮಗು ಜೊತೆಯಾಗಿದೆ.

ಅಮೃತ ಮಹೋತ್ಸವ ಸಮಾರೋಪ




ಮೈಸೂರು ಜಯನಗರದ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ಸಭಾಂಗಣದಲ್ಲಿ ನಡೆದ ಯೂತ್ ಹಾಸ್ಟೆಲಿನ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಮಾತನಾಡಿದರು. ಯೂತ್ ಹಾಸ್ಟೆಲ್ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ರವಿಕುಮಾರ್, ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಸಿ.ಕಾಂತರಾಜು, ಆರ್.ಜಿ.ಪದಕಿಯವರ ಪುತ್ರ ಬೆಂಗಳೂರಿನ ಜೈ ಪದಕಿ, ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕದ ಹಿರಿಯ ಸದಸ್ಯ ಆರ್.ಜಿ. ನಾಗರಾಜ್, ಅಧ್ಯಕ್ಷ ಎಂ.ಜಗದೀಶ್, ಛೇರ್ಮನ್ ಪರಶಿವಮೂರ್ತಿ ಇದ್ದರು.

ಎಂ.ಎನ್.ನಾಗರಾಜರಾವ್ ನಿಧನ



ಮೈಸೂರು: ಮೈಸೂರಿನ ಚಾಮರಾಜಪುರಂ ನಿವಾಸಿ, ನಿವೃತ್ತ ಶಿಕ್ಷಕ ಎಂ.ಎನ್.ನಾಗರಾಜರಾವ್ (96) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.10.2024 ಸೋಮವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, 10ನೇ ತಿರುನಾಳ್, ಮುಂಜಾನೆ ಮಂಟಪೋತ್ಸವ, ಲಕ್ಷ್ಮಿ ಪ್ರಣಯ ಕಲಹ, ಸಂಧಾನ ಸೇವೆ, ವಸಂತೋತ್ಸವ, ರಾಮಕೃಷ್ಣಾಶ್ರಮದ ಕೊಳದಲ್ಲಿ ಮಧ್ಯಾಹ್ನ 12 ಗಂಟೆಗೆ ಅವಭೃತ ಸ್ನಾನ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ ಉತ್ಸವ, ಪೂರ್ಣಾಹುತಿ, ಧ್ವಜ ಅವರೋಹಣ, ವೇದ ಪ್ರಬಂಧಾದಿ ಹಿರಿಯ ಶಾತ್ತು ಮೊರೈ ಗೋಷ್ಠಿ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ದಶಮಿ, ಬೆಳಗ್ಗೆಯಿಂದ ತೀರ್ಥಸ್ನಾನ, ಉತ್ಸವ, ಸಂಜೆ ಪೂರ್ಣಾಹುತಿ, ಧ್ವಜಾರೋಹಣ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.


■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ದ್ವಾದಶಿ, ಬೆಳಗ್ಗೆಯಿಂದ ದೇವಿಗೆ ಸ್ವರ್ಣಕವಚ ಅಲಂಕಾರ, ನವಗ್ರಹ ಸಹಿತ ಮೃತ್ಯುಂಜಯ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ಬುದ್ಧ ಬಳಗ, ಮಾನಸಗಂಗೋತ್ರಿ, ಮೈಸೂರು:** 68ನೇ ಧಮ್ಮ ಸ್ವೀಕಾರ ದಿನದ ಅಂಗವಾಗಿ ಬುದ್ಧ ಪ್ರತಿಮೆಗೆ ಪುಷ್ಪಾರ್ಚನೆ, ಮುಖ್ಯ ಅತಿಥಿ: ಮಾನಸಗಂಗೋತ್ರಿ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಸಿ.ಗುರುಸಿದ್ದಯ್ಯ, ಸಂಶೋಧನಾ ವಿದ್ಯಾರ್ಥಿ ಜಗದೀಶ್ ಮಹದೇವಯ್ಯ, ಕೆ.ಎಂ.ಶೇಷಣ್ಣಸ್ವಾಮಿ ಮತ್ತು ತಂಡದಿಂದ ಬುದ್ಧ ಮತ್ತು ಭೀಮ ಗೀತೆಗಳ ಗಾಯನ, ಸ್ಥಳ: ಬುದ್ಧ ಪ್ರತಿಮೆ ಬಳಿ, ಮಾನಸಗಂಗೋತ್ರಿ, ಬೆಳಗ್ಗೆ 8 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 68ನೇ ಧಮ್ಮದೀಕ್ಷಾ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಉಪಸ್ಥಿತಿ: ಮೈಸೂರಿನ ಮಹಾಬೋಧಿ ಸೊಸೈಟಿಯ ಗೌರವಾನ್ವಿತ ಭಂತೇ ನೀಲು ಇಂಜಾಂಗ್, ಉಪನ್ಯಾಸ: ಕರ್ನಾಟಕದಲ್ಲಿ ನವಯಾನದ ಬೆಳವಣಿಗೆಗಳು ಕುರಿತು ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ರಹಮತ್ ತರೀಕೆರೆ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸ್ಥಳ: ಪ್ರೊ.ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ –ಜಿ.ಶಶಿಧರ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ –ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ. ಎಸ್. ಕುಮಾರ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು–ಬಿ.ಆರ್.ಲಕ್ಷ್ಮಣರಾವ್, 7.45–ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30–ಕನ್ನಡ ಚಿತ್ರಗೀತೆಗಳು, 9.05–ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ) 1.ವಿಜಯದಶಮಿ ಆಚರಣೆಯ ಮಹತ್ವ–ಡಾ.ಹೆಚ್.ವಿ.ನಾಗರಾಜರಾವ್ ಅವರ ಭಾಷಣದ ಧ್ವನಿಮುದ್ರಣ, 2. ಸಾವಿನ ಭಯ–ಡಾ.ಹಾ.ಮಾ. ನಾಯಕ್ ಅವರ ಭಾಷಣದ ಧ್ವನಿಮುದ್ರಣ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಅದಿತಿ ಕೃಷ್ಣಪ್ರಕಾಶ್–ವೈಯೋಲಿನ್, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ ಮತ್ತು ಆರ್.ಲೋಕೇಶ್ವರಿ, 12.05–ವನಿತಾ ವಿಹಾರ, 12.30–ದೇವರನಾಮ–ಬಿ.ಎನ್.ಮಂಜುಳಾ, 12.45–ನಮ್ಮ ಆರೋಗ್ಯ: ಜಾಗತಿಕ ಕೈತೊಳೆಯುವ ಜಾಗೃತಿ ದಿನಾಚರಣೆ ಸಂದರ್ಭದಲ್ಲಿ 'ಮಕ್ಕಳಲ್ಲಿ ಬೆಳೆಸಬೇಕಾದ ಆರೋಗ್ಯಕರ ಅಭ್ಯಾಸಗಳು ಕುರಿತು ಮಕ್ಕಳು ಹಾಗೂ ಹದಿಹರೆಯದವರ ಎಂಡೋಕ್ರೈನಾಲಜಿ ತಜ್ಞರಾದ ಡಾ.ತೃಪ್ತಿ. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು–ಡಾ.ಎ.ಡಿ.ಶ್ರೀನಿವಾಸನ್, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ರಮಾಮಣಿ. ಆರ್.ಎ–ಹಾಡುಗಾರಿಕೆ 4.00–ಮಹಿಳಾರಂಗ–"ನಾನು ನನ್ನ ಕಂಪನಿ" ಮನೆಯಲ್ಲಿ ಪೌಷ್ಟಿಕಯುಕ್ತ ಆಹಾರ ಪದಾರ್ಥಗಳನ್ನು ತಯಾರಿಸುವ ಉಷಾ ಶಾಸ್ತ್ರಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಆಯೇಷಾ ಸುಲ್ತಾನಾ, 6.50–ಕೃಷಿರಂಗ: ವಿಷಮುಕ್ತ ಭೂಮಿ ಹಾಗೂ ವಿಷಮುಕ್ತ ಆಹಾರ ಈ ಕುರಿತು ಮಳವಳ್ಳಿಯ ಎಂ.ಎನ್.ಮಹೇಶ್‌ಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಕೆ.ರಾಘವನ್ –ವೀಣಾವಾದನ, 10.00–ನಾಟಕ, 10.30–ಸವಿನೆನಪು

■ **ವ್ಯವಸ್ಥಾಪಕರು :** ಕೆ.ಎಸ್.ರಾಘವೇಂದ್ರ ಅವರಿಂದ ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ನೇತಾಜಿ ಎಜುಕೇಷನ್ ಫೌಂಡೇಷನ್:** ರೈಲ್ವೆ ನೇಮಕಾತಿ ಪರೀಕ್ಷೆಗಳಿಗೆ ತರಬೇತಿ, ಸ್ಥಳ: ಅತ್ರೇಯ, ಕೃಷ್ಣವಿಲಾಸ ರಸ್ತೆ, ಜಗನ್ಮೋಹನ ಅರಮನೆ ಹತ್ತಿರ, ಬೆಳಗ್ಗೆಯಿಂದ.

■ **ಜನಚೈತನ್ಯ ಫೌಂಡೇಷನ್:** ಬಾಲಿವುಡ್ ಮ್ಯೂಸಿಕಲ್ ಈವೆಂಟ್ ಸೀಸನ್–3 (ಜನಪ್ರಿಯ ಹಿಂದಿ ಚಲನಚಿತ್ರ ಗೀತೆಗಳು), ಅಧ್ಯಕ್ಷತೆ: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸ್ಥಳ: ನಾದಬ್ರಹ್ಮ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ರಿಂದ.

■ **ದಿ ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ):** ವರ್ಲ್ಡ್ ಹೆಬಿಟ್ಯಾಟ್ ಡೇ, ಉಪನ್ಯಾಸಕರು: ಆರ್‌ಎಂಪಿ ಸೈಂಟಿಫಿಕ್ ಅಸಿಸ್ಟೆಂಟ್ ಗಿರಿ ಚಂದ್ರಶೇಖರ್, ಅಧ್ಯಕ್ಷತೆ: ಪಿಇಐ, ಮೈಸೂರು, ಅಧ್ಯಕ್ಷ ಡಾ.ದೀಪು ಆರ್., ಸ್ಥಳ: ಎಸ್‌ಪಿ ಭಟ್ ಹಾಲ್, ದಿ ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6 ಗಂಟೆಗೆ.

ಮೈಸೂರು ಪ್ರಮುಖ ಭಾಗ ಬಹುತೇಕ ಸ್ವಚ್ಛ

ರಾತ್ರಿಯಿಂದಲೇ ಪೌರಕಾರ್ಮಿಕರಿಂದ ಸ್ವಚ್ಛತಾ ಕಾರ್ಯ





ಮೈಸೂರು, ಅ.13(ಜಿಎ)– ದಸರಾ ಜಂಬೂಸವಾರಿ ಮೆರವಣಿಗೆ ಮುಗಿದ ಮರು ದಿನವೇ ಮೈಸೂರು ಬಹುತೇಕ ಸ್ವಚ್ಛಗೊಳ್ಳುವ ಮೂಲಕ ಪ್ರವಾಸಿಗರ ಗಮನ ಸೆಳೆಯಿತು.

ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಯನ್ನು ಈ ಬಾರಿಯೂ ಲಕ್ಷಾಂತರ ಜನರು ಕಣ್ತುಂಬಿಕೊಂಡರು. ಆದರೆ, ಅರಮನೆ ಆವರಣ ಹಾಗೂ ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ಕಸದ ರಾಶಿ ಬಿದ್ದಿತ್ತು ಪೌರಕಾರ್ಮಿಕರು ತಡ ರಾತ್ರಿಯಿಂದಲೇ ಸ್ವಚ್ಛತಾ ಕಾರ್ಯ ಆರಂಭಿಸಿ, ಮುಂಜಾನೆ ವೇಳೆಗೆ ಬಹುತೇಕ ಸ್ವಚ್ಛಗೊಳಿಸಿದರು.

ಪೌರಕಾರ್ಮಿಕರ ಪರಿಶ್ರಮದಿಂದಾಗಿ ದಸರಾ ಮುಗಿದ ಮರುದಿನ ನಗರ ಬಹುತೇಕ ಸ್ವಚ್ಛವಾಗಿದೆ. ಮೈಸೂರು ಅರಮನೆ ಆವರಣ ಹಾಗೂ ಜಂಬೂಸವಾರಿ ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ಪ್ಲಾಸ್ಟಿಕ್ ಬಾಟಲ್ ಹಾಗೂ ತಿಂಡಿ ತಿನಿಸುಗಳ ಪ್ಯಾಕೆಟ್‌ಗಳೇ ಭಾರೀ ಪ್ರಮಾಣದಲ್ಲಿ ಬಿದ್ದಿದ್ದವು.

ಯುಜಿಡಿ ಸಮಸ್ಯೆ ಕಂಡುಬಂದರೆ ತಕ್ಷಣ ಸರಿಪಡಿಸಲು ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರವನ್ನು ಬಳಕೆ ಮಾಡಲಾಯಿತು. ಕಸ ತುಂಬಲು ಆಟೋ, ಕಾಂಪೆಕ್ಟರ್‌ಗಳನ್ನು ಬಳಕೆ ಮಾಡಲಾಯಿತು. ಪ್ರತಿ ದಸರಾ ಸಂದರ್ಭದಲ್ಲೂ ಸ್ವಚ್ಛತೆಯಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಪೌರಕಾರ್ಮಿಕರು ಶ್ರಮಿಸುತ್ತಾರೆ. ಹಾಗೆಯೇ ಯಾವುದೇ ರೀತಿಯ ಲೋಪವಾಗದಂತೆ ಈ ಸಲವೂ ಪೌರಕಾರ್ಮಿಕರು ನೋಡಿಕೊಂಡರು.

ಇಡೀ ನಗರ ದಸರೆಯ ಸಂಭ್ರಮದಲ್ಲಿ ಮುಳುಗಿರುವಾಗ ಪೌರಕಾರ್ಮಿಕರು ಸ್ವಚ್ಛತೆಯ ಕಾರ್ಯ ಕೈಗೊಳ್ಳುವ ಮೂಲಕ ನಗರದ ಹಿರಿಮೆ ಹೆಚ್ಚಿಸಿದ್ದಾರೆ. ಕಂಡಕಂಡಲ್ಲಿ ಉರುಳಿ ಬಿದ್ದಿದ್ದ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಇಂದು ಬೆಳಗ್ಗಿನಿಂದಲೇ ವಾಹನಗಳ ಮೂಲಕ ಸಾಗಿಸುವ ಪ್ರಕ್ರಿಯೆಯೂ ಆರಂಭಗೊಂಡಿತು.

ಅರಮನೆಯಲ್ಲೂ ಸ್ವಚ್ಛತಾ ಕಾರ್ಯ ಆರಂಭ

ಮೈಸೂರು ಅಂಬಾವಿಲಾಸ ಅರಮನೆ ಆವರಣದಲ್ಲಿ ಜಂಬೂ ಸವಾರಿ ವೀಕ್ಷಿಸಲು ಆಗಮಿಸಿದವರು ಹಾಕಿದ್ದ ಕಸದ ರಾಶಿಯನ್ನು ಸ್ವಚ್ಛಗೊಳಿಸುವ ಕಾರ್ಯವೂ ಆರಂಭಗೊಂಡಿದೆ. ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಆಸನ ವ್ಯವಸ್ಥೆ ಕಲ್ಪಿಸಿದ್ದ ಹಿನ್ನೆಲೆಯಲ್ಲಿ ಕಸದ ಪ್ರಮಾಣವೂ ಹಿಂದಿಗಿಂತ ಹೆಚ್ಚಾಗಿತ್ತು. ತಿಂಡಿ ತಿನಿಸುಗಳ ಪ್ಯಾಕೆಟ್, ಪ್ಲಾಸ್ಟಿಕ್ ಬಾಟಲ್‌ಗಳ ರಾಶಿ ರಾಶಿ ಅರಮನೆ ಆವರಣದಲ್ಲಿ ಬಿದ್ದಿದೆ.

ಐದನೇ ಬಾರಿ ಯಶಸ್ವಿಯಾಗಿ ಅಂಬಾರಿ ಹೊತ್ತ ಅಭಿಮನ್ಯು



ಮೈಸೂರು, ಅ.13(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಸತತ ಐದನೇ ಬಾರಿಗೆ ಕೂಂಬಿಂಗ್ ಸ್ಟಾರ್ ಅಭಿಮನ್ಯು ಚಿನ್ನದ ಅಂಬಾರಿ ಹೊತ್ತು ಸಾಗುವ ಮೂಲಕ ಸೈ ಎನಿಸಿಕೊಂಡಿದ್ದಾನೆ.

2019ರ ದಸರಾ ನಂತರ ಅರ್ಜುನ ನಿವೃತ್ತಿಯಾದ ಬಳಿಕ 2020ರಿಂದ ಅಂಬಾರಿ ಹೊರುವ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡ ಅಭಿಮನ್ಯು ಸತತ ಐದನೇ ಬಾರಿ ಅಂಬಾರಿ ಹೊತ್ತು ಎಲ್ಲರ ಗಮನ ಸೆಳೆಯಿತು. ಕೊರೊನಾ ಹಿನ್ನೆಲೆ ಯಲ್ಲಿ 2020 ಹಾಗೂ 2021ನೇ ಸಾಲಿನಲ್ಲಿ ಅರಮನೆ ಆವರಣದಲ್ಲಿಯೇ ಅಂಬಾರಿ ಹೊತ್ತಿದ್ದ ಅಭಿಮನ್ಯು 2022, 2023ರಲ್ಲಿ ಅರಮನೆಯಿಂದ ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದವರೆಗೂ ಅಂಬಾರಿ ಹೊತ್ತು ತನ್ನ ಭುಜ ಬಲದ ಸಾಮರ್ಥ್ಯವನ್ನು ಪ್ರದರ್ಶಿಸಿತ್ತು.

58 ವರ್ಷದ ಅಭಿಮನ್ಯು ಕೂಂಬಿಂಗ್ ಸ್ಟಾರ್, ಕರ್ನಾಟಕ ಅರಣ್ಯ ಇಲಾಖೆಯ ಎಕೆ–47 ಸೇರಿದಂತೆ ಹಲವು ಬಿರುದನ್ನು ತನ್ನದಾಗಿಸಿಕೊಂಡಿದ್ದು, ಇದುವರೆಗೆ 160ಕ್ಕೂ ಹೆಚ್ಚು ಕಾಡಾನೆ ಸೆರೆ ಹಾಗೂ 50ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ. ದಸರಾ ಗಜಪಡೆಯಲ್ಲಿರುವ ಬಹುತೇಕ ಆನೆಗಳು ಅಭಿಮನ್ಯು ಸೆರೆ ಹಿಡಿದ ಆನೆಗಳಾಗಿವೆ.

500 ಮೀಟರ್ ಅಂತರ ಹೆಚ್ಚು: ಈ ಬಾರಿ ದಸರಾ ಮಹೋತ್ಸವದಲ್ಲಿ ಜಂಬೂ ಸವಾರಿ ಮಾರ್ಗವನ್ನು 500 ಮೀಟರ್‌ಗೂ ಹೆಚ್ಚು ವಿಸ್ತರಿಸಿದ್ದು, ಈ ಹಿನ್ನೆಲೆ ಯಲ್ಲಿ 750 ಕೆಜಿ ತೂಕದ ಚಿನ್ನದ ಅಂಬಾರಿ, 380 ಕೆಜಿ ತೂಕದ ಗಾದಿ, ನಮ್ದಾ, ಒಡವೆ ಸೇರಿದಂತೆ ಇನ್ನಿತರ ವಸ್ತುಗಳನ್ನು ಹೊತ್ತು ನಿರಾಳವಾಗಿ ಅಭಿಮನ್ಯು ಸಾಗಿ ಎಲ್ಲರ ಪ್ರೀತಿಗೆ ಪಾತ್ರವಾಯಿತು. ಮಾವುತ ವಸಂತ್ ಹಾಗೂ ಕಾವಾಡಿ ರಾಜು ಅವರ ಆರೈಕೆಯಲ್ಲಿರುವ ಅಭಿಮನ್ಯು ಇದೀಗ ದಸರಾ ಮಹೋತ್ಸವದ ಕೇಂದ್ರ ಬಿಂದುವಾಗಿ ಎಲ್ಲರ ಪ್ರೀತಿ–ವಿಶ್ವಾಸ ಸಂಪಾದಿಸಿದೆ.

ಹುಬ್ಬಳ್ಳಿ ಗಲಭೆ ಪ್ರಕರಣಗಳ ವಾಪಸ್ ಪಡೆಯುವ ಪ್ರಸ್ತಾಪ

ಬಿಜೆಪಿ ಸರ್ಕಾರ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲಿನ ಕೇಸ್ ವಾಪಸ್ ಪಡೆದಿಲ್ಲವಾ...

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ



ಮೈಸೂರು, ಅ.13(ಬಿಎಲ್‌ಯು)– ಹುಬ್ಬಳ್ಳಿ ಗಲಭೆಗೆ ಸಂಬಂಧಿತ ಕೇಸ್ ವಾಪಸ್ ಪಡೆದಿರುವುದಕ್ಕೆ ಬಿಜೆಪಿ ಖಂಡನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲಿನ ಕೇಸ್ ವಾಪಸ್ ತೆಗೆದುಕೊಂಡಿರಲಿಲ್ಲವೇ ಎಂದು ಕೇಸರಿ ನಾಯಕರಿಗೆ ತಿರುಗೇಟು ನೀಡಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹುಬ್ಬಳ್ಳಿ ಗಲಭೆ ಸಂಬಂಧ ಪ್ರಕರಣಗಳ ವಾಪಸ್ ತೆಗೆದುಕೊಂಡಂತಹ ಸರ್ಕಾರದ ನಿರ್ಧಾರವನ್ನು ಮೊದಲು ನ್ಯಾಯಾಲಯಕ್ಕೆ ಸಲ್ಲಿಸಬೇಕು. ನ್ಯಾಯಾಲಯ ಒಪ್ಪಿದರೆ ಮಾತ್ರ ಅವುಗಳ ವಾಪಸ್ ಪಡೆಯಲು ಸಾಧ್ಯ ಎಂದು ಸ್ಪಷ್ಟಪಡಿಸಿದರು. ಹುಬ್ಬಳ್ಳಿ ಕೇಸ್ ವಾಪಸ್ ಪಡೆಯುವ ಸಂಬಂಧ ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಲಾಗಿತ್ತು. ಗೃಹ ಸಚಿವ ಡಾ.ಪರಮೇಶ್ವರ್ ಉಪ ಸಮಿತಿ ಅಧ್ಯಕ್ಷರಾಗಿ ಕೈಗೊಂಡ ತೀರ್ಮಾನಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿ, ನಿರ್ಧಾರ ಕೈಗೊಂಡಿದೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರದಿಂದ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿದೆ. ಉತ್ತರ ಪ್ರದೇಶಕ್ಕೆ 31 ಸಾವಿರ ಕೋಟಿ ರೂ. ನೀಡಲಾಗಿದೆ. ಕಳೆದ 5 ವರ್ಷದ ಅವಧಿಯಲ್ಲಿ ರಾಜ್ಯಕ್ಕೆ ಸಲ್ಲಬೇಕಾಗಿದ್ದ 60 ಸಾವಿರ ಕೋಟಿ ನಷ್ಟವಾಗಿದೆ ಎಂದು ದೂರಿದರು. ಈ ಬಗ್ಗೆ ರಾಜ್ಯದ ಜನರು ಧ್ವನಿ ಎತ್ತ ಬೇಕು. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸೇರಿದಂತೆ ರಾಜ್ಯದ ಬಿಜೆಪಿ ಸಂಸದರು ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಪ್ರಶ್ನೆ ಮಾಡುತ್ತಿಲ್ಲ. ಇಷ್ಟಾದರೂ ಕೇಂದ್ರ ಸಚಿವರು ಸೇರಿದಂತೆ ಬಿಜೆಪಿ ಸಂಸದರು ಕೇಂದ್ರ ಸರ್ಕಾರದ ನಡೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ದಸರಾಗೆ 1.50ಯಿಂದ ಎರಡು ಕೋಟಿ ಜನರು ಬಂದಿದ್ದಾರೆ

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಒಂದೂವರೆ ಯಿಂದ ಎರಡು ಕೋಟಿ ಜನರು ಭಾಗವಹಿಸಿದ್ದಾರೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದಲ್ಲಿ ಉತ್ತಮ ಮಳೆ, ಬೆಳೆಯ ಕಾರಣ ಅದ್ದೂರಿ ದಸರಾ ಆಚರಣೆ ಮಾಡಲಾಗಿದೆ. ಹಾಗಾಗಿ ಈ ಬಾರಿ ಹೆಚ್ಚು ಜನರು ದಸರಾಗೆ ಬಂದಿದ್ದಾರೆ ಎಂದರು. ನಿನ್ನೆ ನಡೆದ ಜಂಬೂ ಸವಾರಿ ಮೆರವಣಿಗೆಯಲ್ಲಿ ಮಳೆ ಬಂದಿದ್ದು ಬಿಟ್ಟರೆ ಜನರು ಸಂತೋಷ ದಿಂದ ಭಾಗವಹಿಸಿದ್ದಾರೆ. ಈ ಮೂಲಕ ದಸರಾ ಯಶಸ್ವಿಯಾಗಿದೆ. ಜನರಿಗೆ ದಸರಾ ಖುಷಿ ತಂದರೆ, ಸರ್ಕಾರಕ್ಕೂ ಸಂತೋಷವಾಗುತ್ತದೆ ಎಂದು ಸಿದ್ದರಾಮಯ್ಯ ನುಡಿದರು.

ಎನ್‌ಸಿಪಿ ನಾಯಕ ಬಾಬಾ ಸಿದ್ದಿಕಿ ಹತ್ಯೆ ಹೊಣೆ ಹೊತ್ತ ಗ್ಯಾಂಗ್ ಸ್ಟರ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್!

ನವದೆಹಲಿ, ಅ.13– ಮಹಾರಾಷ್ಟ್ರದ ಮಾಜಿ ಸಚಿವ ಮತ್ತು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಅಜಿತ್ ಪವಾರ್ ಬಣದ ಸದಸ್ಯ ಬಾಬಾ ಸಿದ್ದಿಕಿ ಅವರನ್ನು ಶನಿವಾರ ಸಂಜೆ ಮುಂಬೈನ ಬಾಂದ್ರಾದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಈ ಹತ್ಯೆಯ ಹೊಣೆಯನ್ನು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೊತ್ತುಕೊಂಡಿದೆ. ಸಲ್ಮಾನ್ ಖಾನ್ ಅಥವಾ ದಾವೂದ್ ಇಬ್ರಾಹಿಂ ಗ್ಯಾಂಗ್‌ಗೆ ಸಹಾಯ ಮಾಡುವವರು ಯಾರೇ ಆಗಲಿ ಇದಕ್ಕೆ ಸಿದ್ಧರಾಗಿರಬೇಕು ಎಂದು ಗ್ಯಾಂಗ್‌ನ ಸದಸ್ಯರೊಬ್ಬರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗಾಯಕ ಸಿಧು ಮೂಸೆವಾಲಾ ಹತ್ಯೆ ಮತ್ತು ಸಲ್ಮಾನ್ ಖಾನ್ ಅವರ ಮುಂಬೈ ಮನೆಯಲ್ಲಿ ನಡೆದ ಗುಂಡಿನ ದಾಳಿಯ ಮಾಸ್ಟರ್ ಮೈಂಡ್ ಲಾರೆನ್ಸ್ ಬಿಷ್ಣೋಯ್ ಎಂದು ಹೇಳಲಾಗಿದೆ. ವಾರದ ಹಿಂದೆಯಷ್ಟೇ ಎನ್‌ಸಿಪಿಯ ಅಜಿತ್ ಪವಾರ್ ಬಣದ ಮತ್ತೊಬ್ಬ ನಾಯಕ ಸಚಿನ್ ಕುರ್ಮಿ ಅವರನ್ನು ಮುಂಬೈನ ಬೈಕುಲ್ಲಾದಲ್ಲಿ ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿತ್ತು.

ಕಾಂಗ್ರೆಸ್‌ನೊಂದಿಗೆ ಸುಮಾರು ಐದು ದಶಕಗಳ ಕಾಲ ಕಳೆದ ಸಿದ್ದಿಕಿ, ದಿವಂಗತ ನಟ ಮತ್ತು ಕಾಂಗ್ರೆಸ್ ನಾಯಕ ಸುನೀಲ್ ದತ್ ಅವರ ನಿಕಟವರ್ತಿಗಳಲ್ಲಿ ಒಬ್ಬರಾಗಿದ್ದರು. ದತ್ ಅವರ ಮರಣದ ನಂತರ, ಸಿದ್ದಿಕಿ ಮಾಜಿ ಕಾಂಗ್ರೆಸ್ ಸಂಸದ ಮತ್ತು ಅವರ ಪುತ್ರಿ ಪ್ರಿಯಾ ದತ್ ಅವರೊಂದಿಗೆ ಕೆಲಸ ಮುಂದುವರೆಸಿದರು.

ಮುಡಾ ನಿವೇಶನ ಹಂಚಿಕೆ ಹಗರಣ

ನ್ಯಾ.ಪಿ.ಎನ್. ದೇಸಾಯಿ ಆಯೋಗದ ತನಿಖಾ ವೈಖರಿಗೆ ಮೈಗ್ರಾಪ ಅಸಮಾಧಾನ

- ಸಿಬಿಐ ತನಿಖೆಗೆ ಪ್ರಕರಣ ವಹಿಸುವ ಸಂಬಂಧ ಹೋರಾಟದ ನಿರ್ಧಾರ
- ಮುಡಾದಲ್ಲಿ ನಡೆದಿರುವ ಹಗರಣಗಳ ಬಗ್ಗೆ ಎಳೆ ಎಳೆಯಾಗಿ ಬಿಡಿಸಿಟ್ಟ ದೂರುದಾರ ಸ್ನೇಹಮಯಿ ಕೃಷ್ಣ, ಮುಡಾ ಮಾಜಿ ಅಧಿಕಾರಿ ನಟರಾಜ್



ಮೈಸೂರು ಗ್ರಾಹಕ ಪರಿಷತ್ ಸಾಮಾನ್ಯ ಸಭೆಯಲ್ಲಿ ಮುಡಾ ಹಗರಣ ಕುರಿತು ಸದಸ್ಯರು ಸಮಗ್ರ ಚರ್ಚೆ ನಡೆಸುತ್ತಿರುವ ದೃಶ್ಯ

ಮೈಸೂರು, ಅ.13(ಎಸ್‌ಪಿಎನ್)– ಮುಡಾ ನಿವೇಶನ ಹಂಚಿಕೆ ಹಗರಣ ಕುರಿತು ಸಮಗ್ರ ತನಿಖೆಗೆ ರಾಜ್ಯ ಸರ್ಕಾರದಿಂದ ನೇಮಕಗೊಂಡಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗ ಸರಿಯಾಗಿ ತನಿಖೆ ಮಾಡುತ್ತಿಲ್ಲ ಎಂಬ ಆರೋಪ ಮೈಗ್ರಾಪ ಸಭೆಯಲ್ಲಿ ವ್ಯಕ್ತವಾಯಿತು.

ಅಲ್ಲದೆ, ದೂರುದಾರರಿಗೆ ನ್ಯಾ.ಪಿ.ಎನ್. ದೇಸಾಯಿ ಅವರು ಅಲಭ್ಯರಾಗಿದ್ದು, ಈ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವ ನಿಟ್ಟಿನಲ್ಲಿ ಮುಂದಿನ ಹೋರಾಟ ತೀವ್ರಗೊಳಿಸಲು ಮೈಗ್ರಾಪ ಸದಸ್ಯರು ಒಕ್ಕೊರಲ ತೀರ್ಮಾನಕ್ಕೆ ಬಂದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿ ಆವರಣದಲ್ಲಿ ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್ ಅಧ್ಯಕ್ಷತೆಯಲ್ಲಿ ಭಾನುವಾರ ಸಂಜೆ ನಡೆದ ಸಾಮಾನ್ಯ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಯಿತು.

ನಂತರ ಸ್ನೇಹಮಯಿ ಕೃಷ್ಣ ಮಾತನಾಡಿ, ಮುಡಾ 50:50 ನಿವೇಶನ ಹಂಚಿಕೆ ಹಗರಣ ವ್ಯಾಪಕವಾಗಿದ್ದು, ಇದರಡಿ ಫಲಾನುಭವಿಗಳಾಗಿರುವವರ ವಿರುದ್ಧ ಕಾನೂನು ಕ್ರಮವಾಗುವವರೆಗೂ ಹೋರಾಟ ನಿಲ್ಲದು. ಈಗಾಗಲೇ ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಿರುವ 2015ರ ಅಧಿಸೂಚನೆ ರದ್ದು ಕೋರಿರುವ ಅರ್ಜಿ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಈ ಕುರಿತು ತೀರ್ಪು ಬಂದ ನಂತರ ಮುಂದಿನ ಹೋರಾಟದ ಬಗ್ಗೆ ಚಿಂತನೆ ಮಾಡುತ್ತೇನೆ ಎಂದರು.

ಹಲವು ವರ್ಷಗಳಿಂದ ಮುಡಾದಲ್ಲಿ ನಡೆದಿರುವ ಹಗರಣ ಕುರಿತು ಸಿಬಿಐ ತನಿಖೆಗೆ ವಹಿಸುವ ಸಂಬಂಧ ಸಂಘ–ಸಂಸ್ಥೆಗಳ ಒಗ್ಗಟ್ಟಿನ ಹೋರಾಟ ಅಗತ್ಯ. ಅಲ್ಲದೆ, ಸಿಬಿಐ ತನಿಖೆಗೆ ಶಿಫಾರಸ್ಸು ಮಾಡುವ ಸಂಬಂಧ ಮುಡಾ ಸದಸ್ಯರು ಆಡಳಿತ ಮಂಡಳಿ ಸಭೆ ಕರೆದು ಒಮ್ಮತದ ತೀರ್ಮಾನಕ್ಕೆ ಬರುವ ನಿಟ್ಟಿನಲ್ಲಿ ನಮ್ಮ ಹೋರಾಟ ರೂಪಿಸಬೇಕಿದೆ ಈ ಹೋರಾಟಕ್ಕೆ ಮೈಗ್ರಾಪ ಸದಸ್ಯರ ಒಮ್ಮತದ ಬೆಂಬಲ ಅಗತ್ಯ ಎಂದು ಮನವಿ ಮಾಡಿದರು. ಸ್ನೇಹಮಯಿ ಕೃಷ್ಣರ ಮನವಿಗೆ ಸದಸ್ಯರು ಪೂರ್ಣ ಬೆಂಬಲ ಸೂಚಿಸಿದರು.

ಮುಡಾಗೆ ವಾಪಸ್ ಬರಬೇಕು: ಮುಡಾದ ಸಾವಿರಾರು ಕೋಟಿ ಬೆಲೆ ಬಾಳುವ ನಿವೇಶನ ಹಂಚಿಕೆ ಹಗರಣ ಮುಚ್ಚಿಡಲು ರಾಜ್ಯ ಸರ್ಕಾರ ತೀವ್ರ ಕಸರತ್ತು ನಡೆಸುತ್ತಿದೆ. ಆದರೆ, ಇದಕ್ಕೆ ನಾನು ಎಂದಿಗೂ ಅವಕಾಶ ನೀಡುವುದಿಲ್ಲ. ಅಕ್ರಮವಾಗಿ ಪಡೆದಿರುವ ಮುಡಾ ನಿವೇಶನಗಳನ್ನು ಪುನಃ ಮುಡಾಗೆ ವಾಪಸ್ ಕೊಡಿಸುವುದು ನನ್ನ ಹೋರಾಟದ ಪ್ರಥಮ ಆದ್ಯತೆ. ಅಲ್ಲದೆ, ನನ್ನನ್ನು ಈ ಹೋರಾಟದಿಂದ ಹಿಂದೆ ಸರಿಯುವಂತೆ ಮಾಡಲು ರಾಜ್ಯ ಸರ್ಕಾರ ತೆರೆಮರೆಯಲ್ಲಿ ತೀವ್ರ ಕಸರತ್ತು ನಡೆಸುತ್ತಿದೆ. ಇದಕ್ಕೆ ನಾನು ಬಗ್ಗುವುದಿಲ್ಲ ಎಂದು ಸಭೆಯಲ್ಲಿ ಶಪಥಗೈದರು.

ಏಕ ಸದಸ್ಯ ಆಯೋಗದ ವಿರುದ್ಧ ವಾಗ್ದಾಳಿ: ನಿವೃತ್ತ ಮುಡಾ ಅಧಿಕಾರಿ ನಟರಾಜ್ ಮಾತನಾಡಿ, ಹಲವು ವರ್ಷಗಳಿಂದ ಮುಡಾ ಅಕ್ರಮ ನಿವೇಶನ ಹಂಚಿಕೆ ವಿರುದ್ಧ ಹೋರಾಡುತ್ತಿದ್ದೆ. ಇದೀಗ ನಿವೃತ್ತನಾದ ನಂತರ ಈ ಹೋರಾಟಕ್ಕೆ ವೇಗ ನೀಡಲು ಶ್ರಮಿಸುತ್ತಿದ್ದೇನೆ. ಸರ್ಕಾರ ನೇಮಿಸಿರುವ ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗ ಸರಿಯಾಗಿ ತನಿಖೆ ಮಾಡುತ್ತಿಲ್ಲ. ಈ ಆಯೋಗ ನೇಮಕಗೊಂಡು ಹಲವು ದಿನಗಳು ಕಳೆದರೂ ತನಿಖೆಯಲ್ಲಿ ಪ್ರಗತಿ ಕಂಡಿಲ್ಲ. ಈ ಸಂಬಂಧ ಅವರ ಭೇಟಿಗೆ ಬೆಂಗಳೂರಲ್ಲಿ ಹಲವು ಬಾರಿ ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ ಎಂದು ಆರೋಪಿಸಿದರು.

ಆಯೋಗದ ತನಿಖೆ ಮಂದಗತಿ: ಸಿಎಂ ಸಿದ್ದರಾಮಯ್ಯ ಪತ್ನಿ ಹೆಸರಿನಲ್ಲಿದ್ದ 14 ನಿವೇಶನ ವಾಪಸ್ ಮಾಡಿ, ತನಿಖೆ ಎದುರಿಸಿರುವಂತೆ ಉಳಿದ ಫಲಾನುಭವಿಗಳು ಸೈಟ್ ವಾಪಸ್ ಕೊಟ್ಟು, ತನಿಖೆ ಎದುರಿಸಬೇಕು. ಅಲ್ಲಿಯವರೆಗೂ ನನ್ನ ಹೋರಾಟ ನಿರಂತರ. ಆದರೆ, ನನಗೆ ನಿಮ್ಮ ಬೆಂಬಲ ಅಗತ್ಯ ಈ ಪ್ರಕರಣದಲ್ಲಿ ನಾವು–ನೀವು ಅಂದುಕೊಂಡಷ್ಟು ಹೋರಾಟದ ಹಾದಿ ಸುಗಮವಿಲ್ಲ. ಈ ಪ್ರಕರಣದಲ್ಲಿ 4 ಸಾವಿರಕ್ಕೂ ಅಧಿಕ ನಿವೇಶನಗಳು ಪರರ ಪಾಲಾಗಿವೆ. ಆದರೆ, ಆಯೋಗ 1200 ನಿವೇಶನಗಳ ದಾಖಲಾತಿ ಕೇಳಿರುವುದು ಸಾರ್ವಜನಿಕರ ಅನುಮಾನಕ್ಕೆ ಕಾರಣವಾಗಿದೆ ಎಂದು ಬೇಸರ ಹೊರಹಾಕಿದರು.

ಭ್ರಷ್ಟಾಚಾರಿಗಳ ಮ್ಯಾಜಿಕ್: ರಾಮಕೃಷ್ಣನಗರ ವೃತ್ತದ ಸಮೀಪದ ಮುಡಾ ಜಾಗ ಆಕ್ರಮಿಸಿಕೊಂಡ ಭೂಗಳ್ಳರು, ರಾತ್ರೋರಾತ್ರಿ ಮನೆ ನಿರ್ಮಿಸಲು ಮುಂದಾಗುತ್ತಾರೆ. ಇದನ್ನು ತಡೆಯುವ ನಿಟ್ಟಿನಲ್ಲಿ ಅಧಿಕಾರಿಗಳು ನೌಟಂಕಿ ಆಟ ಆಡುತ್ತಿದ್ದಾರೆ. ಮುಂದೆ ಅರ್ಜಿದಾರರು ಹೈಕೋರ್ಟ್‌ನಲ್ಲಿ ಮುಡಾ ವಿರುದ್ಧ ದಾವೆ ಹೂಡುತ್ತಾರೆ. ಮುಡಾ ಆಯುಕ್ತರು ಈ ಪ್ರಕರಣದ ಅರ್ಜಿದಾರರೊಂದಿಗೆ ಸಹನಾಭೂತಿಯಿಂದ ವ್ಯಾಜ್ಯ ಬಗೆಹರಿಸುವುದಾಗಿ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿ ಕೋರ್ಟ್‌ಗೆ ಸಲ್ಲಿಸುತ್ತಾರೆ.

ನಂತರ 50:50 ಅಧಿಸೂಚನೆಯಡಿ ಅರ್ಜಿದಾರರಿಗೆ ಬೇರೆ ಬಡಾವಣೆಯಲ್ಲಿ ನಿವೇಶನ ಕೊಡುವ ಕ್ರಮ ಮುಂದುವರೆಯುತ್ತದೆ ಎಂದು ಹಗರಣದ ಕುರಿತು ವಿವರಿಸಿದರು. ಇಂಥ ಸ್ಕೀಂ ಎಲ್ಲಿಯೂ ನೋಡಿಲ್ಲ. ಇಂಥ ಪವಾಡ ನನ್ನ ಸೇವಾಧಿಯಲ್ಲೂ ಕಂಡಿಲ್ಲ. ಇದು ಮುಡಾ ಅಧಿಕಾರಿಗಳಿಂದ ಮಾತ್ರ ಸಾಧ್ಯ ಎಂದು ಸಭೆಗೆ ಹಗರಣದ ಹೂರಣವನ್ನು ತೆರೆದಿಟ್ಟರು.

ಸಿಬಿಐ ತನಿಖೆಗೆ ಬೆಂಬಲ: ಬಾಮೀ ವಿ.ಶಣೈ ಮಾತನಾಡಿ, ಮುಡಾ ಹಗರಣ ತನಿಖೆಗೆ ನೇಮಕಗೊಂಡಿರುವ ನಿವೃತ್ತ ನ್ಯಾ.ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗ, ಮುಡಾ ಹಗರಣದಲ್ಲಿ ಮೈಸೂರಿಗೆ ಬಂದು ಇಲ್ಲಿಯವರೆಗೆ ಯಾವುದೇ ಮಾಹಿತಿ ಕಲೆ ಹಾಕಿಲ್ಲ. ದೂರುದಾರರ ಭೇಟಿಗೆ ಅವಕಾಶ ನೀಡುತ್ತಿಲ್ಲ. ಈ ತನಿಖೆಯಲ್ಲಿ ಆಯೋಗ, ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದೆ. ಇದರಿಂದ ಮುಡಾ ಹಗರಣದಲ್ಲಿ ಪಾರದರ್ಶಕ ತನಿಖೆ ಈ ಆಯೋಗದಿಂದ ಅಸಾಧ್ಯ. ಅಲ್ಲದೆ, 50:50ಯಲ್ಲಿ ಮುಡಾ ನಿವೇಶನ ಹಂಚಿಕೆ, ನೂರಾರು ಸಿಎ ನಿವೇಶನ ಅಕ್ರಮ ಹಂಚಿಕೆ ಹಾಗೂ ಈ ಹಿಂದೆ ನಡೆದಿರುವ ಹಗರಣದ ಕುರಿತು ಸಿಬಿಐ ತನಿಖೆಗೆ ಎಂಜಿಪಿ ಒತ್ತಾಯ ಸೂಕ್ತವಾಗಿದೆ. ಅಲ್ಲದೆ, ವಿಜಯನಗರದ ಸೆಸ್ಕ್ ಕಚೇರಿ ಮುಂಭಾಗದ ಉದ್ಯಾನವನ ಜಾಗವನ್ನು ಮುಡಾ ಅಧಿಕಾರಿಗಳು ಅಕ್ರಮವಾಗಿ ಖಾಸಗಿ ವ್ಯಕ್ತಿಗೆ ಪರಭಾರೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿದ್ದು, ಇದರ ಬಗ್ಗೆ ದಾಖಲಾತಿ ಪರಿಶೀಲಿಸಿ ಮುಂದಿನ ಹೋರಾಟದ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಪಿ.ರಾಕೇಶ್, ವಿಶ್ವನಾಥ್, ಪ್ರಭಾನುದೀಶ್, ನಟರಾಜ್, ಎಸ್.ಶೋಭನಾ, ಡಿ.ವಿ.ದಯಾನಂದ ಸಾಗರ್, ಕೆ.ಭಾನುಪ್ರಶಾಂತ್, ಎಸ್.ಕೆ ದಿನೇಶ್, ಎಸ್.ವಿ.ಶಂಕರ್, ಉಷಾ, ಕೆ.ವಿ.ರಾಮನಾಥ್, ಡಾ.ಎನ್. ಚಂದ್ರಶೇಖರ್, ಆರ್.ಎ.ಮಂಜುನಾಥ್, ಡಾ.ವಿಷಕಂಠ, ವೆಂಕಟೇಶ್, ಜಿ.ಶ್ರೀಧರ, ಅರುಣ್‌ಕುಮಾರ್, ಎಸ್.ಸತೀಶ, ಹೆಚ್.ಟಿ.ರಾಮ್, ಡಾ.ಅಂಜಲಿ, ಜಿ.ಎಂ.ಮಹದೇವ, ಯಶವಂತ್ ಕುಮಾರ್, ಶ್ರೀನಿವಾಸ ಪಟೇಲ್, ಬಿ.ಯತೀಂದ್ರ ಕುಮಾರ್, ಮೆಹುಲ್ ಪಟೇಲ್ ಸೇರಿದಂತೆ ಇತರೆ ಸದಸ್ಯರಿದ್ದರು.

ದೇಶ - ವಿದೇಶ

ಬೆಂಕಿ ಹೊತ್ತಿಕೊಂಡಿರುವಾಗಲೇ ರಸ್ತೆ ಮೇಲೆ ಚಲಿಸಿದ ಕಾರು

ಜೈಪುರ: ಅಪಘಾತಕ್ಕೀಡಾಗಿ ಬೆಂಕಿಗಾಹುತಿಯಾಗಿದ್ದ



ಕಾರೊಂದು ನೋಡ ನೋಡುತ್ತಲೇ ರಸ್ತೆ ಮೇಲೆ ವೇಗವಾಗಿ ಚಲಿಸಿದ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.

ರಾಜಸ್ತಾನದ ಜೈಪುರ ಜಿಲ್ಲೆಯ ಅಜ್ಮೀರ್ ರಸ್ತೆಯ ಸುದರ್ಶನಪುರ ಪುಲಿಯಾ ಕಡೆಗೆ ಚಾಲಕರಹಿತ ಕಾರು ಶನಿವಾರ ಎಲಿವೇಟೆಡ್ ರಸ್ತೆಯಲ್ಲಿ ವೇಗ ವಾಗಿ ಚಲಿಸಿ ನಿಲ್ಲಿಸಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಬಳಿಕ ಕಾರಿಗೆ ಬೆಂಕಿ ಹೊತ್ತಿಕೊಂಡಿದ್ದು, ಈ ವೇಳೆ ದಾರಿಹೋಕ ಪ್ರಯಾಣಿಕರು ಅದನ್ನು ನಿಂತು ನೋಡುತ್ತಿದ್ದಾಗಲೇ ಕಾರು ವೇಗವಾಗಿ ಚಲಿಸಿದೆ.

ಪರಿಣಾಮ ವಾಹನ ಚಾಲಕರು ತಮ್ಮ ವಾಹನಗಳು ಮತ್ತು ಪ್ರಾಣ ಉಳಿಸಿಕೊಳ್ಳಲು ಅಲ್ಲಿ ನೆರೆದಿದ್ದ ಜನ ದಿಕ್ಕಾಪಾಲಾಗಿ ಓಡಿದ್ದಾರೆ. ಕಾರು ವೇಗವಾಗಿ ಹೋಗಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಬಳಿಕ ಸಂಪೂರ್ಣ ಉರಿದು ಹೋಗಿದೆ. ವರದಿಗಳ ಪ್ರಕಾರ, ಶನಿವಾರ ಸಂಜೆ ಈ ಘಟನೆ ನಡೆದಿದ್ದು, ಇದನ್ನು ದಾರಿಹೋಕರೊಬ್ಬರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ರತನ್ ಟಾಟಾ ಭಾರತದ ಹೆಮ್ಮೆಯ ಪುತ್ರ: ಇಸ್ರೇಲ್ ಪ್ರಧಾನಿ ನೆತನ್ಯಾಹು ಸಂತಾಪ

ನವದೆಹಲಿ: ಭಾರತೀಯ ಹಿರಿಯ ಕೈಗಾರಿಕೋದ್ಯಮಿ



ರತನ್ ಟಾಟಾ ಅವರ ನಿಧನಕ್ಕೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಂತಾಪ ಸೂಚಿಸಿದ್ದಾರೆ. ಇಸ್ರೇಲ್ ಮತ್ತು ಭಾರತದ ನಡುವಿನ ಸ್ನೇಹಕ್ಕಾಗಿ ಅವರನ್ನು ಚಾಂಪಿಯನ್ ಎಂದು ಕರೆದಿದ್ದಾರೆ.

ಟಾಟಾ ಗ್ರೂಪ್‌ನ ಮಾಜಿ ಅಧ್ಯಕ್ಷ ರತನ್ ಟಾಟಾ ಬುಧವಾರ ರಾತ್ರಿ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ತಮ್ಮ 86 ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದರು. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸಂತಾಪ ಸೂಚಿಸಿ ಪೋಸ್ಟ್ ಮಾಡಿರುವ ನೆತನ್ಯಾಹು, ಉಭಯ ರಾಷ್ಟ್ರಗಳ ಸಂಬಂಧ ವೃದ್ಧಿಗೆ ರತನ್ ಟಾಟಾ ನೀಡಿದ ಕೊಡುಗೆಗಳನ್ನು ಉಲ್ಲೇಖಿಸಿದ್ದಾರೆ. ನನ್ನ ಗೆಳೆಯ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರೇ, ರತನ್ ಟಾಟಾರ ನಿಧನಕ್ಕೆ ನಾನು ಮತ್ತು ಇಸ್ರೇಲ್ ಜನರು ಶೋಕ ವ್ಯಕ್ತಪಡಿಸುತ್ತಿದ್ದೇವೆ.

ಅವರು ಭಾರತದ ಹೆಮ್ಮೆಯ ಪುತ್ರ, ಉಭಯ ದೇಶಗಳ ಸ್ನೇಹ ಬಾಂಧವ್ಯ ವೃದ್ಧಿಗೆ ಕೆಲಸ ಮಾಡಿದ ಚಾಂಪಿಯನ್ ಎಂದು ತಿಳಿಸಿದ್ದಾರೆ. ಇದೇ ವೇಳೆ, ಟಾಟಾ ಅವರ ಕುಟುಂಬಕ್ಕೆ ತಮ್ಮ ಸಂತಾಪಗಳು ತಿಳಿಸುವಂತೆ ಪ್ರಧಾನಿ ನರೇಂದ್ರ ಮೋದಿಗೆ ಮನವಿ ಮಾಡಿದ್ದಾರೆ.

ಗಾಜಾಪಟ್ಟಿಯ ಉತ್ತರ ಭಾಗದ ಸಂಪೂರ್ಣ ತೆರವಿಗೆ ಇಸ್ರೇಲ್ ಆದೇಶ

ಗಾಜಾಪಟ್ಟಿ: ಗಾಜಾಪಟ್ಟಿಯ ಉತ್ತರ ಭಾಗವನ್ನು



ಹಾಗೂ ಗಾಜಾ ನಗರವನ್ನು ಸಂಪೂರ್ಣವಾಗಿ ತೆರವು ಮಾಡುವಂತೆ ಇಸ್ರೇಲ್ ಸೇನೆಯು ಪ್ಯಾಲೆಸ್ತೀನಿಯನ್ನರಿಗೆ ಹೊಸ ಆದೇಶ ಹೊರಡಿಸಿದೆ.

ಈ ಭಾಗದ ಆಸ್ಪತ್ರೆಗಳಲ್ಲಿನ ರೋಗಿಗಳೂ ಸ್ಥಳಾಂತರಗೊಳ್ಳಬೇಕು ಎಂದು ಇಸ್ರೇಲ್ ತಿಳಿಸಿದೆ. ಆದರೆ, ಯಾವ ದಿನಾಂಕದಲ್ಲಿ ಪ್ರಕ್ರಿಯೆ ನಡೆಯಬೇಕು ಎಂಬುದನ್ನು ಖಚಿತವಾಗಿ ತಿಳಿಸಿಲ್ಲ. 'ನಮ್ಮನ್ನು ಇಲ್ಲಿಂದ ಓಡಿಸಿ, ತಮ್ಮ ಸೇನಾ ನೆಲೆ ಸ್ಥಾಪಿಸಿ, ಯಹೂದಿಗಳನ್ನು ಇಲ್ಲಿ ನೆಲೆಯೂರಿಸಬೇಕು ಎಂದು ಇಸ್ರೇಲ್ ಬಯಸಿದೆ' ಎಂದು ಪ್ಯಾಲೆಸ್ತೀನಿಯರು ಆತಂಕ ವ್ಯಕ್ತಪಡಿಸಿದ್ದಾರೆ.

ಯುದ್ಧ ಆರಂಭವಾದ ಕೆಲ ದಿನಗಳ ಬಳಿಕ, ಇಸ್ರೇಲ್ ಸೇನೆಯು ಗಾಜಾಪಟ್ಟಿಯ ಉತ್ತರ ಭಾಗದಲ್ಲಿದ್ದ ಜನರನ್ನು ತೆರವು ಮಾಡಿಸಿತ್ತು. ಒಂದು ವರ್ಷ ಸತತ ದಾಳಿಯ ಬಳಿಕವೂ ಈ ಭಾಗದಲ್ಲಿ 4 ಲಕ್ಷ ಪ್ಯಾಲೆಸ್ತೀನಿಯರು ಉಳಿದುಕೊಂಡಿದ್ದರು. ಗಾಜಾಪಟ್ಟಿಯ ಕೇಂದ್ರ ಭಾಗದ ಮೇಲೆ ಇಸ್ರೇಲ್ ವಾಯುದಾಳಿ ಮುಂದುವರಿಸಿದ್ದು, ಒಂದೇ ಕುಟುಂಬದ ಎಂಟು ಮಂದಿ ಮೃತಪಟ್ಟಿದ್ದಾರೆ.

ಕೊರೊನಾ ಬಂದಿತ್ತಾ... ಮೊದಲ ಅಲೆಯ ಸೋಂಕಿತರಲ್ಲಿ Heart Attack ಅಪಾಯ ಹೆಚ್ಚು: ಅಧ್ಯಯನ!

ನವದೆಹಲಿ: ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿದ್ದ ಮಹಾಮಾರಿ ಕೋವಿಡ್ ಆತಂಕ ಇನ್ನೂ ಕಡಿಮೆಯಾಗಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಮನುಷ್ಯರನ್ನು ಕಾಡುತ್ತಲೇ ಇದ್ದು, ಇದೀಗ ಹಾರ್ಟ್ ಅಟ್ಯಾಕ್ ರೂಪದಲ್ಲಿ ಕೋವಿಡ್ ಭೀತಿ ಹೆಚ್ಚಿಸಿದೆ. ಹೊಸ ಅಧ್ಯಯನದ ಪ್ರಕಾರ, ಕೋವಿಡ್ ಸಾಂಕ್ರಾಮಿಕ ರೋಗದ ಆರಂಭಿಕ ಅಂದರೆ ಮೊದಲ ಅಲೆಯಲ್ಲಿ ತೀವ್ರವಾದ ಕೋವಿಡ್–19 ಸೋಂಕಿಗೆ ಒಳಗಾಗಿದ್ದ ವ್ಯಕ್ತಿಗಳು ಹೃದಯಾಘಾತ ಮತ್ತು ಪಾರ್ಶ್ವವಾಯುಗಳನ್ನು ಅನುಭವಿಸುವ ಅಪಾಯ ಎರಡು ಪಟ್ಟು ಹೆಚ್ಚು ಎಂದು ಹೇಳಲಾಗಿದೆ.

ಆರ್ಟೆರಿಯೊಸ್ಕ್ಲೆರೋಸಿಸ್, ಥ್ರಂಬೋಸಿಸ್ ಮತ್ತು ನಾಳೀಯ ಜೀವಶಾಸ್ತ್ರದ ಜರ್ನಲ್‌ನಲ್ಲಿ ಈ ವಾರ ಪ್ರಕಟವಾದ ಸಂಶೋಧನೆ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಈ ಕುರಿತು ಮಾಹಿತಿ ನೀಡಿದ್ದು, ಹೆಚ್ಚಿದ ಅಪಾಯವು ಮೂರು ವರ್ಷಗಳವರೆಗೆ ಇರುತ್ತದೆ ಎಂದು ಬಹಿರಂಗಪಡಿಸಿದೆ. ಕೋವಿಡ್ ಸೋಂಕಿಗೆ ಒಳಗಾಗದವರಿಗೆ ಹೋಲಿಸಿದರೆ ಕೋವಿಡ್–19 ಸೋಂಕಿಗೆ ಒಳಗಾದವರು ಹೃದಯಾಘಾತ, ಪಾರ್ಶ್ವವಾಯುವಿನಿಂದ ಮರಣಹೊಂದುವ ಸಾಧ್ಯತೆ ಎರಡು ಪಟ್ಟು ಹೆಚ್ಚು ಎಂದು ಅಧ್ಯಯನವು ಹೇಳಿದೆ.

ಶ್ರೀಲಂಕಾದಲ್ಲಿ ಪ್ರಮುಖ ಪ್ರಕರಣಗಳ ಮರುತನಿಖೆಗೆ ಆದೇಶ

ಕೊಲಂಬೊ: 2019ರ ಈಸ್ಟರ್ ಭಾನುವಾರ ಭಯೋತ್ಪಾದಕ ದಾಳಿ, 2005ರಲ್ಲಿ ನಡೆದಿದ್ದ ತಮಿಳು ಪತ್ರಕರ್ತನ ಹತ್ಯೆ ಸೇರಿದಂತೆ ಪ್ರಮುಖ ಪ್ರಕರಣಗಳ ಮರುತನಿಖೆ ನಡೆಸುವಂತೆ ಶ್ರೀಲಂಕಾದ ನೂತನ ಸರ್ಕಾರ ಆದೇಶಿಸಿದೆ. ಕೆಲ ಪ್ರಮುಖ ಪ್ರಕರಣಗಳು ಇತ್ಯರ್ಥವಾಗದೇ ಇರುವುದಕ್ಕೆ ಎದುರಾಗಿರುವ ತೊಡಕುಗಳನ್ನು ಪತ್ತೆ ಹಚ್ಚಲು ಸಾರ್ವಜನಿಕ ಭದ್ರತಾ ಸಚಿವಾಲಯ ಮುಂದಾಗಿದೆ. ಪ್ರಕರಣಗಳ ಮರುತನಿಖೆ ಮಾಡುವಂತೆ ಪೊಲೀಸ್ ಇಲಾಖೆ ಮುಖ್ಯಸ್ಥರಿಗೆ ಆದೇಶಿಸಿದೆ ಎಂದು ಪೊಲೀಸ್ ವಕ್ತಾರರೊಬ್ಬರು ತಿಳಿಸಿದ್ದಾರೆ. 2015ರಲ್ಲಿ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಆಡಳಿತಾವಧಿಯಲ್ಲಿ ಸೆಂಟ್ರಲ್ ಬ್ಯಾಂಕ್ ಬಾಂಡ್ ವಿತರಣೆಯಲ್ಲಿ ನಡೆದಿದೆ ಎನ್ನಲಾದ ಹಗರಣ, 2019ರಲ್ಲಿ 11 ಭಾರತೀಯರು ಸೇರಿದಂತೆ 270 ಜನರ ಸಾವಿಗೆ ಕಾರಣವಾದ ಈಸ್ಟರ್ ಭಾನುವಾರ ಭಯೋತ್ಪಾದಕ ದಾಳಿ ಪ್ರಕರಣಗಳ ಮರುತನಿಖೆಯೂ ನಡೆಯಲಿದೆ. ಇದರೊಂದಿಗೆ, 2005ರಲ್ಲಿ ನಡೆದಿದ್ದ ತಮಿಳು ಅಲ್ಪಸಂಖ್ಯಾತ ಸಮುದಾಯದ ಪತ್ರಕರ್ತ ಡಿ.ಶಿವರಾಮ್ ಹತ್ಯೆ ಮತ್ತು 2006ರಲ್ಲಿ ನಡೆದಿದ್ದ ಈಸ್ಟರ್ನ್ ವಿಶ್ವವಿದ್ಯಾಲಯದ ಮುಖ್ಯಸ್ಥ, ತಮಿಳು ಸಮುದಾಯದ ವ್ಯಕ್ತಿಯ ಅಪಹರಣ ಪ್ರಕರಣ, 2011ರಲ್ಲಿ ನಡೆದಿದ್ದ ಇಬ್ಬರು ರಾಜಕೀಯ ಮುಖಂಡರ ಅಪಹರಣ ಪ್ರಕರಣಗಳು ಮರುತನಿಖೆಗೆ ಒಳಪಡಲಿವೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಮೀನು ಇಲ್ಲದ ಬಲೆ, ಬೆಂಕಿ ಇಲ್ಲದ ಒಲೆ,
ಖಾಲಿ ಇರುವ ನಿನ್ನ ತಲೆ, ಇದ್ದರೆಷ್ಟು ಬಿಟ್ಟರೆಷ್ಟು!
ಸ್ಟೂಡೆಂಟ್ : ಸ್ಪರ್ಧೆ ಇಲ್ಲದ ಆಟ, ಹೂವಿಲ್ಲದ ತೋಟ,
ಅರ್ಥವಾಗದ ನಿಮ್ಮ ಪಾಠ, ಕೇಳಿದರೆಷ್ಟು ಬಿಟ್ಟರೆಷ್ಟು!!

ಮೈಸೂರು ಮಿತ್ರ
ಸೋಮವಾರ, 14 ಅಕ್ಟೋಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........
ಜೀವನದಲ್ಲಿ ನೋಡಿ ಕಲಿತದ್ದಕ್ಕಿಂತ ನೊಂದು ಕಲಿತದ್ದೇ ಹೆಚ್ಚು!

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಬರಗಾಲದಲ್ಲಿ ಅಧಿಕ ಮಾಸ

ನಿಮ್ಮ ಪತ್ರಗಳು

ಜಾಹೀರಾಥೂ....!

ಮಾನ್ಯರೆ,

ನವರಾತ್ರಿಯಲ್ಲಿ ಸಂಹರಿಸಬೇಕಾದ ವಿನಾಶಕಾರಿ ಶಕ್ತಿಗಳು ಎಂಬ ಶೀರ್ಷಿಕೆಯಲ್ಲಿ ಕರ್ನಾಟಕ ಸರಕಾರವು ವಿಶಿಷ್ಟ ರೀತಿಯಲ್ಲಿ ದಸರಾ ಶುಭಾಶಯ ಕೋರುವ ಜಾಹೀರಾತನ್ನು ಪ್ರಕಟಿಸಿತ್ತು.

ಆ ಜಾಹೀರಾತಿನ ನುಡಿಮುತ್ತುಗಳು ಹೀಗಿವೆ.

* ಪ್ರಥಮ: ಕೋಮುಗಲಭೆ: ಶಾಂತಿಸೌಹಾರ್ದತೆಯಿಂದ ನಿಗ್ರಹ
* ದ್ವಿತೀಯ: ಸಾಮಾಜಿಕ ಪಿಡುಗು: ವೈಜ್ಞಾನಿಕ ಅರಿವಿನಿಂದ ನಿವಾರಣೆ
* ತೃತೀಯ: ಶಾಂತಿಭಂಗ: ಸಾಮರಸ್ಯ ಕದಡುವವರ ನಿರ್ಮೂಲನೆ
* ಚತುರ್ಥಿ: ದುಷ್ಕೃತ್ಯ: ಕಠಿಣ ಶಿಕ್ಷೆ
* ಪಂಚಮಿ: ವಿಧ್ವಂಸಕತೆ: ಧೈರ್ಯ ಮತ್ತು ಶೌರ್ಯದಿಂದ ದಮನ
* ಷಷ್ಠಿ: ಅಶಾಂತಿ: ಕಾನೂನು ಸುವ್ಯವಸ್ಥೆಯಿಂದ ನಿವಾರಣೆ
* ಸಪ್ತಮಿ: ಪ್ರಚೋದನೆ: ಪ್ರೇರೇಪಿಸುವವರ ನಿರ್ಮೂಲನೆ
* ಅಷ್ಟಮಿ: ಸುಳ್ಳು ವದಂತಿ: ಮೂಲದಿಂದಲೇ ನಾಶ
* ನವಮಿ: ಅಪಪ್ರಚಾರ: ಮಾಡುವವರ ಮೇಲೆ ಕ್ರಮ....

ಸಾರ್ವಜನಿಕರ ದುಡ್ಡಿನಲ್ಲಿ ಇಂತಹ ಜಾಹೀರಾತನ್ನು ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಪ್ರಕಟಿಸಿದ ಬೆನ್ನಿನಲ್ಲಿಯೇ ಇದಕ್ಕೆ ತದ್ವಿರುದ್ಧವಾಗಿ ಸರಕಾರವು ನಡೆದುಕೊಂಡಿದೆ. ದಿನಾಂಕ 16.04.2022ರಂದು ಹುಬ್ಬಳ್ಳಿಯಲ್ಲಿ ನಡೆದ ಕೋಮುಗಲಭೆಯಲ್ಲಿ 155ಕ್ಕೂ ಹೆಚ್ಚು ಮಂದಿ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿತ್ತು. ಕಲ್ಲು, ಬಡಿಗೆ, ಬೆಂಕಿಯಿಂದ ಮಾಡಿದ ದಾಳಿಯಲ್ಲಿ ಇಬ್ಬರು ಪೊಲೀಸರಿಗೆ ಗಂಭೀರ ಗಾಯಗಳಾಗಿದ್ದವು. 10 ಪೊಲೀಸ್ ವಾಹನಗಳು ಜಖಂ ಆಗಿದ್ದವು. ಸಚಿವ ಸಂಪುಟದಲ್ಲಿ ಇಂತಹ ಗಂಭೀರ ಪ್ರಕರಣವನ್ನು ಕೈ ಬಿಡಲಾಗಿದೆ.

ಹುಬ್ಬಳ್ಳಿಯಲ್ಲಿ ಕೋಮುಗಲಭೆ ನಡೆಸಿ, ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿ, ಕಲ್ಲುತೂರಿ, ಮಾರಕಾಸ್ತ್ರ ಹಿಡಿದು ಶಾಂತಿಭಂಗ ಮಾಡಿ, ಅಶಾಂತಿ ಮೂಡಿಸಿ, ದುಷ್ಕೃತ್ಯ ಮೆರೆದು, ವಿಧ್ವಂಸಕ ಕಾರ್ಯದಲ್ಲಿ ಭಾಗಿಯಾಗಿದ್ದ 100–150 ವಿನಾಶಕಾರಿ ಶಕ್ತಿಗಳನ್ನು ಜಾಹೀರಾತಿನಲ್ಲಿ ಡಂಗೂರ ಸಾರಿದಂತೆ ನವರಾತ್ರಿಯಲ್ಲಿ ಸಂಹರಿಸುವ ಬದಲಾಗಿ ಅವರ ಮೇಲಿದ್ದ ಪ್ರಕರಣಗಳನ್ನು ಹಿಂಪಡೆಯುವ ಮೂಲಕ ಅ ಜಾಹೀರಾತೇ ಸುಳ್ಳೆಂದು ಜಗಜ್ಜಾಹೀರು ಮಾಡಿದೆ!

ಆ ಮೂಲಕ ಕರ್ನಾಟಕದ ಪೊಲೀಸರ ನೈತಿಕ ಸ್ಥೈರ್ಯಕ್ಕೇ ಕೊಳ್ಳಿ ಇಟ್ಟಿದೆ.

ಹುಬ್ಬಳ್ಳಿ ಪೊಲೀಸರು ತಮ್ಮ ಠಾಣೆಗೆ ಕೊಳ್ಳಿ ಇಟ್ಟಿದ್ದ ಕಿಡಿಗೇಡಿಗಳ ವಿರುದ್ಧ ರಾಜ್ಯ ಸರಕಾರದ ಪರವಾಗಿ ಹೂಡಿದ್ದ ಪ್ರಕರಣವನ್ನೇ ಹಿಂಪಡೆಯುವ ಮೂಲಕ ಕರ್ನಾಟಕ ರಾಜ್ಯ ಸರಕಾರವು ತನ್ನ ಜಾಹೀರಾತಿನ ಆಶಯಕ್ಕೆ ಎಳ್ಳು–ನೀರು ಬಿಟ್ಟಿದೆ. ತನ್ನ ಜಾಹೀರಾತಿನಲ್ಲಿ ಡಂಗೂರ ಸಾರಿದ ಎಲ್ಲಾ ಅಪರಾಧಗಳನ್ನು ಎಸಗಿದ ಆರೋಪಿಗಳ ವಿರುದ್ಧದ ಪ್ರಕರಣವನ್ನು ಹಿಂಪಡೆಯುವ ಮೂಲಕ ಜಾಹೀರಾತುಗಳ ಮೇಲೆ ಜನರು ನಂಬಿಕೆ ಕಳೆದುಕೊಳ್ಳುವಂತೆ ಮಾಡಿದೆ ನಮ್ಮ ಸರಕಾರ!! –ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಯುದ್ಧೋನ್ಮಾದ ನಿಲ್ಲಲಿ

ಮಾನ್ಯರೆ,

ಎರಡು ವರ್ಷಗಳ ಹಿಂದೆ ಆರಂಭವಾದ ರಷ್ಯಾ ಮತ್ತು ಉಕ್ರೇನ್ ನಡುವಣ ಸಮರ ಇನ್ನೂ ನಿಂತಿಲ್ಲ. ಇದೀಗ ಲೆಬನಾನ್ ಮೇಲಿನ ದಾಳಿಯನ್ನು ನೆಪ ಮಾಡಿಕೊಂಡು ಇರಾನ್, ಇಸ್ರೇಲ್ ಮೇಲೆ ಸರಣಿ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಸರ್ವನಾಶ ಮಾಡುವುದಾಗಿ ಇಸ್ರೇಲ್ ಶಪಥ ಮಾಡಿದೆ. ವಿಶ್ವಕ್ಕೆ ಅಹಿಂಸೆಯನ್ನು ಬೋಧಿಸಿದ ಗಾಂಧೀಜಿಯ ಜನುಮದಿನದಂದೇ ಜಗತ್ತು ಮತ್ತೊಂದು ಮಹಾಸಮರದತ್ತ ಹೊರಳಿರುವುದು ದುರದೃಷ್ಟಕರ ವಿದ್ಯಮಾನ. ಯುದ್ಧದಲ್ಲಿ ಗೆದ್ದವರು ಮತ್ತು ಸೋತವರು, ಯಾರಿಗೂ ಒಳಿತಾಗದು. ಈ ಹಿಂದೆ ಆಗಿರುವ ಎಲ್ಲ ವಿನಾಶಕಾರಿ ಯುದ್ಧಗಳು ಕೊಟ್ಟ ಸಂದೇಶವಿದು. ಆದರೆ ಜಗತ್ತಿನಲ್ಲಿ ಯುದ್ಧದಾಹ ನಿಂತಿಲ್ಲ. ಧರ್ಮ, ಮತ, ಗಡಿ ವಿಸ್ತರಣೆಯ ಸಾಮ್ರಾಜ್ಯಶಾಹಿ ಧೋರಣೆಗಳು ಈಗಲೂ ಯುದ್ಧೋನ್ಮಾದವನ್ನು ಸೃಷ್ಟಿಸುತ್ತಿವೆ. ತನ್ನ ಸುತ್ತಲೂ ವೈರಿ ರಾಷ್ಟ್ರಗಳನ್ನು ಹೊಂದಿರುವ ಇಸ್ರೇಲ್‌ಗೆ ಯುದ್ಧ ನಿತ್ಯದ ಪ್ರಕ್ರಿಯೆ. ಪುಟ್ಟ ರಾಷ್ಟ್ರ ಈಗ ಆರು ರಾಷ್ಟ್ರಗಳ ಜೊತೆ ಏಕಕಾಲದಲ್ಲಿ ಸಮರನಿರತವಾಗಿದೆ. ಅಮೆರಿಕವು ಇಸ್ರೇಲ್ ಬೆನ್ನಿಗೆ ನಿಂತಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ನೇರ ಯುದ್ಧ ನಡೆದರೆ, ಪ್ರಮುಖ ವ್ಯಾಪಾರ ಮಾರ್ಗವಾದ ಕೆಂಪು ಸಮುದ್ರದಲ್ಲಿ ಸಮಸ್ಯೆ ತಲೆದೋರುವುದು ಖಚಿತ. ಭಾರತ, ಯುರೋಪ್, ಅಮೆರಿಕ, ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳು ವ್ಯಾಪಾರಕ್ಕಾಗಿ ಸೂಯೆಜ್ ಕಾಲುವೆಯನ್ನೇ ಅವಲಂಬಿಸಿವೆ. ಇದು ಸಾಲದೆಂಬಂತೆ ಕೆಂಪು ಸಮುದ್ರದಲ್ಲಿ ಸಾಗುವ ಹಡಗುಗಳ ಮೇಲೆ ದಾಳಿ ನಡೆಸುವ ಯೆಮೆನ್ನ ಹೌತಿ ಬಂಡುಕೋರರ ಜತೆ ಹೆಜ್ಬೊಲ್ಲಾ ಉತ್ತಮ ಸಂಬಂಧ ಹೊಂದಿದೆ. ಇರಾನ್‌ನಲ್ಲಿ ಅಂದಾಜು 10,000 ಭಾರತೀಯರು ವಾಸವಾಗಿದ್ದರೆ, ಇಸ್ರೇಲ್‌ನಲ್ಲಿ ಅಂದಾಜು 18,000 ಭಾರತೀಯರಿದ್ದಾರೆ. ಇರಾನ್ ಹಾಗೂ ಇಸ್ರೇಲ್ ಎರಡರ ಜೊತೆಗೂ ಭಾರತ ಸ್ನೇಹ ಸಂಬಂಧ ಹೊಂದಿದೆ. ಇರಾನ್ ಮತ್ತು ಭಾರತ ಇತ್ತೀಚೆಗೆ ಚಬಹಾರ್ ಬಂದರಿನ ಅಭಿವೃದ್ಧಿ ನಿಟ್ಟಿನಲ್ಲಿ ಸುದೀರ್ಘ ಸಹಕಾರಕ್ಕೆ ಒಪ್ಪಿಗೆ ಸೂಚಿಸಿದ್ದವು. ಇರಾನ್ ಮೂಲಕ ಭಾರತ ಮತ್ತು ರಷ್ಯಾವನ್ನು ಸಂಪರ್ಕಿಸುವ ಇಂಟರ್‌ನ್ಯಾಷನಲ್ ನಾರ್ತ್–ಸೌತ್ ಟ್ರಾನ್ಸ್‌ಪೋರ್ಟ್ ಕಾರಿಡಾರ್ (ಐಎನ್‌ಎಸ್‌ಟಿಸಿ) ಕೂಡ ಪ್ರಗತಿಯಲ್ಲಿದೆ. ಇಸ್ರೇಲ್–ಇರಾನ್ ಯುದ್ಧ ಮುಂದುವರಿದರೆ ಭಾರತ ಕಚ್ಚಾ ತೈಲ ಸೇರಿದಂತೆ ಹಲವು ವಿಷಯಗಳಿಗೆ ಬದಲಿ ವ್ಯವಸ್ಥೆ ಮಾಡಿಕೊಳ್ಳುವುದು ಅನಿವಾರ್ಯವಾಗಬಹುದು. ಈ ಯುದ್ಧ ಮುಂದುವರೆಯದಂತೆ ಜಗತ್ತಿನ ಇತರ ರಾಷ್ಟ್ರಗಳು ಒಟ್ಟಾಗಿ ಒತ್ತಡ ಹೇರುವ ಪ್ರಯತ್ನ ಮಾಡಬೇಕಿದೆ.

–ಎನ್.ಆರ್.ಚೇತನ್, ನಗರ್ಲೆ, ನಂಜನಗೂಡು.

ವಿನಾಕಾರಣ ರಸ್ತೆ ಬಂದ್ ಯಾಕೆ?

ಮಾನ್ಯರೆ,


ಮೈಸೂರಿನ ವಾಲ್ಮೀಕಿ ರಸ್ತೆಯಿಂದ ಹುಣಸೂರು ರಸ್ತೆ ಸಂಪರ್ಕಿಸುವ ಮಸೀದಿ ಬಳಿ ಹುಣಸೂರು ರಸ್ತೆಗೆ ಎಡಕ್ಕೆ ಮುಕ್ತವಾಗಿ ಹೋಗುವ ದಾರಿಯನ್ನು ಯಾವುದೇ ಕಾಮಗಾರಿ ಮಾಡದೇ ಇದ್ದರೂ ಕಾಮಗಾರಿ ಪ್ರಗತಿಯಲ್ಲಿದೆ ಎಂಬ ಫಲಕ ಹಾಕಿ ಪೊಲೀಸ್ ಬ್ಯಾರಿಕೇಡ್ ಹಾಕಿ ವಿನಾ ಕಾರಣ ಮುಚ್ಚಿದ್ದಾರೆ. ಇದರಿಂದ ನಾಗರಿಕರು ದಸರಾ ಟ್ರಾಫಿಕ್ ಜಾಮ್ ಸಂದರ್ಭದಲ್ಲಿ ಹಿಡಿಶಾಪ ಹಾಕುತ್ತಿದ್ದಾರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನಿಸಲಿ.

–ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



39. ಗಮಕದ ಗೌರೀ ದೇವುಡು ನರಸಿಂಹ ಶಾಸ್ತ್ರಿ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಚಾಮರಾಜ ಒಡೆಯರ ಕಾಲದಲ್ಲಿ ನಾಟಕಗಳಿಗೆ ಪ್ರಾಶಸ್ತ್ಯ ಬಂದಾಗ ಜೊತೆಯಲ್ಲಿಯೇ ಗಮಕ ಕಲೆಯೂ ಪ್ರಸಿದ್ಧಿ ಯಾಯಿತು. ನಾಟಕಗಳಲ್ಲಿ ಹಾಡನ್ನು ಹಾಡಲು ಸಂಗೀತ ಚೆನ್ನಾಗಿ ಗೊತ್ತಿದ್ದು, ಗಮಕವನ್ನೂ ಕಲಿತಿದ್ದರೆ ಆ ನಾಟಕಕ್ಕೆ ಮತ್ತಷ್ಟು ಕಳೆ ಕೊಡುತ್ತಿತ್ತು. ನಾಟಕ ನೋಡಿ ಜನ ಮೆಚ್ಚುತ್ತಿದ್ದರು.

ಹಾಗೆ ಗಮಕ ಕಲೆಯಲ್ಲಿ ಪ್ರಸಿದ್ಧರಾಗಿದ್ದವರು ಗೌರೀ ದೇವುಡು ನರಸಿಂಹ ಶಾಸ್ತ್ರಿಗಳು. ಇವರ ಅಣ್ಣ 'ನಾಟಕದ ನರಸಿಂಹಯ್ಯ' ಎಂದೇ ಪ್ರಖ್ಯಾತರಾಗಿದ್ದ ಗೌರೀ ನರಸಿಂಹ ಶಾಸ್ತ್ರಿಗಳು ಗಮಕದಲ್ಲಿ ಅಗಾಧ ಪ್ರಾವೀಣ್ಯತೆ ಪಡೆದಿದ್ದರೂ, ಅವರ ಒಲವು ನಾಟಕಗಳ ಕಡೆ ಹೆಚ್ಚಾಗಿದ್ದು ಅದರಲ್ಲಿ ಅವರು ಖ್ಯಾತಿ ಗಳಿಸಿದ್ದರು.

ಗಮಕಿ ಗೌರೀ ದೇವುಡು ನರಸಿಂಹ ಶಾಸ್ತ್ರಿಗಳಿಗೆ ಮನೆಯಲ್ಲಿ ಇಟ್ಟ ಹೆಸರು ದೇವುಡು ಶಾಸ್ತ್ರಿ. ನರಸಿಂಹ ಅವರ ಮನೆ ದೇವರಾಗಿದ್ದು, ಅವರ ಪೈಕಿ ಅನೇಕರಿಗೆ ಅವರುಗಳ ಹೆಸರಿನಲ್ಲಿ ನರಸಿಂಹ ಸೇರಿಹೋಗಿತ್ತು ಇದರಿಂದಾಗಿಯೋ, ಇವರ ಅಣ್ಣನ ಪ್ರಭಾವದಿಂದಾಗಿಯೋ ದೇವುಡು ಶಾಸ್ತ್ರಿಗಳ ಹೆಸರಿಗೂ ನರಸಿಂಹ ಬಳಕೆಯಿಂದಾಗಿ ಸೇರಿಹೋಗಿತ್ತು. ತಲೆತಲಾಂತರದಿಂದಲೂ ಅವರು ಅರಮನೆಯಲ್ಲಿ ಗೌರೀ ಪುರೋಹಿತರಾಗಿದ್ದು ಅವರನ್ನೆಲ್ಲಾ ಗೌರೀ ಪುರೋಹಿತರು ಎಂದು ಗುರುತಿಸಲಾಗುತ್ತಿತ್ತು. ಈ ಪೌರೋಹಿತ್ಯವನ್ನು ದೇವುಡು ಶಾಸ್ತ್ರಿಗಳೂ ಮುಂದುವರಿಸಿಕೊಂಡು ಬರುತ್ತಿದ್ದು ಅವರೂ ಗೌರೀ ಪುರೋಹಿತರಾಗಿದ್ದರು. ಆ ಕಾರಣದಿಂದಾಗಿ ಅವರ ಹೆಸರಿಗೂ 'ಗೌರೀ' ಸೇರಿಹೋಗಿತ್ತು.

ದೇವುಡು ಶಾಸ್ತ್ರಿಗಳು 1878ರಲ್ಲಿ ಮೈಸೂರಿನಲ್ಲಿ ಜನಿಸಿದರು ಇವರ ತಂದೆ ಅಚ್ಚಂಭಟ್ಟರು. ತಾಯಿ ನರಸಮ್ಮನವರು. ಇವರ ಐವರು ಪುತ್ರರ ಪೈಕಿ ದೇವುಡು ಶಾಸ್ತ್ರಿಗಳು ನಾಲ್ಕನೆಯವರು. ಪ್ರಸಿದ್ಧ ನಾಟಕ ಕಲಾವಿದರೂ, ಶ್ರೇಷ್ಠ ಗಮಕಿಗಳೂ ಆಗಿದ್ದ ಇವರ ಅಣ್ಣಂದಿರಾದ ಗೌರೀ ನರಸಿಂಹಯ್ಯನವರಲ್ಲಿಯೇ ದೇವುಡು ಶಾಸ್ತ್ರಿಗಳು ಗಮಕಾಭ್ಯಾಸ ಮಾಡಿದರು. ಅಣ್ಣನ ಜೊತೆಗೆ ತಾವೂ ಗಮಕಿಯಾದರು. ಸಂಗೀತ, ಸಾಹಿತ್ಯ ಮತ್ತು ಗಮಕ ಕಲೆಗಳಲ್ಲಿ ದೊಡ್ಡ ವಿದ್ವಾಂಸರಾಗಿ ಕವಿಗಳೂ ಆಗಿ ಬೆಳೆದರು.

1921ರವರೆಗೆ ಸದ್ವಿದ್ಯಾ ಪಾಠಶಾಲೆ ಪ್ರಾಥಮಿಕ ಮಟ್ಟದ ಸಂಸ್ಕೃತ ಪಾಠಶಾಲೆಯಾಗಿತ್ತು. ನಂತರ ಕನ್ನಡ–ಇಂಗ್ಲಿಷ್ ಕೂಡ ಹೇಳಿಕೊಡುವ ಮಾಧ್ಯಮಿಕ ಶಾಲೆಯಾದಾಗ ದೇವುಡು ಶಾಸ್ತ್ರಿಗಳು ಅದರ ಪ್ರಥಮ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ನಂತರ ಶಾರದಾವಿಲಾಸ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನ್ನಡ ಪಂಡಿತರಾದರು. ಜೊತೆಗೆ ಗೌರೀಪೂಜೆಯ ಪೌರೋಹಿತ್ಯ ಇದ್ದೇ ಇತ್ತು. ಇವರು ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಕನ್ನಡ ಗದ್ಯ–ಪದ್ಯಗಳನ್ನು ಪಾಠ ಮಾಡುವಾಗ ಬೇರೆ ತರಗತಿಯ ವಿದ್ಯಾರ್ಥಿಗಳು ತಮ್ಮ ಪಾಠ ತಪ್ಪಿಸಿಕೊಂಡು ಬಂದು ಮರೆಯಲ್ಲಿ ನಿಂತು ಇವರ ಪಾಠವನ್ನು ಕೇಳುತ್ತಿದ್ದರಂತೆ. ಇವರ ಪಾಠದಿಂದ, ಗಮಕ ಕಲೆಯಿಂದ ಪ್ರಭಾವಿತರಾದ ಕೆಲವು ವಿದ್ಯಾರ್ಥಿಗಳು ಮುಂದೆ ಪ್ರಸಿದ್ಧ ಗಮಕಿಗಳಾಗಿ ಬೆಳೆದರು.

ಶಾರದ ವಿಲಾಸ ಪ್ರೌಢಶಾಲೆ ಆಗ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮಹಡಿಯ ಮೇಲಿತ್ತು. ತರಗತಿಗಳನ್ನು ಪ್ರತ್ಯೇಕವಾಗಿ ನಡೆಸಲು ಇದ್ದದ್ದು ತಡಿಕೆ ಗೋಡೆಗಳು. ಪಕ್ಕದ ಕೊಠಡಿಯಲ್ಲಿ ನಡೆಯುವ ಪಾಠ, ಹುಡುಗರ ಗಲಾಟೆ ಪಕ್ಕದ ತರಗತಿಗೂ ಕೇಳಿಸುತ್ತಿತ್ತು. ಇವೆರಡನ್ನೂ ಮುಳುಗಿಸಿ ಅಕ್ಕಪಕ್ಕದ ಕ್ಲಾಸಿನ ಉಪಾಧ್ಯಾಯರು ಪಾಠ ಹೇಳಬೇಕಿತ್ತು. ಆದರೆ ಪಕ್ಕದ ಕ್ಲಾಸಿನಲ್ಲಿ ದೇವುಡು ನರಸಿಂಹಶಾಸ್ತ್ರಿಗಳು ಪಾಠ ಮಾಡುತ್ತಿದ್ದಾರೆಂದರೆ ಉಳಿದ ಯಾರಿಗೂ ಮಿಸುಗುವುದಕ್ಕೂ ಆಗುತ್ತಿರಲಿಲ್ಲ. ಅವರು ಅಷ್ಟು ಶಕ್ತರು, ಯೋಗ್ಯರು ಎನ್ನುತ್ತಾರೆ ಪ್ರಸಿದ್ಧ ಸಾಹಿತಿ ಸೀತಾರಾಮಯ್ಯನವರು.

ದೇವುಡು ಶಾಸ್ತ್ರಿಗಳಿಗೆ ಬಾಲ್ಯದಿಂದಲೇ ಗಮಕ ಕಲೆಯಲ್ಲಿ ಆಸಕ್ತಿ ಇತ್ತು. ಹಿರಿಯಣ್ಣ ಗೌರೀ ನರಸಿಂಹಯ್ಯನವರ ಮಾರ್ಗದರ್ಶನವೂ ಸಿಕ್ಕಿ ಗಮಕಾಭ್ಯಾಸ ಮಾಡಿದರು. ಹಿರಿಯ ವಿದ್ವಾಂಸರಾಗಿದ್ದ ಪಿ.ಆರ್.ಕರಿಬಸಪ್ಪಶಾಸ್ತ್ರಿಗಳಲ್ಲಿ ಕಾವ್ಯಾಭ್ಯಾಸ ಮತ್ತು ಮಾರ್ಗದರ್ಶನಗಳನ್ನು ಪಡೆದುಕೊಂಡ ದೇವುಡು ಶಾಸ್ತ್ರಿಗಳು ಪ್ರಸಿದ್ಧ ಗಮಕಿಗಳಾದರು. ಹಿರಿಯ ಗಮಕಿಗಳಾದ ಸಾಲಿಗ್ರಾಮದ ಗುಂಡಪ್ಪನವರು, ಅರಕೆರೆ ಶಾಮಯ್ಯಂಗಾರ್, ಹೊಸಕೋಟೆ ನರಸಿಂಹಭಟ್ಟರು, ಅಕ್ಕಸಾಲೆ ದೇವಯ್ಯನವರು ಮುಂತಾದವರ ಪ್ರಭಾವವೂ ಉಂಟಾಗಿ ದೇವುಡು ಶಾಸ್ತ್ರಿಗಳು ತಮ್ಮದೇ ಆದ ಶೈಲಿಯಲ್ಲಿ ಕಾವ್ಯವಾಚನ ಮಾಡಿ ಶ್ರೋತೃಗಳನ್ನು ಮನರಂಜಿಸುತ್ತಿದ್ದರು. "ಮೈಸೂರಿನ ಜನ ವಾಚನಕಾರರ ಗುಣಮಟ್ಟವನ್ನೂ, ವ್ಯಾಖ್ಯಾನಕಾರರ ಅರ್ಥಕೌಶಲ್ಯವನ್ನೂ ಅಳೆದು, ಮೆಚ್ಚುಗೆ ವ್ಯಕ್ತಪಡಿಸುವ ಮಟ್ಟಿಗೆ ರಸಿಕರಾಗಿದ್ದರು. ಅವರು ಬಡಪೆಟ್ಟಿಗೆ ಯಾರ ವಾಚನವನ್ನಾಗಲೀ, ವ್ಯಾಖ್ಯಾನವನ್ನಾಗಲೀ ಒಪ್ಪುತ್ತಿರಲಿಲ್ಲ. ಅದರಲ್ಲಿ ಗುಣ ಕಂಡು ಬಂದರೆ ಅಂಥವರನ್ನು ಬೆಳಕಿಗೆ ತರದೆ ಬಿಡುತ್ತಿರಲಿಲ್ಲ," ಎನ್ನುತ್ತಾರೆ ಗಮಕಿ ಎಂ. ರಾಘವೇಂದ್ರ ರಾವ್ ತಮ್ಮ 'ಕಲೆಯ ಕಾಣಿಗೆ' ಗ್ರಂಥದಲ್ಲಿ, ತಮ್ಮ ಮೇಲೆ ಪ್ರಭಾವ ಬೀರಿದ ಗುರುಗಳಾದ ದೇವುಡು ಶಾಸ್ತ್ರಿಗಳನ್ನು ಸ್ಮರಿಸುತ್ತಾ.

ದೇವುಡು ಶಾಸ್ತ್ರಿಗಳ ವಾಚನ ಹಾಗೂ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ವ್ಯಾಖ್ಯಾನ ಮೈಸೂರಿನ ಹಲವು ಬಡಾವಣೆಗಳಲ್ಲಿ ನಡೆಯುತ್ತಿದ್ದುವು. ದೇವುಡು ಶಾಸ್ತ್ರಿಗಳ ವಾಚನ ಮತ್ತು ಅವರ ನೆಂಟರೇ ಆದ ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ವಿದ್ವತ್ಪೂರ್ಣ ವ್ಯಾಖ್ಯಾನ ಸತತವಾಗಿ ಆರು ತಿಂಗಳ ಕಾಲ ಅರಮನೆಯಲ್ಲಿ ವಾಣೀವಿಲಾಸ ಮಹಾರಾಣಿಯವರ ಸನ್ನಿಧಿಯಲ್ಲಿ ನಡೆದು ಅರಮನೆ ಗೌರವ ಮನ್ನಣೆಗಳಿಗೆ ಪಾತ್ರರಾದರು. ಅಲ್ಲದೆ ಭಾರತ ವಾಚನ ಪ್ರವೀಣ ಸ. ಗೋ. ಬಿಂದುರಾಯರ ಮನೆಯಲ್ಲಿ ಜರುಗಿದ್ದು ವಿಶೇಷ. ಶಾಸ್ತ್ರಿಗಳ ವಾಚನವನ್ನು ಏರ್ಪಡಿಸಿದ್ದ ಬಿಂದುರಾಯರು ಇವರ ವಾಚನ ಕೇಳಿ ಪ್ರಭಾವಿತರಾದರು.

ಮುಂದೆ ಶಾಸ್ತಿಗಳು ಸರ್ಕಾರಿ ಟೀಚರ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ಗಮಕದ ಉಪಾಧ್ಯಾಯರಾಗಿಯೂ ಕೆಲಸ ಮಾಡಿದರು. ದೇವುಡು ಶಾಸ್ತ್ರಿಗಳಿಗೆ ಬೆಳಗಿನಿಂದ ರಾತ್ರಿಯವರೆಗೆ ಬಿಡುವಿಲ್ಲದ ಕೆಲಸಗಳು. ಬೆಳಗಿನ ಹೊತ್ತು ಆಹ್ನೀಕ ಇತ್ಯಾದಿ, ಹನ್ನೊಂದು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಒಂದು ಕಡೆ ಮಾಧ್ಯಮಿಕ ಶಾಲೆ, ಮತ್ತೊಂದು ಕಡೆ ಪ್ರೌಢ ಶಾಲೆಗಳಲ್ಲಿ ಪಾಠ, ಸಂಜೆ ಆಯಿತೆಂದರೆ ಐದು ಗಂಟೆಯಿಂದ ರಾತ್ರಿ ಒಂಬತ್ತು ಗಂಟೆಯವರೆಗೆ ಎರಡು ಕಡೆ ಪುರಾಣ, ಗಮಕದ ಕಾರ್ಯಕ್ರಮ. ಇದರಿಂದಾಗಿ ದಿನವೆಲ್ಲಾ ಬಿಡುವಿಲ್ಲದಂತೆ ದುಡಿಯುತ್ತಿದ್ದರು.

ದೇವುಡು ಶಾಸ್ತ್ರಿಗಳು ಹಲವು ಶಿಷ್ಯರಿಗೂ ತರಬೇತಿ ನೀಡಿದರು. ಇವರ ಗಮಕ ವಾಚನವನ್ನು ಕೇಳಿ ಪ್ರಭಾವಿತರಾಗಿ ಗಮಕವನ್ನು ಕಲಿತವರೂ ಇದ್ದರು. ದೇವುಡು ಅವರ ಗಮಕ ವಾಚನ ಅಷ್ಟು ಪ್ರಭಾವ ಬೀರುವುದಾಗಿತ್ತು. ರಾಜಮ್ಮ ಕಲ್ಲೋಳಿಮಠ್ ಮತ್ತು ಮಿರ್ಲೆ ಸುಬ್ರಹ್ಮಣ್ಯಶಾಸ್ತ್ರಿಗಳು ನರಸಿಂಹಯ್ಯನವರ ಪ್ರಸಿದ್ಧ ಶಿಷ್ಯರಾಗಿದ್ದರು. ಇನ್ನೂ ಹನ್ನೆರಡು ವರ್ಷವಾಗಿದ್ದಾಗಲೇ ರಾಜಮ್ಮನವರು ಕಾವ್ಯ ವಾಚನ ಕಲೆಯನ್ನು ಗೌರೀ ದೇವುಡು ಶಾಸ್ತ್ರಿಗಳಲ್ಲಿ ಅಭ್ಯಾಸ ಮಾಡಿದರು. ಸುಬ್ರಹ್ಮಣ್ಯನವರಾದರೋ ತಮ್ಮ ಗುರುಗಳಾಗಿದ್ದ ದೇವುಡು ನರಸಿಂಹಯ್ಯನವರ ಸೇವೆಯನ್ನು ಸತತ 14 ವರ್ಷಗಳ ಕಾಲ ಮಾಡಿ ಅವರ ಅನುಗ್ರಹವನ್ನು ಸಂಪಾದಿಸಿದ್ದರು. ಗುರುಗಳು ದೈವಾಧೀನರಾದ ನಂತರ ಸುಬ್ರಹ್ಮಣ್ಯ ಅವರು ತಮ್ಮ ಗುರುಗಳು ಪ್ರವಚನ, ವಾಚನಗಳನ್ನು ಮಾಡುತ್ತಿದ್ದ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬಂದರು. ದೇವುಡು ಶಾಸ್ತ್ರಿಗಳ ಶಿಷ್ಯರುಗಳ ಪೈಕಿ ಬೂದಿಗುಪ್ಪೆಯ ಕೆ.ಎನ್.ಬಸವಾರಾಧ್ಯ ಮತ್ತು ಕೆ.ಎಸ್.ವೆಂಕಟೇಶಯ್ಯನವರೂ ಇದ್ದರು. ವೆಂಕಟೇಶಯ್ಯನವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಉಪಾಧ್ಯಾಯರಾಗಿದ್ದ ದೇವುಡು ಶಾಸ್ತ್ರಿಗಳು ಕಾವ್ಯವಾಚನ ಮಾಡುತ್ತಿದ್ದುದನ್ನು ಕೇಳಿ ಸ್ಫೂರ್ತಿಗೊಂಡವರು. ದೇವುಡು ಅವರ ಗಮಕ ಕಲೆಯಿಂದ ಪ್ರಭಾವಿತರಾಗಿ ಮುಂದೆ ಬೆಳೆದ ಗಮಕಿಗಳಲ್ಲಿ ಎಂ.ರಾಘವೇಂದ್ರರಾವ್ ಕೂಡ ಸೇರಿದ್ದರು.

ದೇವುಡು ಶಾಸ್ತ್ರಿಗಳು ಸಿನಿಮಾದತ್ತಲೂ ವಾಲಿರುವುದು ಕಂಡುಬರುತ್ತದೆ. ಪ್ರಸಿದ್ಧ ನಟ–ನಾಟಕಕಾರ ಗುಬ್ಬಿ ವೀರಣ್ಣನವರು 1929ರಲ್ಲಿ ಗೌರೀ ದೇವುಡು ಶಾಸ್ತ್ರಿಗಳ ಸಹಕಾರದಿಂದ ಕರ್ನಾಟಕ ಪಿಕ್ಚರ್ಸ್ ಪ್ರೊಡಕ್ಷನ್ಸ್ ಸಂಸ್ಥೆ ಸ್ಥಾಪಿಸಿದರೆನ್ನಲಾಗಿದೆ. ಪ್ರಾರಂಭದ ವರ್ಷಗಳಲ್ಲಿ ಈ ಸಂಸ್ಥೆ ಎರಡು–ಮೂರು ಮೂಕೀ ಚಲನಚಿತ್ರಗಳನ್ನು ತಯಾರಿಸಿತು ನಂತರ 1935ರಲ್ಲಿ ಗುಬ್ಬಿ ವೀರಣ್ಣನವರು ಈ ಸಂಸ್ಥೆಯ ಅಡಿಯಲ್ಲಿ ಮೊದಲ ಚಲನಚಿತ್ರ 'ಸದಾರಮೆ'ಯನ್ನು ತಯಾರಿಸಿದರು. ಈ ಚಲನಚಿತ್ರದ ಚಿತ್ರಕಥೆಯನ್ನು ದೇವುಡು ನರಸಿಂಹ ಶಾಸ್ತ್ರಿಗಳು ಬರೆದಿದ್ದಾರೆ. 'ಸದಾರಮೆ'ಯನ್ನು ಈ ಮುಂಚೆ ನಾಟಕವನ್ನಾಗಿ ಅಭಿನಯಿಸಲಾಗುತ್ತಿತ್ತು. ಸಾಹಿತ್ಯ ಮತ್ತು ಗಮಕ ಕಲೆಗಳಿಗಾಗಿ ಸುಮಾರು 35 ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿ ಗೌರೀ ದೇವುಡು ನರಸಿಂಹ ಶಾಸ್ತ್ರಿಗಳು 1933ನೇ ಆಗಸ್ಟ್ ತಿಂಗಳಲ್ಲಿ ತಮ್ಮ 55ನೇ ವಯಸ್ಸಿನಲ್ಲಿ ಕಾಲವಾದರು.

ಗೌರೀ ನರಸಿಂಹಯ್ಯನವರ ಪತ್ನಿ ಗೌರಮ್ಮ (1895–1959). ಇವರು ಗರಳಪುರಿಶಾಸ್ತ್ರಿ–ಭಾಗೀರಥಮ್ಮ ದಂಪತಿಗಳ ಕೊನೆಯ ಪುತ್ರಿ. ದೇವುಡು ಶಾಸ್ತ್ರಿ–ಗೌರಮ್ಮನವರಿಗೆ ಇಬ್ಬರು ಮಕ್ಕಳು, ಪುತ್ರ ಜಿ. ನರಸಿಂಹಮೂರ್ತಿ ಮತ್ತು ಪುತ್ರಿ ಸುಂದರಮ್ಮ. ಸುಂದರಮ್ಮ ಟಿ.ನರಸೀಪುರದ ಎಂ.ಸುಬ್ಬರಾವ್ ಅವರ ಪತ್ನಿ. ಸುಬ್ಬರಾವ್ ಟಿ.ನರಸೀಪುರದ ಬಳಿ ಒಂದು ಅಕ್ಕಿ ಗಿರಣಿಯನ್ನು ಹೊಂದಿದ್ದು ಅವರನ್ನು 'ಮಿಲ್ ಸುಬ್ಬರಾವ್' ಎಂದೇ ಕರೆಯಲಾಗುತ್ತಿತ್ತು. ಇವರ ಪುತ್ರರೇ ಮೈಸೂರಿನಲ್ಲಿ ನ್ಯೂರೋಸರ್ಜನ್ ಹಾಗೂ ಹಿಂದೂಸ್ತಾನಿ ಸಂಗೀತಗಾರರಾಗಿರುವ ಡಾ. ಎಂ. ಭಾಸ್ಕರ್. ಸುಂದರಮ್ಮ–ಸುಬ್ಬರಾವ್ ಅವರ ಪುತ್ರಿಯರ ಪೈಕಿ ಬೆಂಗಳೂರಿನ ಕನಕ ಮೂರ್ತಿ ಒಬ್ಬರು. ಕನಕ ಮೂರ್ತಿ ಪ್ರಸಿದ್ಧ ಶಿಲ್ಪ ಕಲಾವಿದೆಯಾಗಿ ಖ್ಯಾತಿ ಗಳಿಸಿದ್ದರು.

ವಾರಭವಿಷ್ಯ



13.10.2024ರಿಂದ 19.10.2024
ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕನ್ಯಾ, ತುಲಾ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ಮಿಥುನ, ಗುರು–ವೃಷಭ, ಶುಕ್ರ–ವೃಶ್ಚಿಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು ಕನ್ಯಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ: ವಾರದಾರಂಭಕ್ಕೆ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಸಾಮಾಜಿಕ ಗೌರವ ದೊರೆಯುವುದು. ವ್ಯಾಪಾರ, ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡುಬರುವುದು ಹಾಗೂ ನಿರೀಕ್ಷೆಗೂ ಮೀರಿ ಧನಲಾಭವಾಗುವುದು. ವ್ಯಯಸ್ಥಿತ ರಾಹುವಿನಿಂದ ಆರೋಗ್ಯ ಸಮರ್ಪಕವಾಗಿರದೆ ವೈದ್ಯರ ದರ್ಶನ ಅನಿವಾರ್ಯ ಎನಿಸುವುದು. ಸ್ತ್ರೀಯರಿಗೆ ರಕ್ತ ಸಂಬಂಧಿ ದೋಷ. **ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ–1**

ವೃಷಭ: ನೀವು ಅಂದುಕೊಂಡದ್ದೇ ಒಂದು, ಈಗ ಆಗುತ್ತಿರುವುದೇ ಮತ್ತೊಂದು. ವ್ಯಾಪಾರ, ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು. 'ಮಾತೇ ಮುತ್ತು' ತೂಕವಾಗಿ ಮಾತನಾಡಿ. ನಿಮಗೀಗ ಕವಲು ದಾರಿಯಲ್ಲಿ ನಿಂತಂತೆ ಭಾಸವಾಗುತ್ತಿದೆ. ಗುರು ಹಿರಿಯರೊಬ್ಬರ ಮಾರ್ಗದರ್ಶನದ ಅಗತ್ಯವಿದೆ. ವಾರದ ಕಡೆಗೆ ಕೆಲವೊಂದು ಸಂತೋಷ ತರುವ ಘಟನೆಗಳು ನಡೆಯಲಿದೆ.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–5

ಮಿಥುನ: ವಾರದ ಆದಿಗೆ ಕಾಗದ ಪತ್ರ ಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಧನಲಾಭವಾಗುವುದು. ಸಾಫ್ಟ್‌ವೇರ್ ಮಂದಿಗೆ ವೃತ್ತಿ, ಸಂಸ್ಥೆ ಬದಲಾವಣೆಯಿಂದ ಆದಾಯ ಹೆಚ್ಚಾಗುವುದು. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಕಳ್ಳಕಾಕರಿಂದ ಜಾಗೃತರಾಗಿರಿ. ಭುಜ ನೋವು ಕಾಡುವುದು.
ಶ್ರೀ ಸತ್ಯನಾರಾಯಣ ಕಥೆ ಓದಿ. ಶುಭ ಸಂಖ್ಯೆ–6

ಕಟಕ: ವೈಯಕ್ತಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಜನಾದರ ಗಳಿಸುವಿರಿ. ಮಾತು ಬಲ್ಲವ ಮಾಣಿಕ್ಯ ತಂದ ಎಂಬಂತೆ ಉತ್ತಮ ಮಾತಿನಿಂದ ಶುಭ ಫಲ ನಿಮ್ಮದಾಗಲಿದೆ. ತಾಮ್ರ, ಹಿತ್ತಾಳೆ ವ್ಯಾಪಾರಿಗಳಿಗೆ ಸಡನ್ ನಷ್ಟ ಉಂಟಾಗಬಹುದು. ವಾಹನ ಚಲಿಸುವಾಗ ಅತೀ ಸಾಹಸದಿಂದ ದೊಡ್ಡ ಅನಾಹುತ ಉಂಟಾದೀತು. ನಿಮ್ಮ ಬುದ್ಧಿ ನಿಮ್ಮ ಕೈಯ್ಯಲ್ಲಿರಲಿ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–9

ಸಿಂಹ: ವಾರದ ಆರಂಭಕ್ಕೆ ಸುವರ್ಣ, ರಜತ ಪದಾರ್ಥಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ವ್ಯಾಪಾರ–ವ್ಯವಹಾರಗಳು ಉತ್ತಮ ರೀತಿಯಲ್ಲಿ ಸಾಗುವುದು. ಸಪ್ತಮ ಸ್ಥಿತ ಶನಿಯಿಂದ ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ ಉಂಟಾಗುವುದು. ಕೃಷಿಯಲ್ಲಿ ಹಾಕಿದ ಬಂಡವಾಳ ಕೈಗೆ ಬರದು. ಮಾರಕ ಸ್ಥಾನದಲ್ಲಿ ರಾಹು–ಕೇತುಗಳ ಸಂಯೋಜನೆ ಇದ್ದು ಡ್ರೈವಿಂಗ್‌ನಲ್ಲಿ ಆತುರ ಬೇಡ. **ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–2**

ಕನ್ಯಾ: ನಂಬಿಕಸ್ಥ ಹಿರಿಯ ವ್ಯಕ್ತಿಯಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಸ್ವಂತ ಹಾಗೂ ಸಾಮಾಜಿಕ ಸ್ಥರಗಳಲ್ಲಿ ಉಂಟಾಗಿದ್ದ ಸಮಸ್ಯೆಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಮಾಯ ವಾಗುವುದು. ಹೊಸ ಬಂಡವಾಳ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ವಾರದ ಕಡೆಗೆ ಸತಿ ಪತಿಯರಲ್ಲಿ ಅನುಮಾನಗಳು ಮೂಡುವುದು. ದುಡುಕದೇ ತಾಳ್ಮೆಯಿಂದ ನಡೆದುಕೊಳ್ಳಿ.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–3

ತುಲಾ: ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಐಷಾರಾಮಿ ವಸ್ತು ವ್ಯಾಪಾರಿಗಳಿಗೆ ದೊಡ್ಡ ಆರ್ಡರ್ ದೊರೆಯುವುದು. ಪೂರ್ವ ಸಿದ್ಧತೆ ಇಲ್ಲದೆ ಯಾವ ಕೆಲಸವನ್ನೂ ಪ್ರಾರಂಭಿಸಬೇಡಿ. ನಿಮ್ಮ ಬದುಕಿಗೆ ತಿರುವು ನೀಡಲು ಗುರು ಹಿರಿಯರೊಬ್ಬರ ಮಾರ್ಗದರ್ಶನದ ಅಗತ್ಯವಿದೆ. ವಾರದ ಕಡೆಗೆ ಹೊಸ ಮಿತ್ರರ ಪರಿಚಯದಿಂದ ಅನುಕೂಲ. ಶ್ವಾಸ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ತ್ರಿಪುರ ಸುಂದರೀ ದರ್ಶನ. ಶುಭ ಸಂಖ್ಯೆ–4

ವೃಶ್ಚಿಕ: ವಾರದ ಆದಿಗೆ ಕೃಷಿಕರಿಗೆ ಉತ್ತಮ ಮಳೆಯ ಫಲವಾಗಿ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು. ಕೃಷಿ ಉಪಕರಣ, ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ವರಮಾನದಲ್ಲಿ ಹೆಚ್ಚಳ. ಮಗನಿಗೆ ನೌಕರಿ ಲಾಭ, ಹಲವರಿಗೆ ಪದೋನ್ನತಿಯೂ ಉಂಟು. ಹೊಸ ಆದಾಯ ಮೂಲಗಳೂ ಗೋಚರವಾಗಲಿದೆ. ವಾರಾಂತ್ಯಕ್ಕೆ ಯಾತ್ರಾ ಸ್ಥಳಗಳಿಗೆ ಸಂಸಾರ ಸಮೇತ ಭೇಟಿಯಿಂದ ಧನ್ಯತಾಭಾವ. **ಶ್ರೀರಾಮಾಷ್ಟಕ ಪಠಿಸಿ. ಶುಭ ಸಂಖ್ಯೆ–7**

ಧನುಸ್ಸು: ವಾರದ ಪೂರ್ವಾರ್ಧಕ್ಕೆ ನಿಮ್ಮ ಕಾರ್ಯ ಕುಶಲತೆಯಿಂದ ಪ್ರಯತ್ನ ಕಾರ್ಯಗಳು ಯಶಸ್ವಿಯಾಗುವುದು. ಪುಸ್ತಕ ಪ್ರಕಾಶಕರಿಗೆ, ಮುದ್ರಣ ಸಂಸ್ಥೆಗಳಿಗೆ ಉತ್ತಮ ಆದಾಯ. ವನಿತಾಮಣಿಯರು ಪ್ರಸಾದನ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ವೃತ್ತಿ ಸ್ಥಳದಲ್ಲಿ ಸಹೋದ್ಯೋಗಿಗಳ ಅಸಹಕಾರ. ಮುಖ್ಯ ಕೆಲಸಗಳಿಗೆ ಅನುಭವಿಗಳ ಸಲಹೆ ಪಡೆಯಿರಿ. **ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ–8**

ಮಕರ: ಸಪ್ತಾಹದ ಆದಿಗೆ ಹಳೆಯ ಗೆಳೆಯರ ಮಿಲನದಿಂದ ಸಂತಸ. ಮನೆ ಅತಿಥಿ, ಅಭ್ಯಾಗತರ ಆಗಮನ, ಅವರ ಸತ್ಕಾರ, ಉಪಚಾರಕ್ಕೆ ಹಣ ಖರ್ಚಾಗುವುದು. ಸರಾಫ್ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರದಿಂದ ಹೆಚ್ಚಿನ ಧನಲಾಭ. ವಿವಾಹ ಯೋಗ್ಯರಿಗೆ ಅರುಂಧತಿ ನಕ್ಷತ್ರ ದರ್ಶನ ಯೋಗ. ಸ್ತ್ರೀಯರಿಗೆ ರಕ್ತದೋಷದಿಂದ ವೈದ್ಯರ ಭೇಟಿ ಅನಿವಾರ್ಯವಾದೀತು.
ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ–6

ಕುಂಭ: ಈ ವಾರದಲ್ಲಿ ಚಂದ್ರ ಸಂಚಾರ ಶುಭವಿದೆ. ಇದರ ಪರಿಣಾಮವಾಗಿ ಕೈಗೊಂಡ ಮಹತ್ವದ ಕೆಲಸಗಳಲ್ಲಿ ಯಶಸ್ಸು ನಿಮ್ಮ ಪಾಲಿಗಿದೆ. ಬಂಗಾರ, ರಜತ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಹಿಂದೆ ಮಾಡಿದ್ದ ಪುಣ್ಯ ಕಾರ್ಯಗಳು ಈಗ ಫಲಿಸಲಿದೆ. ಪ್ರಸಾದನ ಹಾಗೂ ಮನೋರಂಜನಾ ವೆಚ್ಚಗಳು ಪರ್ಸ್‌ಗೆ ಭಾರವೆನಿಸಲಿದೆ. ಸಂಸಾರ ಸಂತೋಷವಾಗಿ ಸಾಗಲು ಹೊಂದಾಣಿಕೆ ಮುಖ್ಯ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–2

ಮೀನ: ಉದ್ಯೋಗದಲ್ಲಿ, ಸ್ಥಾನಮಾನದಲ್ಲಿ ಬಡ್ತಿ. ಉತ್ತಮರ ಸಹವಾಸದಿಂದ ಸಮಾಜದಲ್ಲಿ ಮಾನ್ಯತೆ ಕಟ್ಟಡ ಗುತ್ತಿಗೆದಾರರಿಗೆ ಬೃಹತ್ ಯೋಜನೆಗಳು ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ. ಸಿಮೆಂಟು, ಕಬ್ಬಿಣ ವ್ಯಾಪಾರಿಗಳಿಗೆ ಹೆಚ್ಚಿನ ಲಾಭಾಂಶ. ಆಸ್ತಿ ವಿಚಾರದಲ್ಲಿ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಜಾಗೃತರಾಗಿರಿ. ಸಹಿ ಹಾಕುವಾಗ ಎಚ್ಚರಿಕೆ ಇರಲಿ.
ಶ್ರೀ ಗಾಯತ್ರಿ ಮಂತ್ರ ಜಪಿಸಿ. ಶುಭ ಸಂಖ್ಯೆ–9

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಮಸ್ಯೆ ಸಮಸ್ಯೆಯಾಗಿ ಉಳಿಸಿಕೊಳ್ಳುವ ಕಾಮಗಾರಿ!

ಮೈಸೂರು ಖಾಸಗಿ ಬಸ್ ನಿಲ್ದಾಣದ ಬಳಿಯಲ್ಲೊಂದು ವ್ಯರ್ಥ ಚರಂಡಿ ನಿರ್ಮಾಣ; ರಸ್ತೆ ನೀರಿನ ಹೊಂಡ!!



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಮಳೆಯಿಂದ ಹೊಳೆಯಂತಾಗಿರುವುದು.

ಮೈಸೂರು, ಅ.13(ಎಸ್‌ಬಿಡಿ)– ಮೈಸೂರಿನಲ್ಲಿ ಭಾನುವಾರ ಸುರಿದ ಭಾರೀ ಮಳೆ, ಅವೈಜ್ಞಾನಿಕ ಕಾಮಗಾರಿಗಳ ದುಸ್ಥಿತಿಯನ್ನು ಬಯಲಾಗಿಸಿತು.

ಮಳೆ ಬಂದಾಗಲೆಲ್ಲಾ ಚರಂಡಿ ದುಸ್ಥಿತಿಯಿಂದ ಶೇಷಾದ್ರಿ ಅಯ್ಯರ್ ರಸ್ತೆ, ಖಾಸಗಿ ಬಸ್ ನಿಲ್ದಾಣದ ಬಳಿ ಕೆರೆಯಂತಾಗುತ್ತಿದ್ದ ಕಾರಣ ದಸರಾ ಮುನ್ನವಷ್ಟೇ ಹೊಸದಾಗಿ ಮಳೆ ನೀರು ಚರಂಡಿ ನಿರ್ಮಿಸಲಾಗಿದೆ. ಆದರೆ ಇದು ಸಂಬಂಧಿಸಿದ ಗುತ್ತಿಗೆದಾರರಿಗೆ ಅನುಕೂಲಕಾರಿಯಾಗಿ ರಬಹುದು. ಆದರೆ ಜನರಿಗೆ ಯಾವುದೇ ಪ್ರಯೋಜನವಾದಂತಿಲ್ಲ. ಭಾನುವಾರ ಮಧ್ಯಾಹ್ನ ಮುಕ್ಕಾಲು ಗಂಟೆ ಸುರಿದ ಮಳೆಯಿಂದ ಮತ್ತದೇ ದುಸ್ಥಿತಿ ನಿರ್ಮಾಣವಾಗಿತ್ತು. ಮಳೆ ನೀರು ಕೆರೆಯಂತೆ ನಿಂತಿದ್ದರಿಂದ ಆರ್‌ಎಂಸಿ ಜಂಕ್ಷನ್‌ನಿಂದ ಜೆ.ಕೆ.ಮೈದಾನದ ಕಡೆಗೆ ವಾಹನ ಸಂಚಾರಕ್ಕೆ ತೀವ್ರ ಅಡ್ಡಿಯಾಗಿತ್ತು. ಚರಂಡಿಯಲ್ಲೂ ನೀರು ಸರಾಗವಾಗಿ ಹರಿಯದ ಕಾರಣ ರಸ್ತೆಯ ಮುಕ್ಕಾಲು ಭಾಗವನ್ನು ನೀರು ಆವರಿಸಿತ್ತು. ಗಂಟೆಗಳ ನಂತರ ನಿಧಾನವಾಗಿ ನೀರು ಖಾಲಿಯಾಯಿತು.

ರೈಲ್ವೆ ಅಂಡರ್ ಬ್ರಿಡ್ಜ್ ಅಧೋಗತಿ: ಬನ್ನಿಮಂಟಪ–ಬಿ.ಎಂ.ಶ್ರೀನಗರ ರಸ್ತೆಯ ರೈಲ್ವೆ ಕೆಳ ಸೇತುವೆಯ ದುಸ್ಥಿತಿಗೂ ಮುಕ್ತಿ ಸಿಕ್ಕಿಲ್ಲ. ಮಳೆಯಾದಾಗ ಹಳ್ಳದಲ್ಲಿರುವ ಸೇತುವೆ ಅಡಿಗೆ ಎರಡೂ ಕಡೆಯಿಂದ ನೀರು ಹರಿದು ಬಂದು ಮಂಡಿಯುದ್ದಕ್ಕೆ ನೀರು ತುಂಬಿಕೊಳ್ಳುತ್ತದೆ. ಆ ವೇಳೆ ದ್ವಿಚಕ್ರ ವಾಹನ, ಆಟೋ, ಸಣ್ಣ ಕಾರುಗಳ ಸಂಚಾರ ಕಷ್ಟ. ನೀರಿನಲ್ಲೇ ಮುಂದೆ ಸಾಗುವ ಸಾಹಸ ಮಾಡಿದರೆ ಅಪಘಾತಕ್ಕೀಡಾಗುವ ಸಾಧ್ಯತೆ ಹೆಚ್ಚು. ಸ್ಟಾಟರ್ ಪ್ಲಗ್‌ನೊಳಗೆ ನೀರು ತುಂಬಿಕೊಂಡು ಮಧ್ಯದಲ್ಲೇ ವಾಹನ ನಿಂತು, ಸಾಕಷ್ಟು ಮಂದಿ ಪರಿಪಾಟಲು ಅನುಭವಿಸಿದ್ದಾರೆ.

ಇತ್ತೀಚೆಗೆ ತಿಂಗಳುಗಳ ಕಾಲ ರಸ್ತೆ ಸಂಚಾರ ನಿರ್ಬಂಧಿಸಿ, ದುರಸ್ತಿ ಕಾಮಗಾರಿ ನಡೆಸಲಾಗಿತ್ತು. ಮಳೆ ನಿಂತ ನಂತರ ಹಿಂದಿಗಿಂತ ಸ್ವಲ್ಪ ಬೇಗ ನೀರು ಖಾಲಿಯಾಗಬಹುದು. ಆದರೆ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿಲ್ಲ. ಇಲ್ಲಿ ನೀರು ತುಂಬಿಕೊಂಡಾಗ ಬಿ.ಎಂ.ಶ್ರೀನಗರದಿಂದ ಬನ್ನಿಮಂಟಪದ ಕಡೆಗೆ ಹೋಗುವವರು ರಿಂಗ್ ರಸ್ತೆ, ಉನ್ನತಿನಗರದ ಮೂಲಕ ಇಲ್ಲವೇ ಮೇಟಗಳ್ಳಿ, ಬೃಂದಾವನ ಬಡಾವಣೆ, ಯಾದವಗಿರಿ ಮಾರ್ಗವಾಗಿ ಸಾಗಬೇಕು. ಆ ಕಡೆಯಿಂದಲೂ ಹೀಗೆ ಕೊಂಕಣ ಸುತ್ತಿಕೊಂಡು ಬರಬೇಕು ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ನೀರು ಹರಿವಿಲ್ಲ ವ್ಯವಸ್ಥೆ: ಬನ್ನಿಮಂಟಪ ಜೋಡಿ ತೆಂಗಿನಮರ ರಸ್ತೆಯ ದೊಡ್ಡ ಮೋರಿಯ ಬಳಿಯೂ ಇದೇ ರೀತಿಯ ಕೆಟ್ಟ ಪರಿಸ್ಥಿತಿ ಇದೆ. ಸ್ವಲ್ಪ ಮಳೆಯಾದರೂ ಮೋರಿ ಪಕ್ಕದಲ್ಲಿ ಭಾರೀ ಪ್ರಮಾಣದ ನೀರು ನಿಲ್ಲುತ್ತದೆ. ಆ ವೇಳೆ ಹಳ್ಳ-ಕೊಳ್ಳಗಳೂ ಕಾಣುವುದಿಲ್ಲ. ಗೂಡ್ಸ್ ಲಾರಿಗಳಂತಹ ಭಾರೀ ವಾಹನಗಳೇ ಹೆಚ್ಚು ಸಂಚರಿಸುವ ಈ ರಸ್ತೆಯಲ್ಲಿ ಮಳೆ ಬಂದಾಗಲಂತೂ ದ್ವಿಚಕ್ರ ವಾಹನ ಸವಾರರ ಪರಿಪಾಟಲು ಹೇಳತೀರದ್ದಾಗಿದೆ. ಹಾಗೆಯೇ ಹೈವೇ ವೃತ್ತದ ಬಳಿ ಸಯ್ಯಾಜಿ ರಾವ್ ರಸ್ತೆಯಲ್ಲೂ ಮಳೆ ನೀರು ಕೆರೆಯಂತಾಗುತ್ತದೆ. ಆ ವೇಳೆ ವಾಹನಗಳನ್ನು ಬಲಭಾಗದಲ್ಲಿ ಚಾಲಿಸುವುದರಿಂದ ಅಪಘಾತವಾಗುವ ಭೀತಿ ಎದುರಾಗಿದೆ ಹೀಗೆ ರಸ್ತೆಯಿಂದ ಚರಂಡಿಗೆ ನೀರಿನ ಸರಾಗ ಹರಿವಿಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣದಿಂದ ನಗರದ ಹಲವೆಡೆ ಇದೇ ದುಸ್ಥಿತಿ ಉಂಟಾಗುತ್ತದೆ



ಬನ್ನಿಮಂಟಪ–ಬಿ.ಎಂ.ಶ್ರೀನಗರ ರಸ್ತೆಯಲ್ಲಿನ ರೈಲ್ವೆ ಅಂಡರ್ ಬ್ರಿಡ್ಜ್ ದುಸ್ಥಿತಿ.



ಹೈವೇ ವೃತ್ತದ ಬಳಿ ಸಯ್ಯಾಜಿ ರಾವ್ ರಸ್ತೆ ಬದಿಯಲ್ಲಿ ಮಳೆ ನೀರು ನಿಂತಿರುವುದು.

ಎಸ್‌ಬಿಎಂ ಮಂಜುಗೆ ಅಭಿನಂದನೆ...



ಕಾವೇರಿ ಕೊಡಗು ಮಹಿಳಾ ಸಂಘದ ವೃದ್ಧಾಶ್ರಮಕ್ಕೆ ಬಿಸಿನೀರು ಹಾಗೂ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ಕೊಡುಗೆ ನೀಡಿದ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಅವರನ್ನು ಸಂಘದ ಪರವಾಗಿ ಅಭಿನಂದಿಸಲಾಯಿತು. ಈ ವೇಳೆ ಕೊಡಗು ಮಹಿಳಾ ಸಂಘ ವೃದ್ಧಾಶ್ರಮದ ಅಧ್ಯಕ್ಷೆ ಲವ್ಲಿ ಅಪ್ಪಯ್ಯ, ಕಾರ್ಯದರ್ಶಿ ನಿರ್ಮಲ ಸುಬ್ರಹ್ಮಣ್ಯ, ಜಂಟಿ ಕಾರ್ಯದರ್ಶಿ ಜ್ಯೋತಿ ಕಾಶಿ ಅಪ್ಪ, ಕಾವ್ಯ ಕುಟ್ಟಪ್ಪ, ಸುಮಿಗೋಪಾಲ್ ಇನ್ನಿತರ ಸದಸ್ಯರು ಉಪಸ್ಥಿತರಿದ್ದರು

ಅ.17ರಂದು ಬಿಬಿಎಂಪಿಯಿಂದ 'ನಾಯಿಗಳ ಹಬ್ಬ'

ಬೆಂಗಳೂರು, ಅ.13– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇದೇ ಅಕ್ಟೋಬರ್ 17 ರಂದು 'ಕುಕುರ್ ತಿಹಾರ್' ಎಂದು ಕರೆಯಲ್ಪಡುವ 'ನಾಯಿಗಳ ಹಬ್ಬ'ವನ್ನು ಆಚರಿಸಲಿದೆ. ಈ ವಿಶಿಷ್ಟ ಕಾರ್ಯಕ್ರಮವು ನಗರದಾದ್ಯಂತ ವಸತಿ ಕಲ್ಯಾಣ ಸಂಘಗಳು ಮತ್ತು ಪ್ರಾಣಿ ಪಾಲಕರನ್ನು ಒಟ್ಟಿಗೆ ಸೇರಿಸುತ್ತದೆ. ಮನುಷ್ಯರು ಮತ್ತು ಪ್ರಾಣಿಗಳ ನಡುವಿನ ಪ್ರೀತಿ ಮತ್ತು ಬಂಧವನ್ನು ಎತ್ತಿ ತೋರಿಸುವ ಕಾರ್ಯಕ್ರಮ ಇದಾಗಿದೆ

ಅದೇ ದಿನ, ಬಿಬಿಎಂಪಿಯು ನಾಲ್ಕು ವಾರ್ಡ್‌ಗಳಿಂದ ಪೌರಕಾರ್ಮಿಕರನ್ನು ನೇಮಿಸುವ ಮೂಲಕ ಪ್ರಾಯೋಗಿಕ ಫೀಡಿಂಗ್ ಉಪಕ್ರಮವನ್ನು ಪ್ರಾರಂಭಿಸುತ್ತದೆ. ಪ್ರದೇಶದ ರೆಸ್ಟೋರೆಂಟ್‌ಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಸಮುದಾಯ ನಾಯಿಗಳಿಗೆ ಆಹಾರ ನೀಡಲು ಸಹಾಯ ಮಾಡುತ್ತದೆ

ಬಿಬಿಎಂಪಿ ಆರೋಗ್ಯ ಇಲಾಖೆಯ ವಿಶೇಷ ಆಯುಕ್ತ ಸುರಲ್ಕರ್ ವಿಕಾಸ್ ಕಿಶೋರ್ ಮಾತನಾಡಿ, ಸಮಾಜದಲ್ಲಿ ಪರಿಸರ ಸಮತೋಲನ ಕಾಪಾಡಲು ಪ್ರಾಣಿಗಳೊಂದಿಗೆ ಸಾಮರಸ್ಯದ ಸಹಬಾಳ್ವೆಯ ಮಹತ್ವವನ್ನು ಒತ್ತಿ ಹೇಳಿದರು. ಪ್ರಾಣಿಗಳ ಜನನ ನಿಯಂತ್ರಣ ಮತ್ತು ವ್ಯಾಕ್ಸಿನೇಷನ್‌ಗಳ ಹೊರತಾಗಿ, ಪ್ರಾಣಿಗಳ ನಡವಳಿಕೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಪ್ರಕೃತಿಯು ಅವುಗಳನ್ನು ಸೃಷ್ಟಿಸಿದ ರೀತಿಯಲ್ಲಿ ಅವುಗಳನ್ನು ಸ್ವೀಕರಿಸುವುದು ನಿರ್ಣಾಯಕವಾಗಿದೆ ಎಂದು ಹೇಳಿದರು.

ಸಹವರ್ತಿನ್ ಅನಿಮಲ್ ವೆಲ್ಫೇರ್ ಟ್ರಸ್ಟ್ ಜೊತೆಗೆ BBMP ಪಶುಸಂಗೋಪನೆ ಇಲಾಖೆ ಮತ್ತು ಇತರ ಪಾಲುದಾರರು 'BITEFREELOCALITY' ಕಾರ್ಯಕ್ರಮದ ಅಡಿಯಲ್ಲಿ ಅನೇಕ ಉಪಕ್ರಮಗಳನ್ನು ಪರಿಚಯಿಸಲು ಉದ್ದೇಶಿಸಿದ್ದಾರೆ. ಈ ಉಪಕ್ರಮವು ಪ್ರಾಣಿಗಳಿಗೆ ಮಾನವೀಯ ವಾತಾವರಣವನ್ನು ನಿರ್ಮಿಸುವಲ್ಲಿ ಒಟ್ಟಾಗಿ ಕೆಲಸ ಮಾಡುವ ಸಂಬಂಧಿತ ಸಹಾನುಭೂತಿಯ ಜನರ ಗುಂಪಿನ ಸಂಪರ್ಕ ಹೊಂದುವ ಉದ್ದೇಶ ಹೊಂದಿದೆ.

ವಿಶ್ವವಿಖ್ಯಾತ ದಸರಾ ಕುರಿತು ಆಲ್ಬಂ ಸಾಂಗ್ ಬಿಡುಗಡೆ



ಮೈಸೂರು, ಅ.13– ವಿಶ್ವವಿಖ್ಯಾತ ಮೈಸೂರು ದಸರಾ ಕುರಿತು ಮಾದೇಶ್ ಮೈಸೂರು ಅವರು ಹಾಡಿರುವ ಆಲ್ಬಂ ಸಾಂಗ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ಖ್ಯಾತ ಜಾನಪದ ಗಾಯಕ ಲಕ್ಷ್ಮೀರಾಂ ನಾಡಪ್ಪನಹಳ್ಳಿ ಗೀತೆಯನ್ನು ರಚಿಸಿದ್ದಾರೆ. ಮಾದೇಶ್ ಮೈಸೂರು ಸಂಗೀತ ಸಂಯೋಜನೆ ಮಾಡಿದ್ದಾರೆ. ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಕೊಡಗು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಕಾವೇರಿ ಪ್ರಕಾಶ್, ಗಾಯಕರಾದ ಲಕ್ಷ್ಮೀರಾಂ, ಮಾದೇಶ್, ಸೋಮು ಕೆಲ್ಲಹಳ್ಳಿ, ತ್ಯಾಗರಾಜ್ ದೇವರಹಳ್ಳಿ ಮೊದಲಾದವರು ಇದ್ದರು.

ಗುಜರಾತ್‌ನಲ್ಲಿ 5000 ಕೋಟಿ ಮೌಲ್ಯದ ಕೊಕೇನ್ ವಶ

ನವದೆಹಲಿ: ದೆಹಲಿ ಪೊಲೀಸರು ಮತ್ತು ಗುಜರಾತ್ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇಂದು(ಭಾನುವಾರ) ಗುಜರಾತ್‌ನ ಅಂಕಲೇಶ್ವರದಲ್ಲಿ 5,000 ಕೋಟಿ ಮೌಲ್ಯದ 518 ಕೆಜಿ ಕೊಕೇನ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಈ ಮೂಲಕ, 15 ದಿನಗಳಲ್ಲಿ ದೆಹಲಿ ಮತ್ತು ಗುಜರಾತ್‌ನಲ್ಲಿ ಕಾನೂನು ಜಾರಿ ಸಂಸ್ಥೆಗಳು ಒಟ್ಟು 13,000 ಕೋಟಿ ಮೌಲ್ಯದ 1,289 ಕೆಜಿ ಕೊಕೇನ್ ಮತ್ತು 40 ಕೆಜಿಯಷ್ಟು ಹೈಡ್ರೋಪೋನಿಕ್ ಥಾಯ್ಲೆಂಡ್ ಗಾಂಜಾವನ್ನು ವಶಪಡಿಸಿಕೊಂಡಿವೆ ಎಂದು ಮೂಲಗಳು ತಿಳಿಸಿವೆ.



ದೆಹಲಿ ಪೊಲೀಸರ ವಿಶೇಷ ದಳ ಮತ್ತು ಗುಜರಾತ್ ಪೊಲೀಸರು ಅಂಕಲೇಶ್ವರದ ಔಷಧ ಕಂಪನಿಯೊಂದರಲ್ಲಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ 518 ಕೆಜಿಯಷ್ಟು ಕೊಕೇನ್ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ವಶಪಡಿಸಿಕೊಂಡ ಕೊಕೇನ್‌ನ ಮೌಲ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು 5,000 ಕೋಟಿ ಎಂದು ಮೂಲಗಳು ತಿಳಿಸಿವೆ.

ಅಕ್ಟೋಬರ್ 1ರಂದು ದೆಹಲಿಯ ಮಹಿಪಾಲ್ ಪುರದಲ್ಲಿರುವ ಗೋದಾಮಿನ ಮೇಲೆ ವಿಶೇಷ ತನಿಖಾ ತಂಡವು ದಾಳಿ ನಡೆಸಿ 562 ಕೆಜಿ ಕೊಕೇನ್ ಮತ್ತು 40 ಕೆಜಿ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಂಡಿತ್ತು. ತನಿಖೆ ಮುಂದುವರಿದಂತೆ ಅಕ್ಟೋಬರ್ 10ರಂದು ದೆಹಲಿಯ ರಮೇಶ್ ನಗರದಲ್ಲಿನ ಅಂಗಡಿಯೊಂದರಿಂದ ಸುಮಾರು 208 ಕೆಜಿ ಕೊಕೇನ್ ಅನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಮಾದಕ ವಸ್ತು ಅಂಕಲೇಶ್ವರ ಮೂಲದ ಫಾರ್ಮಾಸ್ಯುಟಿಕಲ್ ಸಂಸ್ಥೆಯಿಂದ ಸರಬರಾಜಾಗಿದ್ದನ್ನು ಪೊಲೀಸರು ಪತ್ತೆ ಮಾಡಿದ್ದರು.

ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಅಂಗವಾಗಿ ಪಲ್ಲಕ್ಕಿ ಉತ್ಸವ



ಭಾರತೀನಗರದ ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಜಯ ದಶಮಿ ಅಂಗವಾಗಿ ಮದ್ದೂರು-ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರುಗಿತು.

ಭಾರತೀನಗರ,ಅ.13– ಭಾರತೀನಗರದ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಜಯ ದಶಮಿ ಅಂಗವಾಗಿ ಶ್ರೀ ವೆಂಕಟೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರುಗಿತು.

ಶ್ರೀವೆಂಕಟೇಶ್ವರ ಸೇವಾ ಟ್ರಸ್ಟ್ ವತಿಯಿಂದ ಶ್ರೀವೆಂಕಟೇಶ್ವರ ದೇವಾಲಯದಲ್ಲಿ ವಿಜಯ ದಶಮಿ ಅಂಗವಾಗಿ ಪಲ್ಲಕ್ಕಿ ಉತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀವೆಂಕಟೇಶ್ವರಸ್ವಾಮಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು. ಮೊದಲು ಉತ್ಸವ ಮೂರ್ತಿಯನ್ನು ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸಿ ನಂತರ ದೇವಸ್ಥಾನದ ಬಳಿ ಇರುವ ಅರಳಿ ಮರ ಮತ್ತು ಬನ್ನಿಗಿಡಕ್ಕೆ ಪೂಜೆಸಲ್ಲಿಸಿ ಉತ್ಸವ ಮೂರ್ತಿಗೆ ಜೈಕಾರ ಹಾಕಿದರು. ಉತ್ಸವ ಮೂರ್ತಿಯನ್ನು ಮದ್ದೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ಮಹಿಳೆಯರು ಮಂಗಳಾರತಿ ನೀಡಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಟಾಕಿ ಸಿಡಿಸಿ ಭಕ್ತಾದಿಗಳು ಸಂಭ್ರಮಿಸಿದರು.

ಭಾರೀ ಮಳೆಯಿಂದ ಸೇತುವೆ ಕೆಳಗೆ ನಿಂತ ನೀರು



ನಾಗಮಂಗಲ,ಅ.13– ನಾಗಮಂಗಲ ತಾಲೂಕಿನ ಬೆಳ್ಳೂರು ಪಟ್ಟಣಕ್ಕೆ ಹೋಗುವ ಮಾರ್ಗ ಮಧ್ಯೆ ರೈಲ್ವೆ ಸೇತುವೆ ಕೆಳಭಾಗದಲ್ಲಿ ಭಾರೀ ಮಳೆಯ ಕಾರಣ ಮಳೆ ನೀರು ನುಗ್ಗಿ ಸಾರ್ವಜನಿಕರು ತಿರುಗಾಡಲು ಪರದಾಟವಾಗಿದೆ. ನಾಗಮಂಗಲ ತಾಲೂಕಿನ ಬೆಳ್ಳೂರು ಸಮೀಪ ಉಮರ್ ನಗರದ ಬಳಿ ಇರುವ ರೈಲ್ವೆ ಮೇಲ್ ಸೇತುವೆ ಕೆಳಭಾಗದಲ್ಲಿ ಮಳೆ ನೀರು ಹೋಗಲು ಯಾವುದೇ ಚರಂಡಿ ವ್ಯವಸ್ಥೆ ಮಾಡದಿರುವುದರಿಂದ ಈ ಸಮಸ್ಯೆ ತಲೆದೋರಿದೆ. ರೈಲ್ವೆ ಬ್ರಿಡ್ಜ್ ಕಾಮಗಾರಿ ನಡೆಯುವ ಸಂದರ್ಭದಲ್ಲಿ ನೀರು ಹೋಗಲು ವ್ಯವಸ್ಥೆ ಮಾಡದೆ ಇರುವುದು ಈ ಅವ್ಯವಸ್ಥೆಗೆ ಕಾರಣವಾಗಿದೆ.

ನಾಗಮಂಗಲ ಮಾರ್ಗವಾಗಿ ಬೆಳ್ಳೂರು ಪಟ್ಟಣ ಶ್ರೀಕ್ಷೇತ್ರ ಆದಿಚುಂಚನಗಿರಿಗೆ ಪ್ರಯಾಣಿಕರು ಹೋಗಬೇಕಾದರೆ ಬೆಳ್ಳೂರು ಕ್ರಾಸ್, ಬೆಳ್ಳೂರು ನಡುವೆ ಸಾಗಿದರೆ ಉಮರ್ ನಗರದ ಬಳಿ ರೈಲ್ವೆ ಸೇತುವೆ ಕೆಳಭಾಗದಲ್ಲಿ ರಾತ್ರಿ ಸುರಿದ ಭಾರಿ ಮಳೆಯಿಂದ ಅತಿ ಹೆಚ್ಚು ನೀರು ಹರಿಯುತ್ತಿದ್ದು ಸಂಚಾರಕ್ಕೆ ಅಡಚಣೆಯಾಗುತ್ತಿದೆ.

ತಡರಾತ್ರಿ ಚಲುವನಾರಾಯಣನಿಗೆ ಬನ್ನೀ ಪೂಜೆ

ದೀಪದ ವ್ಯವಸ್ಥೆ ಇಲ್ಲದೆ ಪರದಾಟ, ಭಕ್ತರ ಕಾರಿನ ಲೈಟಿನ ಬೆಳಕೇ ಆಧಾರ





ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ವಿಜಯದಶಮಿ ಅಂಗವಾಗಿ ಕುದುರೆ ವಾಹನೋತ್ಸವ ನೆರವೇರಿತು. ತಡರಾತ್ರಿ ಕಲ್ಯಾಣನಾಯಕಿ ಅಮ್ಮನವರಿಗೆ ದೊಡ್ಡಶೇಷವಾಹನೋತ್ಸವ ನೆರವೇರಿದನ್ನು ಬಲ ಚಿತ್ರದಲ್ಲಿ ಕಾಣಬಹುದು.

ಮೇಲುಕೋಟೆ: ಸರಿಯಾದ ಬೆಳಕಿನ ವ್ಯವಸ್ಥೆ ಇಲ್ಲದೆ ಭಕ್ತರ ಕಾರಿನ ಲೈಟಿನ ಸಹಾಯದಿಂದ ಚೆಲುವನಾರಾಯಣ ಸ್ವಾಮಿಗೆ ಬನ್ನೀ ಪೂಜೆ ನೆರವೇರಿಸಲಾಯಿತು. ರಾತ್ರಿ 12ಕ್ಕೆ ಕತ್ತಲೆಯಲ್ಲೇ ನಡೆದ ವಿಜಯದಶಮಿ ವಿಜಯೋತ್ಸವ ರಾತ್ರಿ 12.30ರವರೆಗೆ ನೆರವೇರಿತು.

ಬನ್ನೀಮಂಟಪದ ಬಳಿ ಲೋಕಕಲ್ಯಾಣಾರ್ಥವಾಗಿ ದಶ ದಿಕ್ಕುಗಳಿಗೆ ಬಾಣ ಪ್ರಯೋಗ ಮಾಡಿ ಗೌರವ ಸಲ್ಲಿಸಿದ ನಂತರ ಸ್ವಾಮಿಯ ವಿಜಯೋತ್ಸವ ಮೆರವಣಿಗೆ ಮೇಲುಕೋಟೆಯತ್ತ ಸಾಗಿತು. ಅಂಗಡಿ ಬೀದಿ ವೃತ್ತದಲ್ಲಿ ಕಲ್ಯಾಣ ನಾಯಕಿ ಅಮ್ಮನವರ ಶೇಷವಾಹನೋತ್ಸವ ಎದುರುಗೊಂಡ ನಂತರ ನಾಲ್ಕೂ ಬೀದಿಗಳಲ್ಲಿ ಉತ್ಸವ ನೆರವೇರಿತು.

ಅತ್ಯಂತ ಅದ್ವಾನವಾಗಿ ನಿರ್ಲಕ್ಷ್ಯದಿಂದ ನಡೆದ ಕುದುರೆ ವಾಹನೋತ್ಸವದಲ್ಲಿ ಬೆರಳೆಣಿಕೆಯಲ್ಲಿ ಭಕ್ತರು ಭಾಗವಹಿಸಿದ್ದರು. ಒಂದೆಡೆ ಚೆಲುವನಾರಾಯಣನಿಗೆ ಆಕರ್ಷಕ ಪುಷ್ಪ ಹಾರವಿಲ್ಲದೆ ಜನರೇಟರ್ ದೀಪದ ವ್ಯವಸ್ಥೆಯಿಲ್ಲದೆ ಉತ್ಸವ ನಡೆದರೆ ಬನ್ನೀಪೂಜೆ ಮಾಡುವ ವೇಳೆ ಬನ್ನೀಮಂಟಪದ ಬಳಿ ಯಾವುದೇ ಬೆಳಕಿನ ವ್ಯವಸ್ಥೆ ಮಾಡದ ಕಾರಣ ಪರದಾಡಿದ ದೇಗುಲದ ಸಿಬ್ಬಂದಿ, ಭಕ್ತರು ತಂದಿದ್ದ ಕಾರಿನ ಹೆಡ್‌ಲೈಟ್ ಹಾಕಿಸಿಕೊಂಡು ಹೀನಾಯ ಸ್ಥಿತಿಯಲ್ಲಿ ಶಮೀಪೂಜೆ ಮಾಡಬೇಕಾಯಿತು. ದೇವಾಲಯದ ಬಾಗಿಲಿಗೆ ವಿಜಯದಶಮಿಯಂದು ಕನಿಷ್ಠ ಮಾವಿನತೋರಣ ಕಟ್ಟುವ ಕಾರ್ಯವನ್ನೂ ಸಹ ಮಾಡಿರಲಿಲ್ಲ. ಆದರೆ ದಲಿತ ಭಕ್ತರು ಬನ್ನೀಮಂಟಪಕ್ಕೆ ಮಾವಿನ ತೋರಣ ಕಟ್ಟಿ ಸಲ್ಪಮಟ್ಟಿಗೆ ಸ್ವಚ್ಚಮಾಡಿದ್ದು ಕಂಡು ಬಂತು. ಸ್ವಾಮಿಯ ವಿಜಯೋತ್ಸವ ಸಂದಿಸಿದ ಅಂಗಡಿ ಬೀದಿ ವೃತ್ತ, ರಾಜಬೀದಿಗೂ ಹೆಚ್ಚಿನ ಬೆಳಕಿನ ವ್ಯವಸ್ಥೆ ಇರದೆ ಬೀದಿ ದೀಪಗಳಲ್ಲೇ ಉತ್ಸವ ದರ್ಶನ ಮಾಡುವಂತಾಗಿತ್ತು. ಇಡೀ ಉತ್ಸವ ಕತ್ತಲೆಯಲ್ಲೇ ನಡೆದದ್ದು ಮಾತ್ರ ವಿಪರ್ಯಾಸವಾಗಿದ್ದು ಭಕ್ತರ ಭಾವನೆಗೆ ಧಕ್ಕೆ ತರುವಂತಿತ್ತು.

ಸಾಹಿತಿ ಡಾ.ರಾಗೌರನ್ನು ಸಾಹಿತ್ಯ ಪರಿಷತ್ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಲು ಒತ್ತಾಯ

ಮಂಡ್ಯ: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಸಾಹಿತ್ಯ ವಲಯದ ಡಾ.ರಾಗೌ ಕಾವ್ಯನಾಮದಿಂದ ಜನಪ್ರಿಯರಾದ ಡಾ.ರಾಮೇಗೌಡ ಅವರನ್ನು ಆಯ್ಕೆ ಮಾಡುವಂತೆ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಡಿ.ಪಿ.ಸ್ವಾಮಿ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಗೌ ಅವರು ಇದುವರೆಗೂ 85 ಕೃತಿಗಳನ್ನು ರಚಿಸಿದ್ದಾರೆ. ಕವಿಯಾಗಿ, ವಿಮರ್ಶಕರಾಗಿ, ಜಾನಪದ ವಿದ್ವಾಂಸರಾಗಿ, ನಾಟಕಕಾರರಾಗಿ, ಗ್ರಂಥ ಸಂಪಾದಕರಾಗಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ ಎಂದರು. ಮಂಡ್ಯ ಜಿಲ್ಲೆಯವರೇ ಆದ ಇವರು ಮದ್ದೂರು ತಾಲೂಕಿನ ಈರೇಗೌಡನ ದೊಡ್ಡಿ ಗ್ರಾಮದವರಾಗಿದ್ದು, ತಮ್ಮ 5ನೇ ತರಗತಿ ಶಿಕ್ಷಣದವರೆಗೆ ಮಾತ್ರ ಸ್ವಗ್ರಾಮದಲ್ಲಿದ್ದರು. ನಂತರ ಅವರ ಶೈಕ್ಷಣಿಕ ಹಾಗೂ ವೃತ್ತಿ ಜೀವನ ಮೈಸೂರಿನಲ್ಲಿ ನಡೆಸಿದ್ದು, ಸಾಹಿತ್ಯಿಕವಾಗಿ ರಾಜ್ಯಕ್ಕೆ ತಮ್ಮ ಬಹುತೇಕ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಡಾ.ರಾಮೇಗೌಡರು ಸಮ್ಮೇಳನಾಧ್ಯಕ್ಷರಾಗಲು ಸೂಕ್ತ ಎಂದು ಹೇಳಿದರು.

ಸದರಿ ಸಮ್ಮೇಳನವು ಕನ್ನಡ ಸಾಹಿತ್ಯ ಸಮ್ಮೇಳನವಾಗಿರುವುದರಿಂದ ಸಾಹಿತಿಗಳನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು. ಕನ್ನಡ ಸಮ್ಮೇಳನಗಳನ್ನು ನಡೆಸಿ ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿಕೊಳ್ಳಲಿ ಎಂದು ಸಾಹಿತ್ಯೇತರರನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಚರ್ಚೆಗೆ ವಿರೋಧ ವ್ಯಕ್ತಪಡಿಸಿದರು.

ಅದ್ಧೂರಿ ಸಮ್ಮೇಳನದ ಬದಲಿಗೆ ಸಾಹಿತ್ಯ ಚಟುವಟಿಕೆಗಳಿಗೆ ಆದ್ಯತೆ ನೀಡುವಂತೆ ಸಾಹಿತಿ ಬೋರೇಗೌಡ ಚಿಕ್ಕಮರಳಿ ಅವರ ಮಾತಿಗೆ ಸಹಮತ ವ್ಯಕ್ತಪಡಿಸಿದ ಡಿ.ಪಿ.ಸ್ವಾಮಿ ಅವರು, ರಾಜ್ಯದ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಆಧುನಿಕ ರೀತಿಯಲ್ಲಿ ಶಿಕ್ಷಣ ನೀಡುತ್ತ ಕನ್ನಡ ಸಾಹಿತ್ಯ ಪರಿಷತ್ತು ಗಮನ ಹರಿಸಬೇಕು. ಸಮ್ಮೇಳನಗಳಿಗೆ ಕೋಟ್ಯಾಂತರ ರೂಗಳನ್ನು ವ್ಯಯಿಸುವ ಬದಲಿಗೆ ಎರಡು ವರ್ಷಕ್ಕೊಮ್ಮೆ ಸಮ್ಮೇಳನ ನಡೆಸಿ ಸಮ್ಮೇಳನಗಳಿಗೆ ವ್ಯಯಿಸುವ ಹಣವನ್ನು ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ವ್ಯಯಿಸಲು ಸಾಹಿತ್ಯ ಪರಿಷತ್ತು ಕಾರ್ಯ ರೂಪಿಸಲಿ ಎಂದು ಸಲಹೆಯನ್ನು ನೀಡಿದರು. ಗೋಷ್ಠಿಯಲ್ಲಿ ಕರ್ನಾಟಕ ಸಂಘದ ನಿರ್ದೇಶಕ ನಾಗಪ್ಪ, ಕಾರಸವಾಡಿ ಮಹದೇವು ಇದ್ದರು.

ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ

ಮಂಡ್ಯಅ.13– ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿ (ಟಿ.ಕೆ.ಹಳ್ಳಿ)ಯಲ್ಲಿ ಅ.16ರಂದು ಬೆಳಿಗ್ಗೆ 10.30ಕ್ಕೆ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ ಸಮಾರಂಭವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ.

ನಾಗಮಂಗಲದಲ್ಲಿ ರಾಷ್ಟ್ರೀಯ ಅಂಚೆ ಸಪ್ತಾಹ ಕಾರ್ಯಕ್ರಮ

ನಾಗಮಂಗಲ: ಭಾರತೀಯ ಅಂಚೆ ಇಲಾಖೆ ನಾಗಮಂಗಲ ವಿಭಾಗದ ವತಿಯಿಂದ ರಾಷ್ಟ್ರೀಯ ಅಂಚೆ ಸಪ್ತಾಹ ಕಾರ್ಯಕ್ರಮ ನಡೆಯಿತು.

ಸಾರ್ವಜನಿಕರು ಅಂಚೆ ಕಛೇರಿಯ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ನಾಗಮಂಗಲ ಪಟ್ಟಣದಲ್ಲಿ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದಲ್ಲಿರುವ ಭಾರತೀಯ ಅಂಚೆ ಇಲಾಖೆಯು ಪ್ರತಿವರ್ಷದಂತೆ ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ರಾಷ್ಟ್ರೀಯ ಅಂಚೆ ಸಪ್ತಾಹವನ್ನು ಆಚರಿಸುತ್ತಿದ್ದು ಅಂಚೆ ಇಲಾಖೆಯ ಗ್ರಾಹಕರಿಗೆ ಇಲಾಖೆ ಸೌಕರ್ಯಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಜಾಗೃತಿ ಮೂಡಿಸುವ ಉದ್ದೇಶ ಇದಾಗಿದೆ ಎಂದು ಅಂಚೆ ವಿಭಾಗದ ನಾಗಮಂಗಲ ನಿರೀಕ್ಷಕರಾದ ಭೀಮಪ್ಪ ಪವಾರ್ ತಿಳಿಸಿದರು.

ಅಂಚೆ ಇಲಾಖೆಯ ನೌಕರರು, ಸಿಬ್ಬಂದಿಗಳು, ಗ್ರಾಹಕರು ಅಂಚೆ ಇಲಾಖೆ ಘೋಷಣೆಗಳನ್ನು ಕೂಗುತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನ.1ರಿಂದ ಸಾಫ್ಟ್‌ಬಾಲ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ

ಮಂಡ್ಯ,ಅ.13– ಕರ್ನಾಟಕ ರಾಜ್ಯ ಸಾಫ್ಟ್‌ಬಾಲ್ ಕ್ರಿಕೆಟ್ ಅಸೋಸಿಯೇಷನ್ ವತಿಯಿಂದ ರಾಜ್ಯ ಮಟ್ಟದ ಕರ್ನಾಟಕ ಸಾಫ್ಟ್‌ಬಾಲ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯನ್ನು ನವೆಂಬರ್ 1ರಿಂದ ಡಿಸೆಂಬರ್ 1ರವರೆಗೆ ನಡೆಸಲಾಗುತ್ತಿದೆ ಎಂದು ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷ ಗಂಗಾಧರ್ ರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ 31 ಜಿಲ್ಲೆಗಳಿಂದ ಆಟಗಾರರನ್ನು ಆಯ್ಕೆ ಮಾಡಲಾಗಿದ್ದು, 32 ತಂಡಗಳನ್ನು ರಚಿಸಲಾಗಿದ್ದು, ಒಟ್ಟು 699 ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಸದರಿ ಪಂದ್ಯಾವಳಿಯು ಮುಂದಿನ ಪೀಳಿಗೆಯ ಕ್ರಿಕೆಟ್ ಪ್ರತಿಭೆಗೆ ವೇದಿಕೆಯಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ ಎಂದು.

ಸದರಿ ಪಂದ್ಯಾವಳಿಯು ಬೆಂಗಳೂರಿನ ಆಚಾರ್ಯ ಕ್ರೀಡಾಂಗಣದಲ್ಲಿ ನಡೆಸಲಾಗುವುದು. ಪಂದ್ಯಾವಳಿಯ ಪಂದ್ಯಗಳನ್ನು 9 ಓವರ್‌ಗಳಿಗೆ ಸೀಮಿತಗೊಳಿಸಿದ್ದು, ಸಂಜೆ 7.30ರಿಂದ 9.30ರವರೆಗೆ ಪಂದ್ಯಗಳು ನಡೆಯಲಿವೆ. ಎಲ್ಲ ಪಂದ್ಯಗಳನ್ನು ಪ್ರಸಾರ ಭಾರತಿಯ ಡಿ.ಡಿ.ಚಂದನದಲ್ಲಿ ನೇರ ಪ್ರಸಾರ ಮಾಡಲಾಗುವುದು. ಈ ಪಂದ್ಯಾವಳಿಯನ್ನು ಮುಂದಿನ ಹಂತಕ್ಕೆ ತಲುಪಿಸುವ ದೃಷ್ಟಿಯಿಂದ ರಾಷ್ಟ್ರ ಮಟ್ಟದ ಪಂದ್ಯಾವಳಿಗಳಿಗೆ ಯೋಜನೆ ರೂಪಿಸಲಾಗುತ್ತದೆ. ಇದಕ್ಕಾಗಿ ರಾಜ್ಯದಿಂದ 25 ಮಂದಿಯನ್ನು ಆಯ್ಕೆ ಮಾಡಿಕೊಳ್ಳಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ಬಾಗೇಗೌಡ, ಮೋಹನ್‌ಕುಮಾರ್, ಚನ್ನಬಸಮ್ಮ, ರಾಜಶೇಖರ್, ಗಿರೀಶ್, ಮನು ಇದ್ದರು.

ಅ.28ಕ್ಕೆ ಚುನಾವಣೆ

ಪಾಂಡವಪುರ: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ 2024–2029ನೇ ಅವಧಿಯ ಪಾಂಡವಪುರ ತಾಲೂಕು ಹಾಗೂ ಯೋಜನಾ ಶಾಖೆಗಳ ನಿರ್ದೇಶಕ ಸ್ಥಾನಕ್ಕೆ ಅ.28ಕ್ಕೆ ಚುನಾವಣೆ ನಡೆಯಲಿದ್ದು, ಅ.9ರಿಂದ ನಾಮಪತ್ರ ಸಲ್ಲಿಸಬಹುದಾಗಿದೆ. ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುವ ನೌಕರರು ಅ.9ರಿಂದ 18ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ಪಟ್ಟಣದಲ್ಲಿರುವ ಸರಕಾರಿ ನೌಕರರ ಸಂಘದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಂಜೆ 5ವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದೆ.

ಸಾಲದ ಭಾದೆ ತಾಳಲಾರದೆ ರೈತ ನೇಣಿಗೆ ಶರಣು

ಪಾಂಡವಪುರ,ಅ.13– ಸಾಲದ ಬಾಧೆ ತಾಳಲಾರದೆ ರೈತನೋರ್ವ ಮನೆಯ ತೊಲೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಅತ್ತಿಗಾನಹಳ್ಳಿಯಲ್ಲಿ ಭಾನುವಾರ ಸಂಭವಿಸಿದೆ.

ಗ್ರಾಮದ ವಾಸಿ ಕೃಷ್ಣ(40) ಆತ್ಮಹತ್ಯೆಗೆ ಶರಣಾದ ರೈತ. ಕೆಲ ವರ್ಷಗಳ ಹಿಂದೆ ಬೆಳೆ ಬೆಳೆಯಲು ಮಾಡಿಕೊಂಡಿದ್ದ ಸಾಲ ತೀರಿಸಲು ತನ್ನ ಜಮೀನನ್ನು 20 ಲಕ್ಷ ರೂ.ಗಳಿಗೆ ಮಾರಿ ಸಾಲ ತೀರಿಸಿಕೊಂಡಿದ್ದ. ಇದರಿಂದ ಬೇಸಾಯ ಮಾಡಲು ಜಮೀನು ಇರಲಿಲ್ಲವೆನ್ನಲಾಗಿದೆ.

ಜೀವನ ನಿರ್ವಹಣೆಗಾಗಿ ಸುಮಾರು 3ರಿಂದ 5ಲಕ್ಷ ರೂ. ಸಾಲ ಮಾಡಿಕೊಂಡಿದ್ದ. ಸಾಲಗಾರರ ಹೊಡೆತ ತಾಳಲಾರದೆ ಕೃಷ್ಣ ಮನೆಯಲ್ಲಿ ಯಾರೂ ಇಲ್ಲದ ವೇಳೆ ತೊಲೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಿವಂಗತ ಕೃಷ್ಣ ಪತ್ನಿ ತೇಜಸ್ವಿನಿ, ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದಲ್ಲಿ ಭಾನುವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ವಸ್ತುಪ್ರದರ್ಶನದಲ್ಲೂ ಜನಸ್ತೋಮ

ದೋಸೆಗಳು, ವೆಜ್ ಮತ್ತು ಚಿಕನ್ ಬಿರಿಯಾನಿ, ಬಿರಿಯಾನಿ ರೈಸ್ ಹಾಗೂ ವಿವಿಧ ಬಗೆಯ ಚಾಟ್ಸ್‌ಗಳನ್ನು ಸವಿದರು. ಜೊತೆಗೆ ದಿನಬಳಕೆ ವಸ್ತುಗಳು, ರೆಡಿಮೆಂಡ್ ಡ್ರೆಸ್‌ಗಳು, ಅಲಂಕಾರಿಕ ಪದಾರ್ಥಗಳು, ಮಕ್ಕಳ ಆಟಿಕೆಗಳ ಮಳಿಗೆಗಳಿಗೆ ಭೇಟಿ ನೀಡಿ, ಭರ್ಜರಿ ಖರೀದಿ ನಡೆಸಿದರು. ನಂತರ ಜಾಯಿಂಟ್ ವ್ಹೀಲ್‌ಗಳ ಕಡೆಗೆ ತೆರಳಿ ಮಕ್ಕಳೊಂದಿಗೆ ಆಟವಾಡಿದರು. ಜನ ಜಂಗುಳಿಯ ನಡುವೆ ಕಾಣೆಯಾದ ಮಹಿಳೆಯರು, ಹೆಣ್ಣುಮಕ್ಕಳು ಹಾಗೂ ಮಕ್ಕಳ ಮಾಹಿತಿಯನ್ನು ರೇಡಿಯೋ ರೂಂನಲ್ಲಿ ಮೈಕ್ ಮೂಲಕ ಅನೋಸ್ಮೆಂಟ್ ಮಾಡಿಸುವವರ ಸಂಖ್ಯೆಯೂ ಹೆಚ್ಚಾಗಿತ್ತು.

ವಿದ್ಯುತ್ ದೀಪಾಲಂಕಾರ ಆಕರ್ಷಣೆ: ಮೂರ್‍ನಾಲ್ಕು ಸೆಲ್ಫಿಸ್ಪಾಟ್‌ಗಳ ಜೊತೆಗೆ ವಿದ್ಯುತ್ ದೀಪಾಲಂಕಾರ ಆಕರ್ಷಕವಾಗಿದ್ದು, ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ ಬಹುತೇಕ ಮಂದಿ ವಿದ್ಯುತ್ ದೀಪಾಲಂಕಾರದ ಬಳಿ ನಿಂತು ಫೋಟೊ–ವಿಡಿಯೋ ತೆಗೆದುಕೊಂಡರು. ಎತ್ತರದ ಕಟೌಟ್ ಮಾದರಿಯ ವಿದ್ಯುತ್ ದೀಪಾಲಂಕಾರ ವಸ್ತು ಪ್ರದರ್ಶನಕ್ಕೆ ಹೊಸ ಮೆರಗು ನೀಡುವಂತಿವೆ. ಇದರ ನಡುವೆ ಯಾರಿಗಾದರೂ ಅನಾರೋಗ್ಯ ಉಂಟಾದರೆ ಅಂತಹವರಿಗೆ ತುರ್ತು ಚಿಕಿತ್ಸೆ ನೀಡಲು ಆಂಬುಲೆನ್ಸ್ ಸೇವೆಯನ್ನು ನೀಡಲಾಗಿತ್ತು.

ಅಶುಚಿತ್ವ, ಕೆಸರು, ಪ್ಲಾಸ್ಟಿಕ್ ಬಳಕೆ: ದಸರಾ ವಸ್ತುಪ್ರದರ್ಶನದಲ್ಲಿ ಜನ ಜಂಗುಳಿಯ ನಡುವೆ ಅಶುಚಿತ್ವ ತಾಂಡವವಾಡುತ್ತಿತ್ತು. ವಸ್ತುಪ್ರದರ್ಶನ ಆವರಣದಲ್ಲಿ ಪ್ರಾಧಿಕಾರ ಕಸದ ಬಕೆಟ್‌ಗಳು ಖಾಲಿ ಬಿದ್ದಿದ್ದರೆ, ಮಳಿಗೆದಾರರು ಇಟ್ಟಿದ್ದ ಕಸದ ಬಕೆಟ್‌ಗಳು ಕಸದಿಂದ ತುಂಬಿದ್ದವು. ಆಹಾರ ಮತ್ತು ದಿನಬಳಕೆ ವಸ್ತು ಮಾರಾಟ ಮಳಿಗೆಗಳ ಕಡೇ ಪ್ಲಾಸ್ಟಿಕ್ ಬಳಕೆ ವಿಪರೀತವಾಗಿತ್ತು. ಪ್ಲಾಸ್ಟಿಕ್‌ನ ವಾಟರ್ ಬಾಟಲ್‌ಗಳ ಜೊತೆಗೆ ಪ್ಲೇಟ್‌ಗಳು, ಬೌಲ್‌ಗಳ ಬಳಕೆ ಹೆಚ್ಚಾಗಿತ್ತು. ಪ್ಲಾಸ್ಟಿಕ್ ಮುಕ್ತ ಎಂಬ ವಸ್ತುಪ್ರದರ್ಶನ ಸಂಪೂರ್ಣ ಪ್ಲಾಸ್ಟಿಕ್ ಮಯವಾಗಿತ್ತು. ಅಲ್ಲದೆ ಮಧ್ಯಾಹ್ನ ಜೋರು ಮಳೆ ಬಿದ್ದಿದ್ದರಿಂದ ವಸ್ತುಪ್ರದರ್ಶನದ ರಸ್ತೆಗಳಲ್ಲಿ ಗುಂಡಿಗಳಲ್ಲಿ ನೀರು ನಿಂತು ಕೆಸರುಮಯವಾಗಿತ್ತು.

ಮಾಹಿತಿ ನೀಡೋರೆ ಇಲ್ಲ: ಸರ್ಕಾರಿ ಮಳಿಗೆಗಳನ್ನು ನೋಡಲು ಸಾವಿರಾರು ಜನರು ಭೇಟಿ ನೀಡುತ್ತಿದ್ದರೂ ಮಳಿಗೆಯ ಉದ್ದೇಶಗಳನ್ನು ತಿಳಿಸಲು ಯಾರೊಬ್ಬರು ಇರಲಿಲ್ಲ. ಚಂದ್ರಯಾನ ಕುರಿತು ಬಿಂಬಿಸುವ ಸಮಾಜ ಕಲ್ಯಾಣ ಇಲಾಖೆಯ ಬೃಹತ್ ಮಳಿಗೆ ಸೇರಿದಂತೆ ಇನ್ನಿತರೆ ಸರ್ಕಾರಿ ಮಳಿಗೆಗಳನ್ನು ನೋಡಲು ಪ್ರವಾಸಿಗರು ಬಂದರೂ ಅವರಿಗೆ ಮಳಿಗೆ ಯಾವ ಇಲಾಖೆ ಯದ್ದು, ಮಳಿಗೆಯ ಉದ್ದೇಶವೇನು ಎಂಬು ದನ್ನು ತಿಳಿಸಲು ಯಾರು ಇರಲಿಲ್ಲ. ಅಲ್ಲದೆ ಕೆಲ ಮಳಿಗೆಗಳು ಹೊರಗಡೆಯಿಂದ ನೋಡಲು ಅಂದವಾಗಿದ್ದರೆ, ಒಳಗಡೆ ನೋಡಲು, ತಿಳಿಯಲು ಏನೂ ಇಲ್ಲದೆ ಖಾಲಿ ಬಿದ್ದಿವೆ

> **5 ಲಕ್ಷಕ್ಕೂ ಅಧಿಕ ಮಂದಿ ಭೇಟಿ...!**
>
> ದಸರಾ ವಸ್ತುಪ್ರದರ್ಶನ ಉದ್ಘಾಟನೆಗೊಂಡ ಅ.3 ರಿಂದ ಅ.13ರವರೆಗೆ ಸುಮಾರು 5 ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ಭಾನುವಾರ ಒಂದೇ ದಿನ ಲಕ್ಷ ಮಂದಿ ಭೇಟಿ ನೀಡಿರುವ ಸಾಧ್ಯತೆ ಇದೆ. ಈ ವರ್ಷ ವಸ್ತು ಪ್ರದರ್ಶನ ಆವರಣದಲ್ಲಿ ವಿದ್ಯುತ್ ದೀಪಾಲಂಕಾರದಿಂದ ಹಿಡಿದು ಎಲ್ಲವೂ ವಿಶೇಷವಾಗಿದೆ. ಪ್ರವಾಸಿಗರಿಗೆ ಅಗತ್ಯವಿರುವ ಎಲ್ಲಾ ಗೃಹಬಳಕೆ ಪದಾರ್ಥಗಳು, ಮಕ್ಕಳ ಆಟಿಕೆಗಳು, ಆಕರ್ಷಕ ಗೇಮ್ಸ್ ಮತ್ತು ಸೆಲ್ಫಿಸ್ಪಾಟ್‌ಗಳಿವೆ. ಮೈಸೂರು ಸಂಸ್ಥಾನದ ಮರದ ಅರಮನೆ ವಿಶೇಷ ಆಕರ್ಷಣೆಯಾಗಿದೆ.
>
> – ಅಯೂಬ್ ಖಾನ್, ಅಧ್ಯಕ್ಷ, *ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ*

ಯುವಕನ ಗುಂಡಿಕ್ಕಿ ಹತ್ಯೆ ಯತ್ನ

ಖರೀದಿಸಿದ್ದನಂತೆ. ಆಯುಧ ಪೂಜೆ ಗೆಂದು ಮುಂಬೈನಿಂದ ಊರಿಗೆ ಬಂದಿದ್ದ ಶಿವರಾಜು ಭಾನುವಾರ ಬೆಳಿಗ್ಗೆ ಮಂಜು ಜೊತೆ ಜಗಳ ತೆಗೆದಿದ್ದಾನೆ. ಈ ವೇಳೆ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಏಕಾಏಕಿ ಶಿವರಾಜು ತನ್ನ ಬಳಿ ಇದ್ದ ಪಿಸ್ತೂಲ್‌ನಿಂದ ಮಂಜು ತಲೆಗೆ ಗುಂಡು ಹಾರಿಸಿದ್ದಾನೆ. ಗುಂಡು, ಮಂಜು ಸ್ವಲ್ಪ ಭಾಗಿದ ಹಿನ್ನೆಲೆಯಲ್ಲಿ ತಲೆ ಬಲಭಾಗಕ್ಕೆ ಸವರಿಕೊಂಡು ಹೋಗಿದೆ. ಹಾಗಾಗಿ ಸ್ವಲ್ಪ ಗಾಯವಾಗಿ ಸ್ಥಳದಲ್ಲಿಯೇ ಕುಸಿದು ಬಿದ್ದಿದ್ದಾನೆ. ಆ ಬಳಿಕ ಶಿವರಾಜು ಪಿಸ್ತೂಲ್ ಅಲ್ಲಿಯೇ ಬಿಸಾಡಿ ಓಡಿ ಹೋಗುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರು ಆತನನ್ನು ಬೆನ್ನತ್ತಿ ಹಿಡಿದು ಕಂಬಕ್ಕೆ ಕಟ್ಟಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಬಂದ ಪೊಲೀಸರಿಗೆ ಒಪ್ಪಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡಿದ್ದ ಮಂಜುನನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ವಿಷಯ ತಿಳಿದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿ ತಿಮ್ಮಯ್ಯ, ಡಿವೈ ಎಸ್‌ಪಿ ಮುರುಳಿ, ಸಬ್ ಇನ್ಸ್‌ಪೆಕ್ಟರ್ ಉಮೇಶ್ ಸೇರಿದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಬಂದೂಕು ಹಾಗೂ ಆರೋಪಿ ಶಿವರಾಜುನನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸುತ್ತಿದ್ದಾರೆ.

> ಅಕ್ರಮ ಸಂಬಂಧದ ಹಿನ್ನೆಲೆ ಯಲ್ಲಿ ಈ ಘಟನೆ ನಡೆದಿದೆ. ಶಿವರಾಜು ಪತ್ನಿ ಜೊತೆ ಮಂಜುವಿಗೆ ಅಕ್ರಮ ಸಂಬಂಧ ಇದೆ ಎಂಬ ಕಾರಣಕ್ಕೆ ಮಂಜುವಿನ ಮೇಲೆ ಶಿವರಾಜು ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ್ದಾನೆ. ಇದೇ ವಿಚಾರವಾಗಿ ಕಳೆದ ಮೂರು ವರ್ಷದ ಹಿಂದೆ ಶಿವರಾಜು, ಚಾಕುವಿನಿಂದ ಇರಿದು ಮಂಜು ಕೊಲೆಗೆ ಯತ್ನಿಸಿದ್ದ. ಆ ಬಳಿಕ ಗ್ರಾಮಸ್ಥರು ರಾಜೀ ಸಂಧಾನ ಮಾಡಿದ್ದರು. ನಂತರ ಮುಂಬೈಗೆ ತೆರಳಿದ್ದ ಶಿವರಾಜು, ಮಂಜು ಕೊಲೆಗೆ ಆರು ತಿಂಗಳ ಹಿಂದೆ ಸಂಚು ರೂಪಿಸಿ 3 ಲಕ್ಷ ಕೊಟ್ಟು ಚೋರ್ ಬಜಾರ್ ನಲ್ಲಿ ಪಿಸ್ತೂಲ್ ಖರೀದಿಸಿದ್ದ. ಹಬ್ಬ ಕ್ಕೆಂದು ಊರಿಗೆ ಬಂದಿದ್ದ ಸಂದರ್ಭ ದಲ್ಲಿ ಮಂಜು ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ್ದಾನೆ. ಸ್ವಲ್ಪದರಲ್ಲಿಯೇ ಮಂಜು ಬಚಾವಾಗಿದ್ದಾನೆ. ಪ್ರಕರಣ ಸಂಬಂಧ ಆರೋಪಿ ಶಿವರಾಜು ಪಿಸ್ತೂಲ್ ಹಾಗೂ ಬುಲೆಟ್‌ಗಳನ್ನು ವಶಕ್ಕೆ ಪಡೆದು ಕೊಳ್ಳಲಾಗಿದ್ದು, ತನಿಖೆ ನಡೆಸುತ್ತಿದ್ದೇವೆ.
>
> –ಮಲ್ಲಿಕಾರ್ಜುನ ಬಾಲದಂಡಿ, ಎಸ್‌ಪಿ

ಮೈಸೂರಲ್ಲಿ ಜನಸಾಗರ

ನೀಡಲು ಪ್ರವಾಸಿಗರು ಭಾನುವಾರ ರಸ್ತೆಗಿಳಿದಿದ್ದರು. ಹಾಗಾಗಿ ನಗರದ ಹೃದಯ ಭಾಗದಲ್ಲಿ ಕಿಕ್ಕಿರಿದು ಜನ ಸಮೂಹ ನೆರೆದಿತ್ತು. ಸಂಜೆಯಾಗುತ್ತಿದ್ದಂತೆ ಅರಮನೆ ಹಾಗೂ ವಸ್ತು ಪ್ರದರ್ಶನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಹಾಗೂ ಜನ ದಟ್ಟಣೆ ಬೆಳಗ್ಗಿಂತ ಮೂರು ಪಟ್ಟು ಹೆಚ್ಚಾಗಿತ್ತು. ಅರಮನೆ ವಿದ್ಯುತ್ ದೀಪಾಲಂಕಾರ ನೋಡಲು ಅದರ ಒಳಾವರಣ ಮಾತ್ರವಲ್ಲದೆ, ಹೊರಗೂ ಜನರು ಕಾತುರದಿಂದ ಕಾಯುತ್ತಿದ್ದ ದೃಶ್ಯ ಕಂಡು ಬಂತು. ಕತ್ತಲಲ್ಲಿ ಹೊಂಬಣ್ಣದಲ್ಲಿ ಕಂಗೊಳಿಸುವ ಅರಮನೆ ಚೆಂದ ನೋಡಿದ್ದೂ ಸಾಲದು ಎಂಬಂತೆ, ತಮ್ಮ ಕ್ಯಾಮರಾ ಹಾಗೂ ಮೊಬೈಲ್‌ಗಳಲ್ಲೂ ಸೆರೆ ಹಿಡಿದು ಸಂಭ್ರಮಿಸಿದರು. ಮತ್ತೊಂದೆಡೆ ವಸ್ತು ಪ್ರದರ್ಶನದತ್ತಲೂ ಜನ ಭಾರೀ ಪ್ರಮಾಣದಲ್ಲಿ ಲಗ್ಗೆಯಿಟ್ಟಿದ್ದರು. ಅತ್ತ ಅರಮನೆ ಜಯಮಾರ್ತಾಂಡ ದ್ವಾರದ ಮುಂದಿನ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಅಪಾರ ಜನಸ್ತೋಮ ಅರಮನೆ ವಿದ್ಯುತ್ ದೀಪಾಲಂಕಾರ ನೋಡಿ ಸಂಭ್ರಮಿಸುತ್ತಿತ್ತು. ಏಕಮುಖ ಸಂಚಾರಕ್ಕೆ ಕ್ರಮ ವಹಿಸಿದ್ದರೂ ವಾಹನಗಳು ಸಾಗಲಾರದಷ್ಟು ಜನ ದಟ್ಟಣೆ ಇತ್ತು. ಹಾರ್ಡಿಂಗ್ ವೃತ್ತ, ಚಾಮರಾಜ ಒಡೆಯರ್ ವೃತ್ತ, ಕೆಆರ್ ವೃತ್ತ ಹಾಗೂ ಇವುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಎಲ್ಲಿ ನೋಡಿದರಲ್ಲಿ ಜನರ ಓಡಾಟವೇ ಕಂಡು ಬರುತ್ತಿತ್ತು. ಹಾಗಾಗಿ ರಸ್ತೆಗಳು ಪಾದಚಾರಿ ಮಾರ್ಗಗಳಂತೆ ಬಾಸವಾದವು.

ವಿದ್ಯುತ್ ದೀಪಾಲಂಕಾರ ಕ್ರೇಜ್: ಜಂಬೂ ಸವಾರಿ ಮುಗಿದರೂ ದಸರಾ ವಿದ್ಯುತ್ ದೀಪಾಲಂಕಾರ ಮುಂದುವರೆದಿದ್ದು, ಜನರ ಅದರ ಕ್ರೇಜ್ ಕೂಡ ಮುಂದುವರೆದಿದೆ. ಬೈಕ್ ಮತ್ತು ಕಾರುಗಳಲ್ಲಿ ಮಾತ್ರವಲ್ಲದೆ, ಕಾಲ್ನಡಿಗೆಯಲ್ಲಿಯೂ ರಸ್ತೆಗಿಳಿದ ಜನತೆ, ವಿದ್ಯುತ್ ದೀಪಾಲಂಕಾರ ಕಂಡು ಪುಳಕಿತರಾದರು. ಹಾರ್ಡಿಂಗ್ ವೃತ್ತ, ಆಲ್ಬರ್ಟ್–ವಿಕ್ಟರ್ ರಸ್ತೆ, ಚಾಮರಾಜ ಒಡೆಯರ್ ವೃತ್ತ, ಕೆಆರ್ ವೃತ್ತ, ಸಯ್ಯಾಜಿರಾವ್ ವೃತ್ತ, ಜೆಎಲ್‌ಬಿ ರಸ್ತೆ, ದೇವರಾಜ ಅರಸು ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಸಂಚರಿಸಿ ದೀಪಾಲಂಕಾರ ಕಣ್ತುಂಬಿಕೊಂಡರು. ಭಾನುವಾರ ಸಂಜೆ ವೇಳೆ ವಾಹನ ಮತ್ತು ಜನ ದಟ್ಟಣೆ ವ್ಯಾಪಕವಾಗಿದ್ದ ಹಿನ್ನೆಲೆಯಲ್ಲಿ ಅಂಬಾರಿ ಬಸ್ ಸಂಚಾರ ಸಹ ನಿಧಾನಗತಿಯಾಗಿತ್ತು.

ತಮ್ಮೂರಿಗೆ ಮರಳಿದರು: ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಮೈಸೂರಿಗೆ ಆಗಮಿಸಿದ್ದ 1,600ಕ್ಕೂ ಹೆಚ್ಚು ಕಲಾವಿದರು ಭಾನುವಾರ ಬೆಳಗ್ಗೆಯೇ ಚಾಮುಂಡಿಬೆಟ್ಟದಲ್ಲಿ ದೇವಿ ದರ್ಶನ ಪಡೆದು, ತಮ್ಮ ಊರಿನತ್ತ ಪ್ರಯಾಣ ಬೆಳೆಸಿದರು. ಖಾಸಗಿ ವಾಹನಗಳಲ್ಲಿ ಬಂದು ವಿವಿಧ ಕಲ್ಯಾಣ ಮಂಟಪದಲ್ಲಿ ವಾಸ್ತವ್ಯ ಹೂಡಿದ್ದ ಕಲಾವಿದರು ಭಾನುವಾರ ಮೈಸೂರಿಂದ ತಮ್ಮೂರುಗಳಿಗೆ ಮರಳಿದರು.

ಅಂತೆಯೇ ವಿವಿಧೆಡೆಯಿಂದ ಆಗಮಿಸಿದ್ದ ಹೋಮ್ ಗಾರ್ಡ್‌ಗಳು ತಂಡೋಪತಂಡ ವಾಗಿ ಮೈಸೂರಿಂದ ವಾಪಸ್ಸಾದರು. ಮೈಸೂರಿನ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಅದೇ ರೀತಿಯಲ್ಲಿ ವಿವಿಧೆಡೆಯಿಂದ ಕರೆಸಿಕೊಳ್ಳಲಾಗಿದ್ದ ಪೊಲೀಸರು ಇಂದು ಬೆಳಗ್ಗಿನಿಂದಲೇ ತಮ್ಮ ಊರಿನತ್ತ ಪ್ರಯಾಣ ಬೆಳೆಸಿದರು. ಹಾಗೆಯೇ ವಿವಿಧೆಡೆಯಿಂದ ಮೈಸೂರಿಗೆ ಆಗಮಿಸಿದ್ದ ಅಪಾರ ಸಂಖ್ಯೆ ಜನರ ಪೈಕಿ ಹಲವು ಮಂದಿ ತಮ್ಮ ಊರುಗಳಿಗೆ ಮರಳಿದರು. ಹಾಗಾಗಿ ಭಾನುವಾರ ಬಸ್, ರೈಲ್ವೆ ನಿಲ್ದಾಣದಲ್ಲಿ ಜನ ದಟ್ಟಣೆ ಹೆಚ್ಚಾಗಿ ಕಂಡು ಬಂತು.

ಹೆಸರಿಗೆ ಮಾತ್ರ ಗೋಲ್ಡ್ ಕಾರ್ಡ್: ಖರೀದಿಸಿದವರು ಗೋಡೌನ್ ಸೇರಿದ್ದರು

▶▶ ಇವರಿಗೆ ಕನಿಷ್ಠ ಸೌಕರ್ಯ ಕಲ್ಪಿಸದ ಜಿಲ್ಲಾಡಳಿತ!

▶▶ ಗಣ್ಯರು, ಪ್ರತಿಷ್ಠಿತರ ನಡೆಸಿಕೊಳ್ಳುವ ಪರಿ ಇದಾ...!



ಮೈಸೂರು, ಅ.13(ಎಸ್‌ಬಿಡಿ)– ಮೈಸೂರು ದಸರಾ ವೀಕ್ಷಣೆಗೆ ಗೋಲ್ಡ್ ಕಾರ್ಡ್ ಖರೀದಿಸಿದ್ದ ಹಲವರು ಅವ್ಯವಸ್ಥೆ ಬಗ್ಗೆ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ. ದುಬಾರಿ ಗೋಲ್ಡ್ ಕಾರ್ಡ್ ಗ್ಯಾಲರಿಯಲ್ಲಿ ಕುಳಿತು ಜಂಬೂ ಸವಾರಿಯನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗದೆ, ನಿರಾಶೆಯಿಂದ ಜಿಲ್ಲಾಡಳಿತದ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ದಸರಾದಲ್ಲಿ ಗೋಲ್ಡ್ ಕಾರ್ಡ್‌ಗಳಿಗೆ ಭಾರೀ ಬೇಡಿಕೆ ಇರುತ್ತದೆ. ಹಾಗೆಯೇ ಈ ಬಾರಿ 6,500 ರೂ. ದರ ನಿಗದಿಪಡಿಸಿದ್ದರೂ ಎಲ್ಲಾ ಕಾರ್ಡ್‌ಗಳೂ ಬಿಕರಿಯಾಗಿದ್ದವು. ಜಂಬೂಸವಾರಿ, ಪಂಜಿನ ಕವಾಯತು, ಅರಮನೆ, ಮೃಗಾಲಯ ಹಾಗೂ ಚಾಮುಂಡಿಬೆಟ್ಟ ಪ್ರವೇಶಾವಕಾಶ ನೀಡಲಾಗಿತ್ತು. ಆದರೆ ಬಹುತೇಕ ಮಂದಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನರಾಗಿ ಜಂಬೂಸವಾರಿಯಲ್ಲಿ ಸಾಗುವ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಂಡು ಪುನೀತರಾಗುವ ಉದ್ದೇಶದಿಂದಲೇ ಗೋಲ್ಡ್ ಖರೀದಿಸುತ್ತಾರೆ. ಅದು ಸಾಧ್ಯವಾಗದಿದ್ದರೆ ಆಗುವ ವೇದನೆ ಅನುಭವಿಸಿದವರಿಗಷ್ಟೇ ಅರಿವಾಗುತ್ತದೆ.

ಅವ್ಯವಸ್ಥೆ ಆಗರ: ಅರಮನೆ ಆವರಣದಲ್ಲಿ ಜಂಬೂ ಸವಾರಿ ವೀಕ್ಷಣೆಗೆ ಗೋಲ್ಡ್ ಕಾರ್ಡ್ ಖರೀದಿಸಿದ್ದವರಿಗೇ ಪ್ರತ್ಯೇಕ ಗ್ಯಾಲರಿ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದ ವಿವಿಧೆಡೆಯಿಂದ, ದೇಶ–ವಿದೇಶಗಳಿಂದ ಆಗಮಿಸಿದ್ದ ಪ್ರವಾಸಿಗರು ಆ ಗ್ಯಾಲರಿಯಲ್ಲಿ ಆಸೀನರಾಗಿದ್ದರು. ಆದರೆ ಅಲ್ಲಿನ ಅವ್ಯವಸ್ಥೆ ಮಾತ್ರ ತುಂಬಾ ಬೇಸರ ಉಂಟು ಮಾಡಿತು. ಆಸನಗಳಿಗೆ ಹೊದಿಸಿದ್ದ ಶ್ವೇತವರ್ಣದ ಬಟ್ಟೆ ಗಲೀಜಾಗಿತ್ತು. ಕೆಸರು ಮೆತ್ತಿದ್ದ ಪಾದರಕ್ಷೆಗಳ ಗುರುತು ಆ ಬಟ್ಟೆಯ ಮೇಲೆ ಅಚ್ಚೊತ್ತಿತ್ತು. ಉಚಿತ ಪಾಸ್ ಇದ್ದವರೆಲ್ಲಾ ಒಬ್ಬೊಬ್ಬರಾಗಿ ಗೋಲ್ಡ್ ಕಾರ್ಡ್ ಗ್ಯಾಲರಿ ಸೇರಿದರು. ಗ್ಯಾಲರಿ ಮುಂಭಾಗದಲ್ಲಿ ಕುಳಿತವರಿಗೆ ಅಡ್ಡಲಾಗಿ ನಿಂತರು. ಈ ಬಗ್ಗೆ ಪ್ರಶ್ನಿಸಿದವರನ್ನೇ ಕೆಲವರು ದಬಾಯಿಸಿದರು. ಹೊರ ರಾಜ್ಯ ಹಾಗೂ ವಿದೇಶಗಳಿಂದ ಬಂದವರು ಭಯದಿಂದ ಮೌನವಾಗಿ ಕುಳಿತಿದ್ದರು. ಗೋಲ್ಡ್ ಕಾರ್ಡ್ ಇದ್ದ ಸ್ಥಳೀಯರ ಮಾತಿಗೂ ಬಗ್ಗಲಿಲ್ಲ ಎಂದು ಉದ್ಯಮಿ ಮೆಹುಲ್ ಪಟೇಲ್ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.



ಅರಮನೆ ಆವರಣದಲ್ಲಿನ ಗೋಲ್ಡ್ ಕಾರ್ಡ್ ಗ್ಯಾಲರಿಯಲ್ಲಿ ಯದ್ವಾತದ್ವಾ ನಿಂತಿದ್ದ ಜನ.

ಪೊಲೀಸರ ನಿಯೋಜಿಸಬೇಕಿತ್ತು: ಹಲವು ಜನ ಹೊರಗಿನಿಂದ ಬ್ಯಾರಿಕೇಡ್ ಹತ್ತಿ ಗೋಲ್ಡ್ ಕಾರ್ಡ್ ಗ್ಯಾಲರಿ ಸೇರಿದಾಗ ದೂರದಲ್ಲಿದ್ದ ಪೊಲೀಸ್ ಸಿಬ್ಬಂದಿಗೆ ತಿಳಿಸಲಾಯಿತು. ಅವರು ಗ್ಯಾಲರಿಯತ್ತ ದಾವಿಸುವಷ್ಟರಲ್ಲಿ ಇಲ್ಲಿ ನಿಂತಿದ್ದವರೆಲ್ಲಾ ಬ್ಯಾರಿಕೇಡ್ ಜಿಗಿದು ಹೊರಹೋದರು. ಪೊಲೀಸ್ ಸಿಬ್ಬಂದಿ ಅತ್ತ ಹೋಗುತ್ತಿದ್ದಂತೆ ಮತ್ತೆ ದುಸ್ಥಿತಿ ನಿರ್ಮಾಣವಾಗುತ್ತಿತ್ತು. ನೂಕುನುಗ್ಗಲಿಲ್ಲದೆ ನೆಮ್ಮದಿಯಿಂದ ಚಿನ್ನದ ಅಂಬಾರಿ ಮೆರವಣಿಗೆ ನೋಡಲೆಂದೇ ಆರೂವರೆ ಸಾವಿರ ಹಣ ನೀಡಿ, ಕುಳಿತವರಿಗೆ ತುಂಬಾ ತೊಂದರೆಯಾಯಿತು. ಈ ಅದ್ವಾನದಿಂದ ರೋಸಿಹೋದ ಹಲವು ವಿದೇಶಿ ಪ್ರವಾಸಿಗರು ಗ್ಯಾಲರಿಯಿಂದ ಹೊರಹೋದರು. ಮೆರವಣಿಗೆ ಆರಂಭವಾಗುತ್ತಿದ್ದಂತೆ ಅಡ್ಡ ನಿಲ್ಲುವವರ ಸಂಖ್ಯೆ ಹೆಚ್ಚುತ್ತಲೇ ಇತ್ತು. ಅನಿವಾರ್ಯವಾಗಿ ಅಲ್ಲೇ ಕುಳಿತಿದ್ದ ನಮಗೂ ಜಂಬೂ ಸವಾರಿಯನ್ನು ನೆಮ್ಮದಿಯಾಗಿ ನೋಡಲು ಸಾಧ್ಯವಾಗಲಿಲ್ಲ. ಗಣ್ಯರ ಗ್ಯಾಲರಿಯಂತೆ ಗೋಲ್ಡ್ ಕಾರ್ಡ್ ಗ್ಯಾಲರಿಗೂ ಒಂದಿಬ್ಬರು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿದ್ದರೆ ಈ ತೊಂದರೆ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಿಸಿದರು.

ಕನಿಷ್ಠ ವ್ಯವಸ್ಥೆಗೂ ನಿರ್ಲಕ್ಷ: ಹಣ ನೀಡಿ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಕೊಳ್ಳುವವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು ಅಧಿಕಾರಿಗಳ ಕರ್ತವ್ಯ. ಪ್ರತ್ಯೇಕ ಪ್ರವೇಶ, ಆಸನ ವ್ಯವಸ್ಥೆ ಮಾಡಿ, ಕೈತೊಳೆದುಕೊಳ್ಳಬಾರದು. ಗ್ಯಾಲರಿಗಳಲ್ಲಿ ಕುಳಿತು ನಿರಾತಂಕವಾಗಿ ಮೆರವಣಿಗೆ ನೋಡಲು ಅನುವು ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು. ಈ ಬಗ್ಗೆ ನಿರ್ಲಕ್ಷಿಸಿದರೆ ಮುಂದಿನ ವರ್ಷಗಳಲ್ಲಿ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಖರೀದಿಸಲು ಪ್ರವಾಸಿಗರು ಹಿಂದೇಟು ಹಾಕುವ ಸ್ಥಿತಿ ನಿರ್ಮಾಣವಾಗಬಹುದು ಎಂದು ಪೂನಾದ ಪ್ರವಾಸಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ರಾಮಲೀಲಾ ನಾಟಕ ಪ್ರದರ್ಶನ

ವಾನರ ವೇಷ ಧರಿಸಿದ್ದ ಕೈದಿಗಳು ಜೈಲಿನಿಂದ ಪರಾರಿ

ಲಖನೌ, ಅ.13– ಉತ್ತರಾಖಂಡದ ಹರಿದ್ವಾರ ಜೈಲಿನಲ್ಲಿ ನವರಾತ್ರಿ ಪ್ರಯುಕ್ತ ಆಯೋಜಿಸಿದ್ದ 'ರಾಮ್‌ಲೀಲಾ' ನೃತ್ಯರೂಪಕ ಪ್ರದರ್ಶನದ ವೇಳೆ ವಾನರರ ವೇಷ ಧರಿಸಿದ್ದ ಇಬ್ಬರು ಕೈದಿಗಳು ಸೀತೆಯನ್ನು ಹುಡುಕುವ ನೆಪದಲ್ಲಿ ಜೈಲಿನಿಂದಲೇ ಪರಾರಿಯಾಗಿದ್ದಾರೆ. ಇದೀಗ ಉತ್ತರಾಖಂಡ ಪೊಲೀಸರು ನಾಪತ್ತೆಯಾದ ಕೈದಿಗಳ ಹುಡುಕಾಟದಲ್ಲಿ ತೊಡಗಿದ್ದಾರೆ.

ಹರಿದ್ವಾರದ ರೋಷ್ನಾಬಾದ್‌ನಲ್ಲಿರುವ ಜೈಲಿನಲ್ಲಿ ನವರಾತ್ರಿ ಅಂಗವಾಗಿ ಪ್ರತಿ ವರ್ಷ 'ರಾಮ್‌ಲೀಲಾ' ಆಯೋಜಿಸಿಕೊಂಡು ಬರುತ್ತಿದ್ದು, ಕೈದಿಗಳೇ ಇದರಲ್ಲಿ ಪಾತ್ರ ನಿರ್ವಹಿಸುತ್ತಾರೆ.

ಜೈಲಿನಲ್ಲಿ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅಲ್ಲಿ ತಾತ್ಕಲಿಕವಾಗಿ ಮೆಟ್ಟಿಲು ನಿರ್ಮಿಸಲಾಗಿತ್ತು. ಇದೇ ಜಾಗದಿಂದ ಶುಕ್ರವಾರ ರಾತ್ರಿ ಮೆಟ್ಟಿಲು ಏರಿ, ನಂತರ ಗೋಡೆ ಹಾರಿ ತಪ್ಪಿಸಿಕೊಂಡಿದ್ದಾರೆ. ಜೈಲಿನ ಆವರಣದಲ್ಲಿ ವ್ಯಾಪಕ ಶೋಧ ನಡೆಸಿದ ಜೈಲಿನ ಸಿಬ್ಬಂದಿ, ಇಬ್ಬರು ಪರಾರಿಯಾಗಿರುವುದು ಖಚಿತವಾದ ಬಳಿಕ ಶನಿವಾರ ಬೆಳಿಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ.

ಮೂಲಗಳ ಪ್ರಕಾರ, ಪರಾರಿಯಾದ ಪಂಕಜ್ ಉತ್ತರಾಖಂಡ್‌ನ ರೂರ್ಕಿ ನಿವಾಸಿ. ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ. ರಾಜ್‌ಕುಮಾರ್ ಉತ್ತರಪ್ರದೇಶದ ಗೊಂಡ ಜಿಲ್ಲೆಯ ನಿವಾಸಿಯಾಗಿದ್ದು, ಅಪಹರಣ ಪ್ರಕರಣವೊಂದರಲ್ಲಿ ವಿಚಾರಣಾಧೀನ ಕೈದಿಯಾಗಿದ್ದ.

ಕೈದಿಗಳು ಪರಾರಿಯಾಗುವ ವೇಳೆ ಇತರ ಕೈದಿಗಳು ಹಾಗೂ ಸಿಬ್ಬಂದಿ 'ರಾಮ್‌ಲೀಲಾ' ನೋಡುವುದರಲ್ಲಿ ತಲ್ಲೀನರಾಗಿದ್ದರು. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಅಡಿಯಲ್ಲಿ ಗಾರ್ಡ್ ಸೇರಿದಂತೆ ಜೈಲಿನ ಆರು ಸಿಬ್ಬಂದಿಯನ್ನು ಹಿರಿಯ ಅಧಿಕಾರಿಗಳು ಅಮಾನತುಗೊಳಿಸಿದ್ದಾರೆ.


ಪ್ರಥಮ ಸ್ಥಾನ ಪಡೆದ ಶ್ರೀಕೋಟೆ ಗಣಪತಿ ಮಂಟಪ.


ದ್ವಿತೀಯ ಸ್ಥಾನ ಪಡೆದ ಕೋಟೆ ಮಾರಿಯಮ್ಮ ಮಂಟಪ.

ಮಡಿಕೇರಿ ದಸರಾ ಜನೋತ್ಸವಕ್ಕೆ ವರ್ಣರಂಜಿತ ತೆರೆ

ಶ್ರೀಕೋಟೆ ಗಣಪತಿ ಮಂಟಪಕ್ಕೆ ಪ್ರಥಮ, ಕೋಟೆ ಮಾರಿಯಮ್ಮ ಮಂಟಪಕ್ಕೆ ದ್ವಿತೀಯ ಸ್ಥಾನ

ಮಡಿಕೇರಿ, ಅ.13–ಐತಿಹಾಸಿಕ ಹಿನ್ನೆಲೆಯುಳ್ಳ ಮಡಿಕೇರಿ ದಸರಾ ಜನೋತ್ಸವ ವಿಜೃಂಭಣೆಯ ದಶಮಂಟಪ ಶೋಭಾಯಾತ್ರೆಯೊಂದಿಗೆ ವರ್ಣರಂಜಿತ ತೆರೆ ಕಂಡಿದೆ.

ದಶಮಂಟಪ ದೇವ ಲೋಕವನ್ನೇ ಧರೆಗಿಳಿಸಿದ ದೃಶ್ಯವನ್ನು ಸಾವಿರಾರು ಜನರು ಕಣ್ತುಂಬಿಕೊಂಡು ಸಂಭ್ರಮಿಸಿದರು. ಪೇಟೆ ಶ್ರೀರಾಮಮಂದಿರ ಮಂಟಪಕ್ಕೆ ಚಾಲನೆ ನೀಡುವ ಮೂಲಕ ಮಂಜಿನ ನಗರಿಯಲ್ಲಿ ಶೋಭಾಯಾತ್ರೆ ಆರಂಭವಾಯಿತು. ಬಹುತೇಕ ಮಂಟಪಗಳು ನಿಗದಿತ ಅವಧಿಯಲ್ಲಿ ಪ್ರದರ್ಶನ ನೀಡುವ ಮೂಲಕ ದಸರಾ ಕಳೆ ತುಂಬಿದವು. ಪೌರಾಣಿಕ ಕಥಾ ಹಂದರದಿಂದ ಆಯ್ದ ಭಾಗಗಳನ್ನು ಮಂಟಪಗಳಲ್ಲಿ ಅಳವಡಿಸಿಕೊಂಡು ಪ್ರದರ್ಶಿಸಲಾಯಿತು.


ತೃತೀಯ ಸ್ಥಾನ ಪಡೆದ ದಂಡಿನ ಮಾರಿಯಮ್ಮ ಮಂಟಪ.

ಈ ಬಾರಿ ದಸರಾದಲ್ಲಿ ಶ್ರೀಕೋಟೆ ಗಣಪತಿ ಮಂಟಪ ಪ್ರಥಮ ಸ್ಥಾನ ಪಡೆಯಿತು. ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪದಲ್ಲಿ ಗಣಪತಿಯಿಂದ ಅಜಗರ ಮತ್ತು ಶಲಭಾಸುರ ದೈತ್ಯರ ಸಂಹಾರ ಎಂಬ ಕಥಾ ಸಾರಾಂಶ ಅಳವಡಿಸಲಾಗಿತ್ತು. ಕೋಟೆ ಮಾರಿಯಮ್ಮ ದೇವಾಲಯ ಶ್ರೀಕೃಷ್ಣ ಬಾಲ ಲೀಲೆ, ಕಂಸವಧೆ ಎಂಬ ಪೌರಾಣಿಕ ಹಿನ್ನೆಲೆ ಮಂಟಪ ಸಿದ್ಧಪಡಿಸಿ ದ್ವಿತೀಯ ಸ್ಥಾನ ಗಳಿಸಿತು. ದಂಡಿನ ಮಾರಿಯಮ್ಮ ದೇವಾಲಯ ಕೌಶಿಕೆ ಮಹಾತ್ಮೆ ಎಂಬ ಕಥಾ ಭಾಗದ ಮಂಟಪ ತೃತೀಯ ಸ್ಥಾನ ಪಡೆಯಿತು.

ಪೌರಾಣಿಕ ಕಥಾ ಸಾರಾಂಶಕ್ಕೆ ತಕ್ಕಂತೆ ಕಲಾಕೃತಿಗಳನ್ನು ಮಂಟಪಗಳಲ್ಲಿ ಅಳವಡಿಸಲಾಗಿತ್ತು. ದಿಂಡಿಗಲ್ ಲೈಟ್‌ಬೋರ್ಡ್, ಕಲಾಕೃತಿಗಳ ಚಲನ ವಲನ, ಸ್ಪಾಟ್‌ಲೈಟ್, ಧ್ವನಿವರ್ಧಕ, ಕೂಲ್‌ಫಯರ್, ಪೇಪರ್ ಬ್ಲಾಸ್ಟ್ ಮಂಟಪಗಳು ಶೋಭಾಯಾತ್ರೆಗೆ ಮೆರುಗು ತುಂಬಿದವು. ಪೂಕೋಡ್ ಬ್ಯಾಂಡ್‌ಸೆಟ್, ಡಿಜೆ ಎದುರು ಯುವಕ–ಯುವತಿಯರು ಕುಣಿದು ಕುಪ್ಪಳಿಸಿದರು.

ತೀರ್ಪಿಗೆ ಅಸಮಾಧಾನ: ಈ ಬಾರಿ ಎಲ್ಲಾ ದಶಮಂಟಪಗಳು ಕೂಡ ಪೈಪೋಟಿಗೆ ಮುಂದಾಗಿದ್ದವು. ವಿಭಿನ್ನ ಕಥೆಗಳನ್ನು ಮಂಟಪಗಳಲ್ಲಿ ಅಳವಡಿಸಿಕೊಂಡು ಪ್ರದರ್ಶನ ನೀಡಿದವು. ಆದರೆ, ಕೇವಲ 3 ಮಂಟಪಗಳು ಮಾತ್ರ ಪ್ರಶಸ್ತಿಗೆ ಭಾಜನವಾದವು. ಈ ಹಿನ್ನೆಲೆಯಲ್ಲಿ ಕರವಲೆ ಶ್ರೀ ಮಹಿಷ ಮರ್ದಿನಿ ದೇವಾಲಯ ಮಂಟಪ ಸಮಿತಿ ತೀರ್ಪು ಕುರಿತು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿತು.

ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ ಪ್ರಶಸ್ತಿ ವಿತರಿಸುವ ಸಂದರ್ಭ ವೇದಿಕೆ ಬಳಿ ನುಗ್ಗಿದ ಮಂಟಪ ಸಮಿತಿ ಸದಸ್ಯರು ತೀರ್ಪು ಸರಿಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಲು ಮುಂದಾದ ಘಟನೆ ನಡೆಯಿತು. ಇದೇ ವೇಳೆ ಮಧ್ಯಪ್ರವೇಶಿಸಿದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.


ಸರ್ವರ ಮಂಟಪ.


ಗೋಣಿಕೊಪ್ಪ ದಸರಾದಲ್ಲಿ ಗಮನ ಸೆಳೆದ ನಾಡಹಬ್ಬ ಸಮಿತಿ ಮಂಟಪ.

ಗೋಣಿಕೊಪ್ಪ ದಸರಾ ಸಂಪನ್ನ

ಗೋಣಿಕೊಪ್ಪ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾವೇರಿ ದಸರಾ ಸಮಿತಿ ಸಹಯೋಗದಲ್ಲಿ ನಡೆದ 46ನೇ ವರ್ಷದ ಗೋಣಿಕೊಪ್ಪ ದಸರಾ ಶನಿವಾರ ಸಂಪನ್ನಗೊಂಡಿತು.

ಶೋಭಾಯಾತ್ರೆಯಲ್ಲಿ ಹರಿಶ್ಚಂದ್ರಪುರ ನಮ್ಮ ದಸರಾ ಸಮಿತಿ ಮಂಟಪಕ್ಕೆ ಪ್ರಥಮ, ಯುವ ದಸರಾ ಸಮಿತಿ ಮಂಟಪಕ್ಕೆ ದ್ವಿತೀಯ, ಕೊಪ್ಪ ಸ್ನೇಹಿತರ ಬಳಗದ ಮಂಟಪಕ್ಕೆ ತೃತೀಯ ಸ್ಥಾನ ನೀಡಲಾಯಿತು.

ನಮ್ಮ ದಸರಾ ಸಮಿತಿ ಮಂಟಪ ಶಿವ ತಾಂಡವ ಕಥಾನ ಹಾಗೂ ಯುವ ದಸರಾ ಸಮಿತಿ ಮಂಟಪ ಹನುಮಂತನ ಕಥೆ ಮೂಲಕ ಗಮನ ಸೆಳೆದವು. ಪಟ್ಟಣದ ಹರಿಶ್ಚಂದ್ರಪುರ, ಪೊನ್ನಂಪೇಟೆ, ಪಾಲಿಬೆಟ್ಟ, ವಿರಾಜಪೇಟೆ ರಸ್ತೆ ಭಾಗದಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ಪೊಲೀಸರು ಹರಸಾಹಸಪಟ್ಟು ವಾಹನ ಸಂಚಾರ ನಿಯಂತ್ರಿಸಿದರು.

ದಟ್ಟಮಂಜಿನ ನಡುವೆ ಮಂಟಪಗಳು ಸಾಗಿದವು. ತಡರಾತ್ರಿ 12 ಗಂಟೆಗೆ ಎಲ್ಲಾ ಮಂಟಪಗಳು ಮುಖ್ಯ ಬೀದಿಗೆ ಆಗಮಿಸಿದವು. ಕಥನಕಕ್ಕೆ ಪೂರಕವಾದ ವಿದ್ಯುತ್ ದೀಪ, ಆರ್ಭಟ, ಕೂಗಿನ ಮಂಟಪಗಳು ಕಲಾಭಿಮಾನಿಗಳನ್ನು ನಿಂತು ನೋಡುವಂತೆ ಮಾಡಿದವು.


ಮಾರುಕಟ್ಟೆ ಸಮಿತಿ ಮಂಟಪ.

ಪ್ರತ್ಯೇಕ ಅಪಘಾತ: ಇಬ್ಬರು ಸಾವು





ಸುಂಟಿಕೊಪ್ಪ, ಅ.13–ಸುಂಟಿಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಪ್ರತ್ಯೇಕ ಅಪಘಾತ ಸಂಭವಿಸಿ ಇಬ್ಬರು ಮೃತಪಟ್ಟಿದ್ದಾರೆ.

ಶನಿವಾರ ತಡರಾತ್ರಿ ಮಡಿಕೇರಿ ದಸರಾ ವೀಕ್ಷಣೆಗೆಂದು ಹಾಸನ ಜಿಲ್ಲೆಯ ಅರಸೀಕೆರೆಯಿಂದ ಬೈಕ್‌ನಲ್ಲಿ ಬರುತ್ತಿದ್ದ ಗೋಪಿನಾಥ್ (31) ಮೃತಪಟ್ಟಿದ್ದಾರೆ.

ಈತ ಬೈಕ್‌ನಲ್ಲಿ ಮತ್ತೊಬ್ಬನೊಂದಿಗೆ ಅರಸೀಕೆರೆಯಿಂದ ಬರುತ್ತಿದ್ದರು. ಈ ವೇಳೆ ಸುಂಟಿಕೊಪ್ಪದ ಗದ್ದೆಹಳ್ಳದ ಬಳಿ ನಿಯಂತ್ರಣ ತಪ್ಪಿ ಬೈಕ್ ಕಂಬಕ್ಕೆ ಡಿಕ್ಕಿಯಾಗಿ ಮೋರಿಗೆ ಬಿದ್ದಿದೆ. ಪರಿಣಾಮ ಹಿಂಬದಿ ಕುಳಿತ್ತಿದ್ದ ಗೋಪಿನಾಥ್ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಸವಾರ ಗಾಯಗೊಂಡು ಮೈಸೂರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಡಿಕೇರಿ ದಸರಾ ಮುಗಿಸಿ ಹುಣಸೂರು ಕಡೆಗೆ ತೆರಳುತ್ತಿದ್ದಾಗ ಪಿಕ್‌ಅಪ್ ವಾಹನ ಸುಂಟಿಕೊಪ್ಪದ ಬಳಿಕ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಪರಿಣಾಮ ಚಂದನ್(21) ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಾಹನದಲ್ಲಿದ್ದ ಇತರೆ 8 ಪ್ರಯಾಣಿಕರಿಗೆ ಗಾಯಗಳಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಹೆಚ್.ವಿ.ಚಂದ್ರಶೇಖರ್ ಮತ್ತು ಸಿಬ್ಬಂದಿ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಾಕುವಿನಿಂದ ಇರಿದು ಪತ್ನಿಯಿಂದ ಪತಿ ಕೊಲೆ


ಧರ್ಮ

ನಾಪೋಕ್ಲು, ಅ.13–ಪತ್ನಿ ಪತಿಯನ್ನೇ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಸಮೀಪದ ಮೂರ್ನಾಡು ಗಾಂಧಿನಗರದಲ್ಲಿ ಭಾನುವಾರ ನಡೆದಿದೆ.

ಗಾಂಧಿನಗರದ ನಿವಾಸಿ ಧರ್ಮ(26) ಕೊಲೆಯಾಗಿದ್ದು, ಪತ್ನಿ ಶ್ರೀಜಾ(24)ಳನ್ನು ಪೊಲೀಸರು ಬಂಧಿದ್ದಾರೆ.

ಮೂಲತಃ ಕುಶಾಲನಗರದ ಧರ್ಮ ಹಾಗೂ ಭೈರಂಬಾಡದ ಶ್ರೀಜಾ ಪ್ರೀತಿಸಿ ಕಳೆದ ಜನವರಿಯಲ್ಲಿ ವಿವಾಹವಾಗಿದ್ದರು. ಧರ್ಮ ವೆಲ್ಡಿಂಗ್ ಕೆಲಸ ಮಾಡುತ್ತಿದ್ದು, ಮೂರ್ನಾಡಿನ ಗಾಂಧಿನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಆದರೆ, ಭಾನುವಾರ ಬೆಳಗ್ಗೆ ಪತಿ–ಪತ್ನಿ ನಡುವೆ ಜಗಳವಾಗಿದೆ. ಈ ವೇಳೆ ಪತ್ನಿ ಶ್ರೀಜಾ ಚಾಕುವಿನಿಂದ ಪತಿಗೆ ಇರಿದಿದ್ದಾಳೆ. ಪರಿಣಾಮ ರಕ್ತಸ್ರಾವದಿಂದ ಧರ್ಮ ಮೃತಪಟ್ಟಿದ್ದಾರೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಡಿವೈಎಸ್ಪಿ ಮಹೇಶ್ ಕುಮಾರ್, ಮೂರ್ನಾಡು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಉಮೇಶ್ ಉಪ್ಪಳಗಿ, ಎಎಸ್‌ಐ ಶ್ರೀನಿವಾಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ನಂತರ ಪತ್ನಿ ಶ್ರೀಜಾಳನ್ನು ಬಂಧಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿರಾಜಪೇಟೆಯಲ್ಲಿ ವಿಜೃಂಭಣೆಯ ಆಯುಧ ಪೂಜೆ

ವಿರಾಜಪೇಟೆ ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ 17ನೇ ವರ್ಷದ ಆಯುಧ ಪೂಜಾ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಬಸ್ ನಿಲ್ದಾಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಾಧಕರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಗೋಪಮ್ಮ ತಂಡದಿಂದ ಉರುಟ್ಟಿ ಕೊಟ್ಟ್ ಪಾಟ್, ಶಾಲಾ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ, ಬಳಿಕ ಅನ್ನಸಂತರ್ಪಣೆ ನಡೆಯಿತು. ಟೀಂ ಪವರ್ ಸ್ಟ್ರೋಕ್ ಕೊಡಗು–ಮೈಸೂರು ತಂಡದಿಂದ ಬೈಕ್ ಸ್ಟಂಟ್ ಶೋ ನಡೆಯಿತು. ಸಂಜೆ ಹಿರಿಯ ಬಸ್ ನಿರ್ವಾಹಕ ಕುಂಬೇಯಂಡ ಗಣೇಶ್, ಪತ್ರಕರ್ತ ಟಿ.ಜೆ. ಕಿಶೋರ್ ಕುಮಾರ್ ಶೆಟ್ಟಿ, ಪೌರಕಾರ್ಮಿಕ ಹೆಚ್.ಎನ್.ಸುಬ್ರಮಣಿ, ಶೈಕ್ಷಣಿಕ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಸಾಧನೆಗೈದ ಬಸ್ ಕಾರ್ಮಿಕ ಸಂಘದ ಸದಸ್ಯರ ಮಕ್ಕಳಾದ ಶಾನ್ವಿಕಾ, ಭವಿಷ್ಯ, ಗ್ರೀಷ್ಮಾ ಪೊನ್ನಮ್ಮ, ಪೂರ್ವಿ ಪೂವಮ್ಮ, ಶಾನಿಯ ಅಚ್ಚುತ್ತನ್ ಅವರನ್ನು ಸನ್ಮಾನಿಸಲಾಯಿತು. ನಂತರ ಶಾರದ ಮೆಲೋಡಿಸ್ ಮಂಗಳೂರು ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು.


ಆಯುಧ ಪೂಜಾ ಕಾರ್ಯಕ್ರಮದಲ್ಲಿ ಬೈಕ್ ಸ್ಟಂಟ್ ಶೋ ನಡೆಯಿತು.

ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಮಡಿಕೇರಿ ಅಧ್ಯಕ್ಷ ರಮೇಶ್ ಜೋಯಪ್ಪ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಿಜೆಪಿ ಜಿಲ್ಲಾ ಪ್ರಧಾನ ಸಂಚಾಲಕ ತೇಲಪಂಡ ಶಿವಕುಮಾರ್, ಹಿಂದೂ ಮಲಯಾಳಿ ಸಮಾಜದ ಅಧ್ಯಕ್ಷ ವಿನೂಪ್ ಕುಮಾರ್, ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ ಅಧ್ಯಕ್ಷ ಕುಂಬೇಯಂಡ ಸುರೇಶ್ ದೇವಯ್ಯ ಮಾತನಾಡಿದರು. ಉಮ್ಮರ್ ಚಿಟ್ಟಡೆ, ಗುತ್ತಿಗೆದಾರ ಕೋಡಿರ ವಿವೇಕ್, ಮಂಜುನಾಥ ಮೋಟಾರ್ಸ್ ಮಾಲೀಕ ಕೈಬುಲಿರ ಮನು ನಂಜಪ್ಪ, ವಿನಾಯಕ ಟ್ರಾವೆಲ್ಸ್ ಮಾಲೀಕ ಬಿ.ವಿ.ಹೇಮಂತ್, ಬಸ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಜ್ಯೂಡಿವಾಜ್, ವಿನೋದ್, ದಿನೇಶ್ ನಾಯರ್, ಪದಾಧಿಕಾರಿಗಳು ಹಾಜರಿದ್ದರು.

ಮೂಡಗೂರು ಕಾಳಿಕಾಂಬೆಗೆ ವಿಜಯದಶಮಿ ಪೂಜೆ

ಗುಂಡ್ಲುಪೇಟೆ, ಅ.13–ತಾಲೂಕಿನ ಮೂಡಗೂರು ಗ್ರಾಮದ ಕಾಳಿಕಾಂಬ ದೇವಸ್ಥಾನದಲ್ಲಿ ವಿಜಯದಶಮಿ ವಿಶೇಷ ಪೂಜೆ ಮತ್ತು ಬಸವೇಶ್ವರ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಕಾಳಿಕಾಂಬ ಮತ್ತು ಬಸವೇಶ್ವರ ದೇವಸ್ಥಾನ ಸೇರಿದಂತೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಳಿರು ತೋರಣದೊಂದಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಪ್ರತಿವರ್ಷದಂತೆ ಕಾಳಿಕಾಂಬೆಗೆ ವಿಶೇಷ ಹೂವಿನ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನಡೆಯಿತು. ನಂತರ ಖಡ್ಗಗಳನ್ನು ಹಿಡಿದ ಮಕ್ಕಳು ಬಸವೇಶ್ವರ ಮೂರ್ತಿಯ ಗ್ರಾಮದ ಹೊರವಲಯದ ಬನ್ನಿಮರದವರೆಗೆ ಮೆರವಣಿಗೆ ನಡೆಸಿ, ಪ್ರಾರ್ಥನೆ, ಪೂಜೆ ಸಲ್ಲಿಸುವುದರೊಂದಿಗೆ ವಿಜಯೋತ್ಸವ ಆಚರಿಸಿದರು. ಉತ್ಸವ ಮೂರ್ತಿಯನ್ನು ಮಂಗಳ ವಾದ್ಯ ಮತ್ತು ವೀರಗಾಸೆಯೊಂದಿಗೆ ಗ್ರಾಮದಲ್ಲಿ ಯುವಕರು, ಮುಖಂಡರು ಕತ್ತಿವರಸೆಯೊಂದಿಗೆ ಮೆರವಣಿಗೆ ನಡೆಸಲಾಯಿತು. ಖಡ್ಗ ಹಿಡಿದ ಮಕ್ಕಳಿಗೆ ಆರತಿ ಬೆಳಗುವುದರೊಂದಿಗೆ ದೇವತಾ ಕಾರ್ಯ ಮುಕ್ತಾಯಗೊಳಿಸಿ, ಅನ್ನಸಂತರ್ಪಣೆ ನಡೆಸಲಾಯಿತು.


ಮೂಡುಗೂರು ಗ್ರಾಮದ ಕಾಳಿಕಾಂಬ ದೇವಸ್ಥಾನದಲ್ಲಿ ವಿಜಯದಶಮಿ ಪೂಜೆ ನೆರವೇರಿಸಲಾಯಿತು.

ಕೊಳ್ಳೇಗಾಲದಲ್ಲಿ ಶಂಕರ್ ಬಿದರಿಗೆ ಸ್ವಾಗತ...


ಕೊಳ್ಳೇಗಾಲಕ್ಕೆ ಭೇಟಿ ನೀಡಿದ ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಅವರನ್ನು ತಾಲೂಕು ನಿರ್ದೇಶಕರು ಹಾಗೂ ಸದಸ್ಯರು ಸ್ವಾಗತಿಸಿದರು. ಮಹಿಳಾ ಘಟಕ ರಾಜ್ಯಾಧ್ಯಕ್ಷೆ ರೂಪಾ, ಜಿಲ್ಲಾಧ್ಯಕ್ಷ ನಂದೀಶ್, ತಾಲೂಕು ಅಧ್ಯಕ್ಷ ಪುಟ್ಟಣ್ಣ, ಎನ್‌ರಿಚ್ ಮಹದೇವಸ್ವಾಮಿ, ವೀರಶೈವ ಲಿಂಗಾಯತ ನೌಕರರ ಸಂಘದ ಅಧ್ಯಕ್ಷ ಮಲ್ಲೇಶಪ್ಪ, ಚಾಮುಲ್ ನಿರ್ದೇಶಕರಾದ ನಂಜುಂಡ, ಉದ್ದನೂರು ಪ್ರಸಾದ್, ಉಷಾರಾಣಿ, ಮಹದೇವಸ್ವಾಮಿ ಇದ್ದರು.

ನಾಯಕ ಸಮುದಾಯದಿಂದಲೇ ವಾಲ್ಮೀಕಿ ಜಯಂತಿ ಆಚರಣೆಗೆ ನಿರ್ಧಾರ


ಚಾಮರಾಜನಗರದಲ್ಲಿ ನಾಯಕ ಸಮುದಾಯದ ಜಿಲ್ಲಾ ಮುಖಂಡರ ಸಭೆ ನಡೆಯಿತು.

ಚಾಮರಾಜನಗರ, ಅ.13–ನಾಯಕ ಸಮುದಾಯದ ವತಿಯಿಂದಲೇ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ನಾಯಕರ ಸಾರ್ವಜನಿಕ ವಿದ್ಯಾರ್ಥಿನಿಲಯ ಆವರಣದಲ್ಲಿ ನಡೆದ ನಾಯಕ ಸಮುದಾಯದ ಜಿಲ್ಲಾ ಮುಖಂಡರ ಸಭೆಯಲ್ಲಿ ವೀರಮದಕರಿ ನಾಯಕ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಿರ್ಧರಿಸಲಾಯಿತು. ಜಿಲ್ಲಾಡಳಿತ ಸಮುದಾಯದ ಬೇಡಿಕೆ ಈಡೇರಿಸದ ಕಾರಣ ಸರ್ಕಾರಿ ಕಾರ್ಯಕ್ರಮ ಬಹಿಷ್ಕರಿಸಿ, ಸಮುದಾಯದ ವತಿಯಿಂದಲೇ ಅದ್ಧೂರಿಯಾಗಿ ವಾಲ್ಮೀಕಿ ಜಯಂತಿ ಆಚರಣೆಗೆ ತೀರ್ಮಾನಿಸಲಾಯಿತು.

ಉಗ್ರ ಹೋರಾಟ: ಸಭೆ ನೇತೃತ್ವ ವಹಿಸಿದ್ದ ನಾಯಕರ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಮಾತನಾಡಿ, ಜಿಲ್ಲಾಡಳಿತ ಬಹುವರ್ಷಗಳಿಂದಲೂ ವಾಲ್ಮೀಕಿ ಪುತ್ಥಳಿ ನಿರ್ಮಿಸಲು ತಾರತಮ್ಯ ಮಾಡುತ್ತಿರುವುದು ತೀವ್ರ ಖಂಡನೀಯ. ಆದ್ದರಿಂದ ಸರ್ಕಾರದಿಂದ ಆಚರಿಸುವ ವಾಲ್ಮೀಕಿ ಜಯಂತಿ ಬಹಿಷ್ಕರಿಸಿ, ಸಮುದಾಯದ ವತಿಯಿಂದ ಅದ್ಧೂರಿಯಾಗಿ ವಾಲ್ಮೀಕಿ ಜಯಂತಿ ಆಚರಿಸಲಾಗುವುದು. ಜೊತೆಗೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ನಗರಸಭಾ ಅಧ್ಯಕ್ಷ ಎಸ್.ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ವಿರಾಟ್ ಶಿವು, ಚೆಂಗುಮಣಿ, ಜಯಸುಂದರ್, ಯು.ರಾಜು ನಾಯಕ, ಕಂದಹಳ್ಳಿ ಮಹೇಶ್, ಪಾಳ್ಯ ಜಗದೀಶ್, ಹನೂರು ಪುಟ್ಟವೀರ ನಾಯಕ, ಸುರೇಶ್ ನಾಗ್, ಉಮಾ ಶಂಕರ್, ಭೀಮಪ್ಪ ನಾಯಕ, ಯಳಂದೂರು 10 ಬೀದಿಯ ಯಜಮಾನ ಮೂರ್ತಿ, ಗುಂಡ್ಲುಪೇಟೆ ಸುರೇಶ್‌ಕುಮಾರ್, ಮಾಧು ಇತರರು ಭಾಗವಹಿಸಿದ್ದರು.

ಮುಂದಾದರೂ ಜಿಲ್ಲಾ ದಸರಾ ಆಕರ್ಷಕವಾಗಿರಲಿ

ಫಲಪುಷ್ಪ ಪ್ರದರ್ಶನ, ದೀಪಾಲಂಕಾರ ಹೊರತುಪಡಿಸಿ, ಕೆಲ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಬೇಸರ

* ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಅ.13–ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ಈ ಬಾರಿ ನಡೆದ ದಸರಾ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ಮೂರನೇ ದಿನ ನಡೆದ ಕಾರ್ಯಕ್ರಮಕ್ಕೆ ಜನಸಾಗರವೇ ಹರಿದುಬಂದಿತ್ತು. ಜಿಲ್ಲಾಡಳಿತ ಮುಂಭಾಗದ ಫಲಪುಷ್ಪ ಕಾರ್ಯಕ್ರಮವೂ ಅತ್ಯಾಕರ್ಷಕವಾಗಿತ್ತು. ದೀಪಾಲಂಕಾರ ಕಳೆದ ಬಾರಿಗಿಂತ ಈ ಬಾರಿ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿತ್ತು. ಆದರೆ, ಇನ್ನುಳಿದು ಕವಿಗೋಷ್ಠಿ, ಆಹಾರ ಮೇಳ, ನಾಟಕ ಪ್ರದರ್ಶನ ಸೇರಿದಂತೆ ಹಲವು ಕಾರ್ಯಕ್ರಮಗಳು ಜನರನ್ನು ತನ್ನತ್ತಾ ಸೆಳೆಯುವಲ್ಲಿ ವಿಫಲವಾಗಿವೆ ಎಂಬ ಮಾತುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

ಹೇಳಿ, ಕೇಳಿ ದಸರಾ ಎಂದರೆ ಜಂಬೂಸವಾರಿ, ಕಲಾಮೇಳಗಳ ರಂಗು, ನಾಡಿನ ಸಂಸ್ಕೃತಿಯ ಹಿರಿಮೆಯ ಅನಾವರಣವೂ ಕಣ್ಣ ಮುಂದೆ ಹಾದು ಹೋಗುತ್ತದೆ. ಆದರೆ, ಜಿಲ್ಲೆಯಲ್ಲಿ ಮೂರು ದಿನ ನಡೆದ ದಸರಾ ಕಾರ್ಯಕ್ರಮದಲ್ಲಿ ಮುಖ್ಯವೇದಿಕೆ ಕಾರ್ಯಕ್ರಮ, ವಿದ್ಯುತ್ ದೀಪಾಲಂಕಾರ ಹಾಗೂ ಫಲಪುಷ್ಪ ಪ್ರದರ್ಶನ ಹೊರತುಪಡಿಸಿ, ಬೇರ್‍ಯಾವುದೇ ಕಾರ್ಯಕ್ರಮ ಅಷ್ಟಾಗಿ ಜನಾಕರ್ಷಣೆ ಮಾಡಲಿಲ್ಲ.

ಪ್ರತಿವರ್ಷದಂತೆ ಈ ಬಾರಿಯೂ ಜಿಲ್ಲಾ ದಸರಾದಲ್ಲಿ ಯುವ ದಸರಾ ಛಾಯೆಯ ಗಾಯನ, ಸಂಗೀತ ಕಾರ್ಯಕ್ರಮ, ಆಹಾರ ಮೇಳ, ರೈತ ದಸರಾ, ಮ್ಯಾರಥಾನ್, ಪಾರಂಪರಿಕ ನಡಿಗೆ, ಕವಿಗೋಷ್ಠಿ, ಕಲಾ ತಂಡಗಳ ಮೆರವಣಿಗೆ, ಫಲಪುಷ್ಪ ಪ್ರದರ್ಶನ, ದೀಪಾಲಂಕಾರ ಆಯೋಜಿಸಲಾಗಿತ್ತು ಆದರೆ, ಇವುಗಳಲ್ಲಿ ಕೆಲವೇ ಕಾರ್ಯಕ್ರಮಗಳು ಮೆಚ್ಚುಗೆ ಗಳಿಸಿದರೆ, ಬಹುತೇಕ ಕಾರ್ಯಕ್ರಮಗಳು ಸಾರ್ವಜನಿಕರಲ್ಲಿ ನಿರಾಸೆ ಮೂಡಿಸಿವೆ.


ರಾಜಕುಮಾರ್ ರಂಗಮಂದಿರದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಖಾಲಿ ಕುರ್ಚಿಗಳು.

ಹೌದು, ಚಾಮರಾಜೇಶ್ವರ ದೇವಸ್ಥಾನ ಪಕ್ಕದಲ್ಲಿ ನಡೆದ ಆಹಾರ ಮೇಳ ಕೇವಲ ಉದ್ಘಾಟನೆಗಷ್ಟೇ ಸೀಮಿತವಾಗಿತ್ತು. ಚುರುಮುರಿ, ಕೆಲ ಕುರುಕಲು ತಿನಿಸುಗಳ ಮಾರಾಟ ಬಿಟ್ಟರೆ ಬೇರ್‍ಯಾವುದೇ ಬಗೆಯ ತಿನಿಸುಗಳು ಕಾಣಲಿಲ್ಲ. ಹೀಗಾಗಿ ಸಾರ್ವಜನಿಕರಿಗೆ ಆಹಾರ ಮೇಳ ನಿರಾಸೆ ಮೂಡಿಸಿದೆ.

ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆದ ಕವಿಗೋಷ್ಠಿ, ನಾಟಕ ಪ್ರದರ್ಶನ ಹಾಗೂ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕೆಲ ಸಾಂಸ್ಕೃತಿಕ ಕಾರ್ಯಕ್ರಮ ಜನರಿಲ್ಲದೇ ಅನಾಥವಾಗಿ ನಡೆಯಿತು. ಇದಕ್ಕೆ ಪ್ರಚಾರದ ಕೊರತೆಯೋ ಅಥವಾ ವ್ಯವಸ್ಥಿತವಾಗಿ ಕಾರ್ಯಕ್ರಮ ರೂಪಿಸಲು ವಿಫಲತೆಯೋ ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿದೆ.

ಹಿಂದಿನ ವರ್ಷಗಳಲ್ಲಿ ಸರ್ಕಾರದಿಂದ ದಸರಾ ಆಯೋಜನೆಗೆ 1 ಕೋಟಿ ರೂ. ಅನುದಾನವಷ್ಟೇ ಬಿಡುಗಡೆಯಾಗುತ್ತಿತ್ತು. ಆಗೆಲ್ಲಾ ಚಾಮರಾಜನಗರದಲ್ಲಿ ನಾಲ್ಕು ದಿನ ಹಾಗೂ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಒಂದು ದಿನ ಗ್ರಾಮೀಣ ದಸರಾ ಆಯೋಜಿಸಲಾಗುತ್ತಿತ್ತು. ಆದರೆ, ಈ ಬಾರಿ ಸರ್ಕಾರದಿಂದ 2 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದರೂ ತಾಲೂಕು ಕೇಂದ್ರಗಳಲ್ಲಿ ದಸರಾ ಆಯೋಜನೆ ಮಾಡಲಿಲ್ಲ. ಇದು ತಾಲೂಕಿನ ಜನರಲ್ಲಿ ಮತ್ತಷ್ಟು ನಿರಾಸೆ ಮೂಡಿಸಿದೆ.

> ದಸರಾದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಹಾಗೆಯೇ ಪ್ರತಿದಿನ ರಾಜ್ಯಮಟ್ಟದ ಕಲಾವಿದರಿಂದ ಒಂದೊಂದು ಕಾರ್ಯಕ್ರಮ ಆಯೋಜಿಸಬೇಕು. ಇದರಿಂದ ಸಾರ್ವಜನಿಕರಿಗೆ ಹೆಚ್ಚಿನ ಮನರಂಜನೆ ದೊರೆಯುತ್ತದೆ.
> –ಕುಮಾರ್, ಚಾಮರಾಜನಗರ

2013ರಿಂದ ಆರಂಭವಾದ ದಸರಾ: ಚಾಮರಾಜನಗರ ಜಿಲ್ಲೆಯಲ್ಲೂ ಮಿನಿ ದಸರಾ ಆಚರಿಸಬೇಕೆಂಬ ಅಭಿಲಾಷೆಯಿಂದ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ದಿ.ಎಚ್.ಎಸ್.ಮಹದೇವಪ್ರಸಾದ್, ಸಂಸದರಾಗಿದ್ದ ದಿ.ಆರ್.ಧ್ರುವನಾರಾಯಣ್ ಅವರು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುದಾನ ಬಿಡುಗಡೆಗೊಳಿಸಿ ಅದ್ಧೂರಿಯಾಗಿ ದಸರಾ ಆಚರಿಸಿದರು.

ಆದರೆ, ವರ್ಷ ಕಳೆದಂತೆ ಜಿಲ್ಲೆಯಲ್ಲಿ ದಸರಾ ಕಳೆಗಟ್ಟುತ್ತಿಲ್ಲ. ಇದಕ್ಕೆ ಸ್ಥಳೀಯ ಜನಪ್ರತಿನಿಧಿಗಳ ತೊಡಗಿಸಿಕೊಳ್ಳುವಿಕೆಯಲ್ಲಿ ನಿರಾಸಕ್ತಿ, ಪ್ರತಿವರ್ಷ ಬದಲಾಗುವ ಜಿಲ್ಲಾಧಿಕಾರಿಗಳು, ದಸರಾ ಆಚರಣೆಗಾಗಿ ವಿವಿಧ ಕ್ಷೇತ್ರಗಳ ಗಣ್ಯರನ್ನು ಒಳಗೊಂಡ ಸಮಿತಿ ರಚನೆ ಮಾಡದಿರುವುದರಿಂದ ಅಂದುಕೊಂಡಂತೆ ದಸರಾ ನಡೆಯುತ್ತಿಲ್ಲ. ತರಾತುರಿಯಲ್ಲಿ ಕಾರ್ಯಕ್ರಮ ನಡೆಯುವಂತಾಗಿದೆ ಎಂದು ಸಾರ್ವಜನಿಕರ ವಲಯದಲ್ಲಿ ಆರೋಪ ಕೇಳಿ ಬರುತ್ತಿದೆ.

ವಿದ್ಯಾರ್ಥಿನಿಲಯದಲ್ಲೇ ಅಡುಗೆಭಟ್ಟ ಆತ್ಮಹತ್ಯೆ



ಬೇಗೂರು, ಅ.13–ಅಡುಗೆಭಟ್ಟ ವಿದ್ಯಾರ್ಥಿನಿಲಯದಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರಲ್ಲಿ ಭಾನುವಾರ ನಡೆದಿದೆ.

ಬೇಗೂರಿನ ಬಿಸಿಎಂ ಹಾಸ್ಟೆಲ್‌ನ ಅಡುಗೆಭಟ್ಟ ಪ್ರಮೋದ್ (29) ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ವಿ.ಸಿ.ವನರಾಜು, ಸಬ್‌ಇನ್ಸ್‌ಪೆಕ್ಟರ್ ಚರಣ್‌ಗೌಡ ಸ್ಥಳ ಪರಿಶೀಲಿಸಿದರು. ಹಾಸ್ಟೆಲ್ ಬಳಿ ಮೃತ ಪ್ರಮೋದ್ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಆದರೆ, ಸಂಜೆಯಾದರೂ ಬಿಸಿಎಂ ತಾಲೂಕು ಅಧಿಕಾರಿ ಹಾಗೂ ವಾರ್ಡನ್ ಸ್ಥಳಕ್ಕೆ ಆಗಮಿಸಿರಲ್ಲಿಲ್ಲ.

ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಒಳಮೀಸಲಾತಿಗಾಗಿ ಒತ್ತಾಯಿಸಿ ಪಾದಯಾತ್ರೆ

ಚಾಮರಾಜನಗರ: ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಅ.15 ರಂದು ನಗರದಲ್ಲಿ ಬೃಹತ್ ಪಾದಯಾತ್ರೆ ಆಯೋಜಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ಆಯಾ ರಾಜ್ಯಗಳ ಪರಮಾಧಿಕಾರವಿದೆ ಎಂದು ಸುಪ್ರೀಂಕೋರ್ಟ್‌ನ ತೀರ್ಪು ನೀಡಿದೆ. ಅದರಂತೆ ಒಳಮೀಸಲಾತಿ ಜಾರಿಗೊಳಿಸಲು ರಾಜ್ಯ ಸರ್ಕಾರದ ಗಮನ ಸೆಳೆಯಲು ಬೃಹತ್ ಪಾದಯಾತ್ರೆ ಆಯೋಜಿಸಲಾಗಿದೆ ಎಂದರು.

ಅಂದು ಬೆಳಗ್ಗೆ 10.30ಕ್ಕೆ ಪಾದಯಾತ್ರೆ ಆರಂಭವಾಗಲಿದ್ದು, ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಸಮುದಾಯ 30 ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಟ ನಡೆಸಲಾಗುತ್ತಿದ್ದು, ಮುಖ್ಯಮಂತ್ರಿಗಳು ಸಚಿವ ಸಂಪುಟದಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.


ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ, ಗೌರವಾಧ್ಯಕ್ಷ ಪಾಳ್ಯ ರಾಚಪ್ಪ, ಜಿಲ್ಲಾ ಮಾದಿಗ ಒಕ್ಕೂಟದ ಮುಖಂಡರಾದ ಕೆಸ್ತೂರು ಮರಪ್ಪ, ಸಂತೇಮರಹಳ್ಳಿ ರಾಜು, ಗುರುಲಿಂಗಯ್ಯ ಹಾಜರಿದ್ದರು.

ಗಿಡಗಂಟಿ ತೆರವುಗೊಳಿಸುವಂತೆ ಸೂಚನೆ

ಗುಂಡ್ಲುಪೇಟೆ: ಪಟ್ಟಣ ವ್ಯಾಪ್ತಿ ಖಾಲಿ ನಿವೇಶನಗಳ ಗಿಡಗಂಟಿಗಳನ್ನು ತೆರವುಗೊಳಿಸಬೇಕು ಎಂದು ಮಾಲೀಕರಿಗೆ ಪುರಸಭೆ ಸೂಚನೆ ನೀಡಿದೆ. ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡಗಂಟಿಗಳಿಂದ ಹಾವು, ಚೇಳು, ಇತರೆ ಕ್ರಿಮಿಕೀಟಗಳು ಹೆಚ್ಚಾಗಲಿದ್ದು, ಇದರಿಂದ ಅಕ್ಕಪಕ್ಕ ನಿವಾಸಿಗಳಿಗೆ ತೊಂದರೆಯಾಗಲಿದೆ. ಆದ್ದರಿಂದ ಆಯಾ ನಿವೇಶನದಾರರು ಗಿಡಗಂಟಿಗಳನ್ನು ತೆರವುಗೊಳಿಸಬೇಕು. ತಪ್ಪಿದಲ್ಲಿ ನಿಯಮಾನುಸಾರ ದಂಡ ವಿಧಿಸಲು ಕ್ರಮವಹಿಸಲಾಗುವುದೆಂದು ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಕೆಐಎಡಿಬಿ ಸಿಎ ನಿವೇಶನ ವಾಪಸ್ ಮಾಡಲು ನಿರ್ಧರಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬ


ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಹಗರಣ ವಿವಾದ ತಾರಕಕ್ಕೇರಿ ಕೊನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿಯವರು ತಮಗೆ ಮಂಜೂರಾಗಿದ್ದ 14 ನಿವೇಶನಗಳ ಹಿಂತಿರುಗಿಸಿದರು. ಈಗ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ಕುಟುಂಬದ ಸರದಿ. ಸಿಎ ನಿವೇಶನ ಹಂಚಿಕೆ ವಿವಾದ ಸ್ವರೂಪ ಪಡೆಯುತ್ತಿರುವ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಸೇರಿದ ಸಿದ್ಧಾರ್ಥ ವಿಹಾರ ಟ್ರಸ್ಟ್, ತಮಗೆ ಮಂಜೂರಾಗಿದ್ದ ಕೆಐಎಡಿಬಿ ಸಿಎ ನಿವೇಶನವನ್ನು ವಾಪಸ್ ಮಾಡಲು ನಿರ್ಧರಿಸಿದೆ.

ಬೆಂಗಳೂರಿನ ಏರೋಸ್ಪೇಸ್ ಮತ್ತು ಹೈಟೆಕ್ ಡಿಫೆನ್ಸ್ ಪಾರ್ಕ್‌ನಲ್ಲಿ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ ಮಂಜೂರು ಮಾಡಿರುವ 5 ಎಕರೆ ವಿಸ್ತೀರ್ಣದ ಸಿಎ ನಿವೇಶನವನ್ನು ವಾಪಸ್ ಮಾಡಲು ಮುಂದಾಗಿದೆ.

ನಿಯಮ ಉಲ್ಲಂಘಿಸಿ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಸಿಎ ನಿವೇಶನ ನೀಡಲಾಗಿದೆ ಎಂದು ಪ್ರತಿಪಕ್ಷ ಬಿಜೆಪಿ ಆರೋಪ ಮಾಡಿತ್ತು. ಈ ಸಂಬಂಧ ರಾಜ್ಯಪಾಲರಿಗೂ ದೂರು ನೀಡಲಾಗಿತ್ತು. ರಾಜ್ಯಪಾಲರು ಈ ಸಂಬಂಧ ವಿವರಣೆ ನೀಡುವಂತೆ ಮುಖ್ಯ ಕಾರ್ಯದರ್ಶಿಗೂ ಪತ್ರ ಬರೆದಿದ್ದರು. ಪ್ರಕರಣ ಗಂಭೀರ ಸ್ವರೂಪ ಪಡೆಯುವುದನ್ನು ಮನಗಂಡ ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಸಿದ್ಧಾರ್ಥ ವಿಹಾರ ಟ್ರಸ್ಟ್, ಇದೀಗ ಕೆಐಎಡಿಬಿ ಸಿಎ ನಿವೇಶನವನ್ನು ವಾಪಸ್ ಮಾಡಲು ತೀರ್ಮಾನಿಸಿದೆ.

ಸಿದ್ಧಾರ್ಥ ವಿಹಾರ್ ಟ್ರಸ್ಟ್‌ನ ಟ್ರಸ್ಟಿ ರಾಹುಲ್ ಖರ್ಗೆ 5 ಎಕರೆಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಕೇಂದ್ರ ತೆರೆಯುವುದಾಗಿ ಕೆಐಎಡಿಬಿಗೆ ಪ್ರಸ್ತಾವನೆ ಸಲ್ಲಿಸಿದ್ದರು. ಒಟ್ಟು 25 ಕೋಟಿ ಹೂಡಿಕೆ ಮಾಡಲಿದ್ದು, 150 ಮಂದಿಗೆ ಉದ್ಯೋಗ ನೀಡಲಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿತ್ತು. ಆದರೆ, ಪ್ರಸ್ತಾವನೆಯಲ್ಲಿ ಪ್ಯಾನ್ ಕಾರ್ಡ್ ಸಲ್ಲಿಸಿರಲಿಲ್ಲ. ಇದನ್ನು ಪರಿಗಣಿಸಬಹುದು ಎಂದು ಕೈಗಾರಿಕಾ ಸಚಿವ ಎ.ಬಿ.ಪಾಟೀಲ್ ಅಧ್ಯಕ್ಷತೆಯ ಏಕಗವಾಕ್ಷಿ ಸಮಿತಿ ಸಭೆ ಶಿಫಾರಸು ಮಾಡಿತ್ತು.

ನಿಯಮ ಉಲ್ಲಂಘನೆಯಾದರೂ ಪ್ರಭಾವ ಬಳಸಿ ಸಿಎ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಈ ಸಂಬಂಧ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ರಾಜ್ಯಪಾಲರಿಗೆ ದೂರು ನೀಡಿದ್ದರು. ಜೊತೆಗೆ ಆರ್‌ಟಿಐ ಕಾರ್ಯಕರ್ತ ಗಿರೀಶ್ ಕಲ್ಲಹಳ್ಳಿ ಅವರೂ ಕೆಐಎಡಿಬಿ ಸಿಎ ನಿವೇಶನ ಹಂಚಿಕೆಯಲ್ಲಿ ಅಧಿಕಾರ ದುರ್ಬಳಕೆ, ನಿಯಮ ಉಲ್ಲಂಘನೆ ಆರೋಪಿಸಿ ಇ.ಡಿ., ಲೋಕಾಯುಕ್ತ ಹಾಗೂ ರಾಜ್ಯಪಾಲರಿಗೆ ದೂರು ನೀಡಿದ್ದರು.


ಈ ಸಂಬಂಧ ಮಾತನಾಡಿರುವ ಸಚಿವ ಪ್ರಿಯಾಂಕ್ ಖರ್ಗೆ, ವೈಯಕ್ತಿಕವಾಗಿ ರಾಜಕೀಯ ಆರೋಪದಿಂದ ಬೇಸರವಾಗಿದೆ. ಹೀಗಾಗಿ, ಸಿಎ ಸೈಟ್ ಬೇಡ ಎಂದು ಟ್ರಸ್ಟಿ ರಾಹುಲ್ ಖರ್ಗೆ ಸೆ.20ರಂದು ಪತ್ರ ಬರೆದಿದ್ದಾರೆ. ಸಿಎ ಸೈಟ್ ಪಡೆಯುವುದಕ್ಕೆ ನಾವು ಅರ್ಹರಿದ್ದೇವೆ, ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಎರಡು, ಮೂರು ಕಾರಣ ಕೊಟ್ಟು ಸೈಟ್ ಮರಳಿ ನೀಡಿದ್ದಾರೆ. ಖಾಸಗಿ ಟ್ರಸ್ಟ್ ಅಲ್ಲ ಪಬ್ಲಿಕ್ ಟ್ರಸ್ಟ್ ಎಂದು ನಮೂದಿಸಿದ್ದಾರೆ. ಟ್ರಸ್ಟ್‌ಗೆ ಬಂದ ಹಣ ಯಾವುದೇ ಕಾರಣಕ್ಕೆ ದುರುಪಯೋಗ ಮಾಡಿಕೊಳ್ಳಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಸಿಎ ಸೈಟ್‌ನಲ್ಲಿ ಯಾವುದೇ ರೀತಿ ರಿಯಾಯಿತಿ ಕೊಡುವುದಕ್ಕೆ ಬರುವುದಿಲ್ಲ ಇದು ತರಬೇತಿಗೆ ಅಂತ ಸಿಎ ಸೈಟ್ ಇತ್ತು, ಆದರೆ ಯಾವುದೇ ಲಾಭದ ಉದ್ದೇಶ ಇರಲಿಲ್ಲ. ಆದರೆ ಬಿಜೆಪಿಯವರು ಹಲವು ರೀತಿಯ ಆರೋಪ ಮಾಡಿದರು ಎಂದರು.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ಡಿವೈಡರ್‌ಗೆ ಡಿಕ್ಕಿ: ಬೈಕ್ ಸವಾರ ಸಾವು

ಮೈಸೂರು, ಅ.13(ಎಂಕೆ)– ಬೈಕ್ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ವ್ಯಕ್ತಿಯೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಭಾನುವಾರ ರಾತ್ರಿ ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆದಿದೆ.

ಮೇಟಗಳ್ಳಿ ನಿವಾಸಿ ಸುನೀಲ್ ಕುಮಾರ್(35) ಮೃತ ವ್ಯಕ್ತಿ. ಈತ ಮೂಲತಃ ಉತ್ತರ ಪ್ರದೇಶದವನಾಗಿದ್ದು, ಕೆಲ ವರ್ಷಗಳಿಂದ ಮೈಸೂರಿನ ಮೇಟಗಳ್ಳಿಯಲ್ಲಿ ನೆಲೆಸಿ ಕೂಲಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದೆ. ಭಾನುವಾರ ರಾತ್ರಿ 7.30ರ ಸುಮಾರಿಗೆ ಮೇಟಗಳ್ಳಿ ಸಮೀಪದ ರಿಂಗ್ ರಸ್ತೆಯಲ್ಲಿರುವ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಎದುರು ಬೈಕ್‌ನಲ್ಲಿ ಬರುವಾಗ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದಿದ್ದಾನೆ. ಬಿದ್ದ ರಭಸಕ್ಕೆ ತಲೆಗೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ದಸರಾ ಮಕ್ಕಳ ರಂಗ ತರಬೇತಿ ಶಿಬಿರ ಸಮಾರೋಪ



'ಆನೆ ಬಂತು ಆನೆ' ಶೀರ್ಷಿಕೆಯಡಿ ಏರ್ಪಡಿಸಿದ್ದ ದಸರಾ ಮಕ್ಕಳ ರಂಗ ತರಬೇತಿ ಶಿಬಿರದ ಮಕ್ಕಳು ನಾಟಕ ಪ್ರದರ್ಶಿಸಿರುವುದು.

ಮೈಸೂರು, ಅ.13(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ 'ಆನೆ ಬಂತು ಆನೆ' ಶೀರ್ಷಿಕೆಯಡಿ ಏರ್ಪಡಿಸಿದ್ದ 12 ದಿನಗಳ ದಸರಾ ಮಕ್ಕಳ ರಂಗ ತರಬೇತಿ ಶಿಬಿರ ಭಾನುವಾರ ಸಮಾರೋಪಗೊಂಡಿತು.

ನಂತರ ಬೆಂಗಳೂರಿನ ವನ್ಯಜೀವಿ ಛಾಯಾಗ್ರಾಹಕ ಗೌರೀಶ್ ಮಾತನಾಡಿ, ಬೆಂಗಳೂರಿನ ಯಾಂತ್ರಿಕ ಜೀವನ ಮಕ್ಕಳಿಗೆ ಬಾಲ್ಯದಲ್ಲಿ ಸಿಗಬೇಕಾದ ವಾತಾವರಣ ಸಿಗುತ್ತಿಲ್ಲ. ಇದರಿಂದ ಮಕ್ಕಳು ಮಾನಸಿಕ ತೊಳಲಾಟದಲ್ಲಿ ಬೆಳೆಯುತ್ತಿದ್ದಾರೆ. ಅಲ್ಲಿನ ಮಕ್ಕಳಿಗೆ ತಮ್ಮ ಬಾಲ್ಯದ ನೆನಪಿನ ಬುತ್ತಿ ಎಂದರೆ ಎಲ್ಲವೂ ಮೊಬೈಲ್ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಲಾವಿದ ಸುಪ್ರೀತ್ ಭಾರಧ್ವಾಜ್ ನಡೆಸಿಕೊಟ್ಟ 12 ದಿನಗಳ ದಸರಾ ಮಕ್ಕಳ ರಂಗಬೇತಿ ಶಿಬಿರ ಮಕ್ಕಳ ಮನೋವಿಕಾಸಕ್ಕೆ ಪೂರಕವಾಗಿದೆ. ಮಕ್ಕಳಲ್ಲಿನ ಸೃಜನಶೀಲತೆಗೆ ಈ ಶಿಬಿರ ಅನುಕೂಲವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಬಿರದ ನಿರ್ದೇಶಕ ಸುಪ್ರೀತ್ ಭಾರದ್ವಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಕ್ಕಳಲ್ಲಿನ ಯಾಂತ್ರಿಕ ಬದುಕು ಅನಾವರಣಗೊಳಿಸುವ ಮಕ್ಕಳ ನಾಟಕ ಎಲ್ಲರನ್ನು ಆಕರ್ಷಿಸಿತು. ನಾಟಕದಲ್ಲಿ ಆದ್ವೈ, ತೇಜಸ್ವಿ, ಅನಿಕೇತನ, ಬಿ.ಆರ್.ನಿಶಾಂಕ್, ಚಿರಂತ್, ಡಿ.ಶಿವಾನಿ, ಶಾರದ, ಧನ್ವಿತ್, ಹಿತಾ, ವಿರಾಜ್, ಎಸ್.ಅನಿಕೇತನ, ಅವನಿ, ಅಕ್ಷರ, ಇಂಚರ, ಬಿ.ಆರ್.ನಿಶ್ಚಿತ, ಎಸ್.ಕಿರಣ, ದತ್ತ ಶ್ರೀಶಾ, ಎಸ್.ಹರ್ಷ, ಎಸ್.ಪತ್ಯಕ್ಷ, ಎಸ್.ಎನ್.ಕುಲದೀಪ್ ಈಶ್ವರ್, ವಿ.ಆಲ್, ಶಶಾಂಕ, ವಿಸ್ಮಿತ, ಜಿ.ಎನ್.ಕವಿತಾ ಭಾಗಿಯಾಗಿದ್ದರು. ಈ ವೇಳೆ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಚಲುವ ರಾಜ್, ಜೀವನಮುಕ್ತ ರಾಜೇಶ್ ಬಸವಣ್ಣ ಇದ್ದರು.

ಮೈಸೂರು ಮಿತ್ರ

ಭೇರ್ಯದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಆಚರಣೆ

ಓದುವ ಛಲ, ಹಂಬಲ ಇದ್ದರೆ ಖಾಸಗಿ ಶಿಕ್ಷಣ ಸಂಸ್ಥೆಗಳ ಅವಶ್ಯಕತೆ ಇಲ್ಲ



ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಮೈಸೂರು–ಚಾಮರಾಜನಗರ ವೀರಶೈವ ಲಿಂಗಾಯಿತ ಮಠಾಧಿಪತಿಗಳ ಗೋಷ್ಠಿ, ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ, ಪ್ರತಿಭಾ ಪುರಸ್ಕಾರ ಮತ್ತು ಲಿಂಗದೀಕ್ಷಾ ಸಂಸ್ಕಾರ ಕಾರ್ಯಕ್ರಮವನ್ನು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಕೆ.ಆರ್.ನಗರ, ಅ.13– ಪ್ರತಿಭೆ ವಿಕಸನವಾಗಿ ಉತ್ತಮ ಶಿಕ್ಷಣ ಪಡೆಯಲು ಖಾಸಗಿ ಶಿಕ್ಷಣ ಸಂಸ್ಥೆಗಳ ಅವಶ್ಯಕತೆ ಇಲ್ಲ. ಅದರ ಬದಲಿಗೆ ಓದುವ ಛಲ ಮತ್ತು ಹಂಬಲ ಇರಬೇಕು ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಮೈಸೂರು–ಚಾಮರಾಜನಗರ ವೀರಶೈವ ಲಿಂಗಾಯಿತ ಮಠಾಧಿಪತಿಗಳ ಗೋಷ್ಠಿ, ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ, ಪ್ರತಿಭಾ ಪುರಸ್ಕಾರ ಮತ್ತು ಲಿಂಗದೀಕ್ಷಾ ಸಂಸ್ಕಾರ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಓದಿದವರು ಉನ್ನತ ಸ್ಥಾನ ಅಲಂಕರಿಸಿದ್ದು, ಅವರು ಎಲ್ಲರಿಗೂ ಮಾದರಿಯಾಗಿರುವುದರಿಂದ ವಿದ್ಯಾರ್ಥಿಗಳು ಇದನ್ನು ಅರಿತು ಕಠಿಣ ಪರಿಶ್ರಮದಿಂದ ಕಲಿತು ಭವಿಷ್ಯ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಿದ್ಧಗಂಗಾ ಮಠಾಧೀಶರಾಗಿದ್ದ ಡಾ.ಶಿವಕುಮಾರ ಸ್ವಾಮೀಜಿ ಮತ್ತು ಸುತ್ತೂರು ಮಠದ ಡಾ.ರಾಜೇಂದ್ರ ಮಹಾಸ್ವಾಮಿಗಳು ಒಂದೇ ಆತ್ಮ ಎರಡು ದೇಹಗಳಂತಿದ್ದು, ಮಠಗಳ ಏಳಿಗೆ ಮತ್ತು ಸಮಾಜಮುಖಿ ಕೆಲಸ ಮಾಡಿದ ಮಹಾನ್ ಪುರುಷರು ಎಂದು ಬಣ್ಣಿಸಿದರು. ರಾಜೇಂದ್ರ ಶ್ರೀಗಳು 60 ವರ್ಷಗಳ ಹಿಂದೆ ಹಳ್ಳಿಗಳಿಗೆ ತೆರಳಿ ಧವಸ ಧಾನ್ಯ ಸಂಗ್ರಹಿಸಿ ಆ ಮೂಲಕ ಅನಾಥಾಲಯ ಮತ್ತು ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿ ಆರ್ಥಿಕವಾಗಿ ಹಿಂದುಳಿದವರು ಮತ್ತು ಬಡವರ ಪಾಲಿನ ದೈವವಾಗಿದ್ದರು ಎಂದು ತಿಳಿಸಿದರು.

ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಮಾಜ ಸೇವೆ ಮತ್ತು ಶೈಕ್ಷಣಿಕ ಕ್ರಾಂತಿ ದೇಶದ ಇತರ ಮಠಗಳಿಗೆ ಮಾದರಿಯಾಗಿದೆ. ಅಲ್ಲದೆ ಅವರ ಅಕ್ಷರ ಹಾಗೂ ಅನ್ನ ದಾಸೋಹ ಪರಂಪರೆ ಅನುಕರಣೀಯ ಎಂದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ನಾಡಿನ ಶೈಕ್ಷಣಿಕ ಮತ್ತು ಸಾಮಾಜಿಕ ಏಳಿಗೆಯಲ್ಲಿ ಸುತ್ತೂರು ಮಠದ ಕೊಡುಗೆ ಅಪಾರವಾಗಿದ್ದು, ವಿಶ್ವದ ಭೂಪಟದಲ್ಲಿ ಆ ಸಾಧನೆ ಅಚ್ಚಳಿಯದೆ ಉಳಿಯಲಿದೆ ಎಂದರು. ಈ ಮಠದಲ್ಲಿ ಕಲಿತವರು ದೇಶ ವಿದೇಶಗಳಲ್ಲಿ ಹೆಸರು ಮಾಡಿ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿದ್ದು, ಇಂತಹ ಉತ್ತಮ ಕೆಲಸ ಮಾಡುತ್ತಿರುವ ಸುತ್ತೂರು ಮಠ ನಮ್ಮ ಜಿಲ್ಲೆಯಲ್ಲಿ ಇರುವುದು ಎಲ್ಲರ ಹೆಮ್ಮೆ ಎಂದರು.

ಕೆ.ಆರ್.ನಗರ ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಬಸವ ಭವನದ ಮುಂದುವರಿದ ಕಾಮಗಾರಿಗೆ ಅಗತ್ಯವಿರುವ ಅನುದಾನ ಸರ್ಕಾರದಿಂದ ಕೊಡಿಸುವ ಕೆಲಸ ಮಾಡುವುದರೊಂದಿಗೆ ವೈಯಕ್ತಿಕವಾಗಿ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಜಗಜ್ಯೋತಿ ಬಸವೇಶ್ವರರ ತತ್ವ ಮತ್ತು ಸಿದ್ಧಾಂತಗಳನ್ನು ಪಾಲಿಸಿದ ರಾಜೇಂದ್ರಸ್ವಾಮಿಗಳು ಮಠದ ಘನತೆಯನ್ನು ಮುಗಿಲೆತ್ತರಕ್ಕೆ ಏರಿಸಿದ್ದು ಶಿಕ್ಷಣ ಕ್ರಾಂತಿ ಮಾಡಿದ್ದರು. ಈಗ ಆ ಪರಂಪರೆಯನ್ನು ಮುಂದುವರಿಸುತ್ತಿರುವ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ನಮಗೆ ಆದರ್ಶಪ್ರಾಯ ಎಂದು ನುಡಿದರು. ಕೆ.ಆರ್. ನಗರ ತಾಲೂಕು ಕೇಂದ್ರದಿಂದ ಸಿದ್ಧಗಂಗಾ ಮಠಕ್ಕೆ ನಿತ್ಯ ಮುಂಜಾನೆ ಸಾರಿಗೆ ಬಸ್ ಸಂಚಾರದ ವ್ಯವಸ್ಥೆ ಕಲ್ಪಿಸುವುದಾಗಿ ಪ್ರಕಟಿಸಿದರು.

ಸುತ್ತೂರು ಮಠದಲ್ಲಿ ಅಕ್ಷರದ ಜೊತೆ ಸಂಸ್ಕಾರ ಕೂಡ ಕಲಿಕೆ

ಸುತ್ತೂರು ಮಠದಲ್ಲಿ ಕಲಿತವರು ಅಕ್ಷರದ ಜೊತೆಗೆ ಸಂಸ್ಕಾರವನ್ನು ಕಲಿಯಲಿದ್ದು ಇದು ಆ ಮಠದ ಹೆಗ್ಗಳಿಕೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ ಗುರು ತಿಲಕರಾಗಿದ್ದ ಪರಮಪೂಜ್ಯ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಜಾತ್ಯಾತೀತವಾಗಿ ಪ್ರತಿಯೊಬ್ಬರನ್ನು ಕಂಡು ಮಠದಲ್ಲಿ ಅಕ್ಷರ, ಆರೋಗ್ಯ ಮತ್ತು ದಾಸೋಹ ಪರಂಪರೆಯನ್ನು ಆರಂಭಿಸಿ ನಾಡಿಗೆ ಬೆಳಕಾದ ಮಹಾನ್ ಪುರುಷ ಎಂದರು. ಮಠದಲ್ಲಿ ಕಲಿಯುವ ಮಕ್ಕಳು ಹಸಿವಿನಿಂದ ಇರಬಾರದು ಎಂದು ಸಂಕಷ್ಟದ ಕಾಲದಲ್ಲಿಯೂ ಜೋಳಿಗೆಯ ಮೂಲಕ ಬೇಡಿ ಅವರ ಹಸಿವು ನೀಗಿಸಿ ಅಕ್ಷರದ ಜೊತೆಗೆ ಅನ್ನವನ್ನು ನೀಡಿದ ಅವರು ದೈವಾಂಶ ಸಂಭೂತ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ಮಠದ ಘನತೆ ಮತ್ತು ಗೌರವವನ್ನು ಜಗದಗಲಕ್ಕೆ ವಿಸ್ತರಣೆ ಮಾಡುತ್ತಿದ್ದು ಅವರ ಆಶೀರ್ವಚನ ಹಾಗೂ ಮಾರ್ಗದರ್ಶನ ನಮಗೆ ಅತ್ಯಂತ ಅಗತ್ಯ ಎಂದರು.

ತುಮಕೂರಿನ ಸಿದ್ಧಗಂಗಾ ಮಠಾಧೀಶರಾಗಿದ್ದ ಕಾಯಕ ದಾಸೋಹಿ ಡಾ. ಶಿವಕುಮಾರ ಶ್ರೀಗಳು ಮಾನವ ಕುಲದ ಮೇರು ಪರ್ವತವಾಗಿದ್ದರಲ್ಲದೆ ತಮ್ಮ ಜೀವನವನ್ನು ಬಡವರು ಮತ್ತು ನೊಂದವರ ಏಳಿಗೆಗಾಗಿ ಸವೆಸಿದ ಅಭಿನವ ಬಸವಣ್ಣ ಎಂದು ಕೊಂಡಾಡಿದರು.

ತುಮಕೂರು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಮಹಾಸ್ವಾಮೀಜಿ, ಸಿದ್ಧಗಂಗಾ ಭಕ್ತರ ಬಳಗದ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ 109 ಮಂದಿಗೆ ಲಿಂಗದೀಕ್ಷೆ ಮಾಡಲಾಯಿತಲ್ಲದೆ ವೀರಶೈವ ಲಿಂಗಾಯಿತ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡಲಾಯಿತು.

ಬೆಟ್ಟದ ಪುರ ಸಲಿಲಾಖ್ಯ ಮಠದ ಚನ್ನಬಸವದೇಶಿಕೇಂದ್ರ ಸ್ವಾಮೀಜಿ, ಕರ್ಪೂರವಳ್ಳಿ ಮಠದ ಚಂದ್ರಶೇಖರಶಿವಾಚಾರ್ಯ ಸ್ವಾಮೀಜಿ, ಅರಕೆರೆ ವಿರಕ್ತ ಮಠದ ಸಿದ್ದೇಶ್ವರಸ್ವಾಮೀಜಿ, ಹಾಡ್ಯ ಈಶಾನ್ಯೇಶ್ವರ ಮಠದ ಬಸವರಾಜಶ್ರೀಗಳು, ಉದ್ಯಮಿ ಪಂಚಾಕ್ಷರಿ, ಸಿದ್ಧಗಂಗಾ ಭಕ್ತರ ಬಳಗದ ಪದಾಧಿಕಾರಿಗಳು, ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ, ಕೊಳ್ಳೇಗಾಲ ಮುಡಿಗುಂಡ ಮಠದ ಶ್ರೀಕಂಠ ಸ್ವಾಮಿ, ಹರವೆ ಮಠದ ಸರ್ಪಭೂಷಣ ಶ್ರೀಗಳು, ನೀಲಕಂಠಸ್ವಾಮಿ ಮಠದ ಸಿದ್ದಮಲ್ಲಸ್ವಾಮೀಜಿ, ಚಿಲಕವಾಡಿ ಮಠದ ಬಾಲ ಷಡಕ್ಷರ ಸ್ವಾಮೀಜಿ, ಎಲೆಮುದ್ದನಹಳ್ಳಿ ಮಠದ ಮಲೇಶ ಸ್ವಾಮೀಜಿ, ತಣ್ಣೀರು ಹಳ್ಳ ಮಠದ ವಿಜಯಕುಮಾರಸ್ವಾಮೀಜಿ ಸೇರಿದಂತೆ ಇತರ ಮಠಗಳ ಹರ ಗುರು ಚರಮೂರ್ತಿಗಳು ಮತ್ತು ನೂರಾರು ಭಕ್ತಾದಿಗಳು ಇದ್ದರು.



ಆದಿವಾಸಿ ಬಾಲಕನ ಶವಸಂಸ್ಕಾರಕ್ಕೆ ಪರದಾಟ

ಕಾಡಿನ ಸ್ಮಶಾನಕ್ಕೆ ರೈಲ್ವೆ ಬ್ಯಾರಿಕೇಡ್ ಅಳವಡಿಕೆ, ಹರಸಾಹಸದಿಂದ ಅಂತ್ಯಕ್ರಿಯೆ

ಹೆಚ್.ಡಿ.ಕೋಟೆ, ಅ.13– ನೀರು ಕುಡಿಯಲು ಹೋಗಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ ಆದಿವಾಸಿ ಬಾಲಕನ ಶವಸಂಸ್ಕಾರ ಮಾಡಲು ಹಾಡಿಯ ಜನರು ಪರದಾಡಿ ಹರಸಾಹಸಪಟ್ಟು ಅಂತ್ಯಕ್ರಿಯೆ ನೆರವೇರಿಸಿದ ಘಟನೆ ತಾಲೂಕಿನ ಹಿರೇಹಳ್ಳಿ ಎ ಕಾಲೋನಿ ಹಾಡಿಯಲ್ಲಿ ಸಂಭವಿಸಿದೆ. ತಾಲೂಕಿನ ತಾರಕ ಜಲಾಶಯದ ಹಿನ್ನೀರಿನ ಹಿರೇಹಳ್ಳಿ ಎ ಹಾಡಿಯ ನಿವಾಸಿ ಮಣಿಕಂಠ(14) ಸಾವನ್ನಪ್ಪಿದ ಬಾಲಕ. ಈತ 4 ದಿನದ ಹಿಂದೆ ತಾರಕ ಕಾಲುವೆಯಲ್ಲಿ ನೀರು ಕುಡಿಯಲು ಹೋಗಿ ಆಕಸ್ಮಿಕವಾಗಿ ಕಾಲು ಜಾರಿ ನಾಲೆಗೆ ಬಿದ್ದು ಮೃತಪಟ್ಟಿದ್ದ. ಹಾಡಿಯ ಜನರು ತಮ್ಮ ಪೂರ್ವಜರ ಕಾಲದಿಂದಲೂ ಅರಣ್ಯ ಪ್ರದೇಶದಲ್ಲಿ ಇರುವ ಸ್ಮಶಾನಕ್ಕೆ ಮೃತದೇಹ ಕೊಂಡೊಯ್ದು ಅಂತ್ಯಸಂಸ್ಕಾರ ಮಾಡು ವುದು ಸಂಪ್ರದಾಯ. ಆದರೆ ಅರಣ್ಯ ಇಲಾಖೆಯವರು ಈಗ ಅರಣ್ಯದ ಅಂಚಿನಲ್ಲಿ ಸ್ಮಶಾನಕ್ಕೆ ಹೋಗಲು ಯಾವುದೇ ಗೇಟ್ ಅಳವಡಿಸಿದೆ, ರೈಲ್ವೆ ಬ್ಯಾರಿಕೇಟ್ ನಿರ್ಮಿಸಿ ಅದಕ್ಕೆ ಸೋಲಾರ್ ಅಳವಡಿಸಿರುವ ಪರಿಣಾಮ ಹಾಡಿಯ ಜನರು ಮೃತದೇಹವನ್ನು ಅರಣ್ಯದೊಳಗೆ ಕೊಂಡೊಯ್ಯಲು ಸಾಧ್ಯವಾಗದೆ ಪರದಾಡಿದ್ದಾರೆ. ಜನರು ಮೃತದೇಹವನ್ನು ಹೊತ್ತು ಕೊಂಡು ಬಂದು ಕೆಳಗೆ ಇಟ್ಟು ಕಂದಕ ಇಳಿದು ರೈಲ್ವೆ ಕಂಬಿ ಕೆಳಗೆ ನುಗ್ಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಮೃತದೇಹವನ್ನು ಸಾಗಿಸುವ ಮನಕುಲುಕುವ ದೃಶ್ಯ ನಾಗರಿಕ ಸಮಾಜವನ್ನು ತಲೆ ತಗ್ಗಿಸುವಂತಿದೆ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯದ ಗಮನ ಅವಶ್ಯಕ



ಸರಗೂರು ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಶೇಷಚೇತನರಿಗಾಗಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮನೋ ವೈದ್ಯಕೀಯ ತಜ್ಞರಾದ ಡಾ.ಸ್ವಾಮಿನಾಥ್ ಜಿ ಮಾತನಾಡಿದರು

ಸರಗೂರು, ಅ.13– ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯದ ಗಮನ ಅವಶ್ಯಕ ಎಂದು ಮನೋ ವೈದ್ಯಕೀಯ ತಜ್ಞ ಡಾ.ಸ್ವಾಮಿನಾಥ್‌ಜಿ ಸಲಹೆ ನೀಡಿದ್ದಾರೆ.

ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಶೇಷ ಚೇತನರಿಗಾಗಿ ಸಮಗ್ರ ಆರೈಕೆ, ಬೆಂಬಲ ಮತ್ತು ಚಿಕಿತ್ಸಾ ಕಾರ್ಯಕ್ರಮದ ವತಿಯಿಂದ ಚಿತ್ತ ಸಂಜೀವಿನಿ ಚಾರಿಟಬಲ್ ಟ್ರಸ್ಟ್ ಹಾಗೂ ಸಮುದಾಯದ ಸಹಭಾಗಿತ್ವದೊಂದಿಗೆ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾನಸಿಕ ಸಮಸ್ಯೆ ಕುರಿತು ಮಾತನಾಡಿದರು.

2024 ವಿಶ್ವ ಸಂಸ್ಥೆಯು ಘೋಷಿಸಿರುವ 'ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯ' ಎಂಬ ಘೋಷವಾಕ್ಯದ ಉದ್ದೇಶ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಬಾರದು. ಕೆಲಸ ಮಾಡುವ ಜಾಗದಲ್ಲಿ ಮಾನಸಿಕ ಆರೋಗ್ಯ ಸಮಾನತೆಯಿಂದ ಇರಬೇಕು. ಕೆಲಸದಲ್ಲಿ ಒತ್ತಡ ಜಾಸ್ತಿ ಮಾಡಿಕೊಳ್ಳಬಾರದು. ಖುಷಿಯಿಂದ ಕೆಲಸವನ್ನು ಮಾಡಬೇಕು. ಎಲ್ಲಾ ಆರೋಗ್ಯಕ್ಕಿಂತ ಮುಖ್ಯವಾದುದ್ದು ಮಾನಸಿಕ ಆರೋಗ್ಯ. ಮನುಷ್ಯನಿಗೆ ದೈಹಿಕ ಆರೋಗ್ಯದ ಜೊತೆ ಮಾನಸಿಕ ಆರೋಗ್ಯಕ್ಕೆ ಗಮನ ಕೊಡುವುದು ತುಂಬಾ ಮುಖ್ಯವಾಗಿರುತ್ತದೆ. ಆದ್ದರಿಂದ ನಿಮ್ಮ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಿ ಹಾಗೂ ನಿಮ್ಮ ಅಕ್ಕಪಕ್ಕ, ನೆರೆ ಹೊರೆಯವರ ಮಾನಸಿಕ ಆರೋಗ್ಯವನ್ನು ಕಾಪಾಡಿ ಎಂದರು.

ಮನೋವೈದ್ಯ ಡಾ.ಶಮ ಮಾತನಾಡಿ, ನಮ್ಮ ಆರೋಗ್ಯಕ್ಕೆ ಹೆಚ್ಚು ಸಮಯವನ್ನು ಕೊಡುವುದು ಮುಖ್ಯ. ಪ್ರತಿಯೊಬ್ಬರು ಕೆಲಸ ಮಾಡುವಾಗ ಹೆಚ್ಚಿನ ಸಮಯವನ್ನು ಕೆಲಸಕ್ಕೆ ಒತ್ತು ನೀಡಿ ನಮ್ಮ ಆರೋಗ್ಯದ ಕಡೆ ಗಮನ ಕಡಿಮೆ ಮಾಡುತ್ತಿರುವುದು ಮಾನಸಿಕ ಸಮಸ್ಯೆಗೆ ದಾರಿಯಾಗುತ್ತದೆ ಎಂದರು. ಸಿಸಿಎಸ್‌ಟಿ ಕಾರ್ಯಕ್ರಮದ ಹಿರಿಯ ವ್ಯವಸ್ಥಾಪಕ ಎಂ.ಪಿ.ರಮೇಶ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ವಿವೈಎಮ್ ಸಹ ಕಾರ್ಯದರ್ಶಿಗಳು ಹಾಗೂ ಇಎನ್‌ಟಿ ವೈದ್ಯ ಡಾ. ದತ್ತಾತ್ರೀ ವಹಿಸಿದ್ದರು. ಹೌಸ್ ಕೀಪಿಂಗ್ ಮೇಲ್ವಿಚಾರಕ ಕೃಷ್ಣಕುಮಾರ, ಪಂಚಕರ್ಮ ಚಿಕಿತ್ಸಕ ಹಸೀನಾ, ಔಷಧಿ ವಿಭಾಗದ ಮೇಲ್ವಿಚಾರಕಿ ವಸಂತಬಾಯಿ, ಸಮುದಾಯ ಆರೋಗ್ಯ ಕಾರ್ಯಕರ್ತ ಸುರೇಂದ್ರ ಹಾಗೂ ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬುದ್ಧ, ಅಂಬೇಡ್ಕರ್ ಭಾವಚಿತ್ರ ಪೂಜಾ ವಸ್ತುವಾಗಿ ಮಾಡಬೇಡಿ



ಧಮ್ಮ ದೀಪ ಪಯಣ ಕಾರ್ಯಕ್ರಮಕ್ಕೆ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಚಾಲನೆ ನೀಡಿದರು.

ಮಲ್ಲುಂಡಿ, ಅ.13– ಬುದ್ಧ, ಅಂಬೇಡ್ಕರ್ ಚಿಂತನೆಗಳನ್ನು ಅಳವಡಿಸಿಕೊಂಡರೆ ಅವರನ್ನು ಜೀವಂತ ಇರಿಸಿದಂತಾಗುತ್ತದೆ ಎಂದು ತಿಳಿಸಿದ ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಬುದ್ಧ, ಅಂಬೇಡ್ಕರ್ ಭಾವಚಿತ್ರವನ್ನು ಪೂಜಾ ವಸ್ತುವಾಗಿ ಮಾಡದಂತೆ ಮನವಿ ಮಾಡಿದರು.

ಗ್ರಾಮದಲ್ಲಿ ಧಮ್ಮ ದೀಪ ಪಯಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದಲ್ಲಿ ಬಡತನಕ್ಕೆ ಕಾರಣ ನಿಮ್ಮ ಅಜ್ಞಾನ. ಜಗತ್ತಿನಲ್ಲಿ ಬುದ್ಧನೇ ಜಾತೀಯತೆಯನ್ನು ಹೋಗಲಾಡಿಸಿದ್ದು, ಬುದ್ಧ, ಡಾ. ಅಂಬೇಡ್ಕರ್ ಅವರು ಲಕ್ಷಾಂತರ ಜನರೊಂದಿಗೆ ಅ.14ರಂದು ಧಮ್ಮ ದೀಕ್ಷಾ ಪಡೆದು ಧಮ್ಮ ಪಯಣ ಮಾಡಿದ್ದಾರೆ ಎಂದರು.

ನಿಮ್ಮಲ್ಲಿ ಸಾಮಾಜಿಕ ಪ್ರಜ್ಞೆ ಬಂದಿದೆ ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ನಾವು ಕವಲು ದಾರಿಯಲ್ಲಿ ನಡೆಯದೆ ಬುದ್ಧ, ಅಂಬೇಡ್ಕರ್ ಅವರ ಚಿಂತನೆಯ ಹಾದಿಯಲ್ಲಿ ಸಾಗಲು ದೃಢ ನಿರ್ಧಾರ ಕೈಗೊಳ್ಳಬೇಕಾ ಗಿದೆ ಎಂದು ಕಿವಿಮಾತು ಹೇಳಿದರು.

ಬುದ್ಧ, ಅಂಬೇಡ್ಕರ್ ಅವರ ಭಾವಚಿತ್ರವನ್ನು ಪೂಜಾ ವಸ್ತುವಾಗಿ ಮಾಡಬೇಡಿ. ಸಂವಿಧಾನದ ಅವಕಾಶಗಳನ್ನು ನಾವೆಲ್ಲರೂ ಸಮ ಸಮಾಜದ ನಿರ್ಮಾಣಕ್ಕೆ ಬಳಸಬೇಕಿದೆ. ಪ್ರತಿಯೊಬ್ಬರು ಬುದ್ಧನ ಮಾರ್ಗದಲ್ಲಿ ನಡೆದಾಗ ಮಾತ್ರ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ ಎಂದು ತಿಳಿಸಿದರು.

ಶಾಸಕ ದರ್ಶನ್ ಮಾತನಾಡಿ, ಅ.14 ರಂದು ಬಾಬಾ ಸಾಹೇಬ್ ಡಾ.ಬಿ ಆರ್ ಅಂಬೇಡ್ಕರ್ ಅವರು ಮಹಾರಾಷ್ಟ್ರದ ನಾಗಪುರದಲ್ಲಿ ಸಾವಿರಾರು ಜನರ ಜೊತೆಗೆ ಬೌದ್ಧ ಧರ್ಮ ಸೇರಿ ಬುದ್ಧನ ಹಾದಿಯಲ್ಲಿ ಸಾಗಿ ಧಮ್ಮ ಪಯಣ ಮಾಡಿದ್ದರು. ಇಂತಹ ದಿನವನ್ನು ನಾವು ನೆನೆಯಬೇಕು. ಡಾ. ಅಂಬೇಡ್ಕರ್ ಅವರು ಬುದ್ಧನ ಮಾರ್ಗದಲ್ಲಿ ನಡೆದು ದೇಶಕ್ಕೆ ಸಂವಿಧಾನವನ್ನು ಕೊಡುಗೆ ನೀಡಿದ್ದಾರೆ. ಈಗಲೂ ಪ್ರತಿಯೊಬ್ಬರು ಬುದ್ಧನ ಮಾರ್ಗ ದರ್ಶನದಲ್ಲಿ ನಡೆದರೆ ಮಾತ್ರ ಅಸ್ಪೃಶ್ಯತೆ ಹೋಗಲಾಡಿಸಲು ಸಾಧ್ಯ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ಹಳ್ಳಿಗಳಲ್ಲಿ ಮೂಢನಂಬಿಕೆ ದೂರ ಉಳಿಯಬೇಕಿದೆ. ಡಾ. ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಮೂಲಕ ನಾವೆಲ್ಲರೂ ಸಾಗಬೇಕಿದೆ.ಡಾ. ಬಿ.ಆರ್.ಅಂಬೇಡ್ಕರ್ ಅವರು ಕಡು ಬಡತನದಲ್ಲಿ ವಿದ್ಯಾಭ್ಯಾಸ ಮಾಡಿ ದೇಶದಲ್ಲಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು ಎಂದು ಪಣತೊಟ್ಟು ಎಲ್ಲಾ ಕಷ್ಟಗಳನ್ನು ಅರಿತು ದೇಶಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಆದ್ದರಿಂದ ಪ್ರತಿಯೊಬ್ಬರು ಬುದ್ಧ, ಅಂಬೇಡ್ಕರ್ ಅವರ ಹಾದಿಯಲ್ಲಿ ಸಾಗಬೇಕು ಎಂದು ತಿಳಿಸಿದರು.

ಈ ವೇಳೆ ಕೊಳ್ಳೇಗಾಲದ ಬೌದ್ಧ ವಿಹಾರದ ಸುಗತಪಾಲ ಬಂತೇಜಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮಾಜಿ ಮೇಯರ್ ಪುರುಷೋತ್ತಮ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಸಾಹಿತಿಗಳಾದ ಮಂಗಳ ಮೂರ್ತಿ, ಮಹದೇವಪ್ಪ, ಹನಸೋಗೆ ಸೋಮಶೇಖರ್, ಮಲ್ಲುಂಡಿ ಮಹದೇವಸ್ವಾಮಿ, ಮುಖಂಡರಾದ ಮಹದೇವಯ್ಯ, ದುಂಡಯ್ಯ, ದಸಂಸ ಮುಖಂಡ ಕೃಷ್ಣ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು. ಗ್ರಾಮದಲ್ಲಿ ಪ್ರತಿ ಮನೆಯಲ್ಲೂ ಧಮ್ಮ ದೀಪ ಹಚ್ಚಿ ಬುದ್ಧನ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮದ ಹಿರಿಯರಿಗೆ ಸನ್ಮಾನಿಸಲಾಯಿತು.

ಸರಗೂರು ಸಾರಿಗೆ ಬಸ್ ನಿಲ್ದಾಣದಲ್ಲಿ ಆಯುಧ ಪೂಜೆ



ಆಯುಧ ಪೂಜೆ ಅಂಗವಾಗಿ ಸರಗೂರಿನ ಸಾರಿಗೆ ಬಸ್ ನಿಲ್ದಾಣದಲ್ಲಿ ಚಾಲಕರು ಹಾಗೂ ನಿರ್ವಾಹಕರು ತಾವು ಚಾಲನೆ ಮಾಡುವ ಬಸ್‌ಗಳಿಗೆ ಪೂಜೆ ಸಲ್ಲಿಸಿ, ಸಿಹಿ ಹಂಚಿದರು. ಈ ವೇಳೆ ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳಾದ ಮಹದೇವನಾಯಕ, ಎಸ್.ಟಿ.ರವಿಕುಮಾರ್, ಮಹೇಶ್, ಶಿವಲಿಂಗ, ಧನ್ಯಕುಮಾರ್, ವಿವೇಕ ಇನ್ನಿತರರಿದ್ದರು.

ಗುರುಮಲ್ಲೇಶ್ವರ ಹಳೆ ಮಠದ ಕಟ್ಟಡಕ್ಕೆ ನೆರವು



ನಂಜನಗೂಡು ತಾಲೂಕಿನ ದೇವನೂರು ಗ್ರಾಮದ ಗುರುಮಲ್ಲೇಶ್ವರ ಹಳೆ ಮಠದ ಕಟ್ಟಡ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ನಿಧಿಯಿಂದ 2.5 ಲಕ್ಷ ರೂ. ಮೊತ್ತದ ಚೆಕ್ ಅನ್ನು ವಿಜಯ್ ಕುಮಾರ್ ನಾಗನಾಳ ದೇವಸ್ಥಾನದ ಸಮಿತಿಯವರಿಗೆ ಹಸ್ತಾಂತರ ಮಾಡಿದರು.

ನಂಜನಗೂಡು, ಅ.13– ತಾಲೂಕಿನ ದೇವನೂರು ಗ್ರಾಮದ ಗುರುಮಲ್ಲೇಶ್ವರ ಹಳೆ ಮಠದ ಕಟ್ಟಡ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ನಿಧಿಯಿಂದ 2.5 ಲಕ್ಷ ರೂ. ಮೊತ್ತದ ಚೆಕ್ ಅನ್ನು ಶನಿವಾರ ಮೈಸೂರು ಜಿಲ್ಲಾ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ ದೇವಸ್ಥಾನದ ಸಮಿತಿಗೆ ಹಸ್ತಾಂತರ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯ್ ಕುಮಾರ್ ನಾಗನಾಳ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಕಾಮಗಾರಿ ನಡೆಸಲು ಮುಂದೆ ಬರುವವರಿಗೆ ಆತ್ಮ ಸ್ಥೈರ್ಯ ತುಂಬುವ ಸಲುವಾಗಿ ಧರ್ಮಸ್ಥಳ ಕ್ಷೇತ್ರದಿಂದ ಪ್ರಸಾದದ ರೂಪದಲ್ಲಿ ಹಣಕಾಸಿನ ನೆರವನ್ನು ನೀಡುತ್ತಿದ್ದಾರೆ. ನಾಡಿನ ಹಲವು ದೇಗುಲಗಳಿಗೆ ಈ ರೀತಿಯ ನೆರವು ತಲುಪಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಭುಸ್ವಾಮಿ, ನಾಗೇಂದ್ರ, ಪ್ರಭುಸ್ವಾಮಿ, ಪುಟ್ಟಬುದ್ಧಿ, ಸೋಮಶೇಖರ್ ಮೂರ್ತಿ ತಾಲೂಕು ಯೋಜನಾಧಿಕಾರಿ ಧರ್ಮರಾಜ್, ವಲಯ ಮೇಲ್ವಿಚಾರಕ ಲೋಹಿತ್, ವಸಂತ ಉಪಸ್ಥಿತರಿದ್ದರು.

ಹುಣಸೂರಲ್ಲಿ ಡಾ. ಅಂಬೇಡ್ಕರ್ ಪ್ರತಿಮೆ ಸ್ಥಾಪನೆ

ಪ್ರಗತಿಪರ ಸಂಘಟನೆಗಳ ಮನವಿಗೆ ಶಾಸಕ ಹರೀಶ್‌ಗೌಡ ಭರವಸೆ



ಪ್ರಗತಿಪರ ಸಂಘಟನೆಗಳು ನೀಡಿದ ಮನವಿಯನ್ನು ಶಾಸಕ ಹರೀಶ್‌ಗೌಡ ಸ್ವೀಕರಿಸಿದರು.

ಹುಣಸೂರು, ಅ.13– ಹುಣಸೂರು ಪಟ್ಟಣದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯನ್ನು ಆದ್ಯತೆ ಮೇರೆಗೆ ಸ್ಥಾಪಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ ನೀಡಿದ್ದಾರೆ.

ಹುಣಸೂರು ಪ್ರಗತಿಪರ ಸಂಘಟನೆಗಳು ನೀಡಿದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪನೆ ಮಾಡಬೇಕೆಂಬುದು ಬಹುವರ್ಷಗಳ ಬೇಡಿಕೆಯಾಗಿದ್ದು, ನಮ್ಮ ತಂದೆಯವರು ಶಾಸಕರಾಗಿದ್ದ ಕಾಲದಿಂದಲೂ ಈ ವಿಷಯದ ಬಗ್ಗೆ ದಸಂಸ ಮತ್ತು ಇತರೆ ಸಂಘಟನೆಗಳು ಮನವಿ ಮಾಡುತ್ತಾ ಬಂದಿವೆ. ಈಗ ನಾನು ಜನರ ಆಶೀರ್ವಾದದೊಂದಿಗೆ ಹುಣಸೂರು ಶಾಸಕನಾಗಿದ್ದು, ನನ್ನ ಅವಧಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣ ಮಾಡುವ ಅವಕಾಶ ದೊರೆತಿರುವುದು ನನ್ನ ಪೂರ್ವ ಜನ್ಮದ ಪುಣ್ಯವಾಗಿದೆ ಎಂದರು.

ಈ ಮಹತ್ವವಾದ ಕೆಲಸವನ್ನು ನಾನು ಆದ್ಯತೆ ಮೇರೆಗೆ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರ ಗಮನಕ್ಕೆ ತಂದು ಒಮ್ಮತದಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಮತ್ತು ಉದ್ಯಾನವನ್ನು ಬಹುಕೋಟಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ವಹಿಸುತ್ತೇನೆ ಎಂದು ದಲಿತರ ಮುಖಂಡರಿಗೆ ಭರವಸೆ ನೀಡಿದರು.

ಇದಕ್ಕೂ ಮುನ್ನ ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ನಗರಸಭೆಯ ಸಾಮಾನ್ಯ ಸಭೆಯಲ್ಲಿ ಶಾಸಕರಾದ ನೀವು ಅಂಬೇಡ್ಕರ್ ಪ್ರತಿಮೆ ಸ್ಥಾಪನೆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹುಣಸೂರು ನಗರದ ಸಂವಿಧಾನ ವೃತ್ತದ ನಗರಸಭೆ ಮೈದಾನದ ಪಕ್ಕದಲ್ಲಿ 40X40 ಅಳತೆಯ ಜಾಗವನ್ನು ಗುರುತಿಸಿ ಈ ಜಾಗದಲ್ಲಿ ಉದ್ಯಾನವನ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ಬಹುಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು.

ವಕೀಲರಾದ ಪುಟ್ಟರಾಜು ಮಾತನಾಡಿ, ನಿಮ್ಮ ತಂದೆಯವರು ಹುಣಸೂರಿನ ಶಾಸಕರಾದಾಗಿನಿಂದಲೂ ಅಂಬೇಡ್ಕರ್ ಅವರ ಪುತ್ಥಳಿಯನ್ನು ಹುಣಸೂರು ನಗರದಲ್ಲಿ ಸ್ಥಾಪನೆ ಮಾಡುವಂತೆ ಎಲ್ಲಾ ಶಾಸಕರಿಗೆ ದಲಿತರು ಮನವಿ ಮಾಡುತ್ತಾ ಬರುತ್ತಿದ್ದರೂ ಯಾವುದೇ ಶಾಸಕರು ಈ ಮಹತ್ವವಾದ ಕಾರ್ಯವನ್ನು ಮಾಡಲು ನಿರ್ಲಕ್ಷಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ನಗರಸಭಾ ಅಧ್ಯಕ್ಷ ಶರವಣ, ಆಯುಕ್ತೆ ಮಾನಸ, ಸದಸ್ಯರಾದ ದೊಡ್ಡಹೆಜ್ಜೂರು ರಮೇಶ, ಕೃಷ್ಣರಾಜಗುಪ್ತ ಸತೀಶ್, ದಲಿತ ಮುಖಂಡರಾದ ಬಸವಲಿಂಗಯ್ಯ, ಆದಿಜಾಂಬವ ಸಂಘದ ಬಿ.ಶಿವಣ್ಣ, ದಸಂಸದ ರತ್ನಪುರಿ ಪುಟ್ಟಸ್ವಾಮಿ, ದೇವೇಂದ್ರ ಕುಳುವಾಡಿ, ಕಿರಿಜಾಜಿ ಗಜೇಂದ್ರ, ಬಲ್ಲೇನಹಳ್ಳಿ ಕೆಂಪರಾಜು, ಕೊಳಗಟ್ಟ ಕೃಷ್ಣ, ಅತ್ತಿಕುಪ್ಪೆ ರಾಮಕೃಷ್ಣ, ಸಿದ್ದೇಶ, ಅಂಬೇ ಡ್ಕರ್ ಸೇನೆಯ ನಾಗೇಶ್, ದೊಡ್ಡಹೆಜ್ಜೂರು, ಸಂತೋಷ್ ಕೆ.ಎಂ. ವಾಡಿ, ಸೋಮನಹಳ್ಳಿಯ ಕೆಂಪರಾಜು ಮುಂತಾದವರು ಹಾಜರಿದ್ದು ಮನವಿ ಸಲ್ಲಿಸಿದರು.

'ಅಂತಿಮ ಯಾತ್ರೆ' ವಾಹನ ಸಾರ್ವಜನಿಕ ಸೇವೆಗೆ

ನಗರ ಪ್ರದೇಶಗಳಲ್ಲಿ ಶವ ಸಾಗಿಸಲು ಜನರೇ ಇಲ್ಲದಂತಾಗಿದೆ



ಅಂತಿಮ ಯಾತ್ರೆ ವಾಹನವನ್ನು ತುಮಕೂರಿನ ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಮಹಾಸ್ವಾಮಿಗಳು ಭಾನುವಾರ ಸಾರ್ವಜನಿಕ ಸೇವೆಗೆ ಲೋಕಾರ್ಪಣೆಗೊಳಿಸಿದರು.

ತಿ.ನರಸೀಪುರ, ಅ.13– ಪಟ್ಟಣದ ಶ್ರೀ ಶಿವಕುಮಾರ ಸ್ವಾಮಿಗಳ ಸೇವಾ ಟ್ರಸ್ಟ್ ವತಿಯಿಂದ ನಿರ್ಮಿಸಲಾಗಿರುವ ಅಂತಿಮ ಯಾತ್ರೆ ವಾಹನವನ್ನು ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾನುವಾರ ಸಾರ್ವಜನಿಕ ಸೇವೆಗೆ ಲೋಕಾರ್ಪಣೆಗೊಳಿಸಿದರು.

ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ ಅವರ ನಿರಂತರ ಪ್ರಯತ್ನದಿಂದ ಸಾರ್ವಜನಿಕರ ಸೇವೆಗಾಗಿ ಸಿದ್ಧಪಡಿಸಲಾಗಿರುವ ಶವ ಸಾಗಿಸುವ ವಾಹನವನ್ನು ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಏರ್ಪಡಿಸಲಾಗಿದ್ದ ಸರಳ ಸಮಾರಂಭದಲ್ಲಿ ತುಮಕೂರು ಶ್ರೀಗಳು ಟೇಪ್ ಕತ್ತರಿಸುವ ಮೂಲಕ ಸಾರ್ವಜನಿಕ ಸೇವೆಗೆ ಸಮರ್ಪಿಸಿದರು. ಈ ವೇಳೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮನುಷ್ಯನ ಬದುಕು ಯಾಂತ್ರಿಕವಾಗಿದ್ದು, ಶವ ಸಂಸ್ಕಾರ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಸಮಯವಿಲ್ಲದಂತಾಗಿರುವುದು ದುರದೃಷ್ಟಕರವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಶವ ಸಂಸ್ಕಾರ ಕಾರ್ಯಕ್ರಮ ಅಚ್ಚುಕಟ್ಟಾಗಿ ಸಂಪ್ರದಾಯ ಬದ್ಧವಾಗಿ ನಡೆದರೆ, ಪಟ್ಟಣ ಪ್ರದೇಶದಲ್ಲಿ ಶವ ಸಾಗಿಸಲು ಜನರ ಕೊರತೆ ಎದುರಾಗಿದೆ. ಹಾಗಾಗಿ ಮೃತದೇಹವನ್ನು ಸಾಗಿಸಲು ಅಂತಿಮ ಯಾತ್ರೆ ವಾಹನವನ್ನು ಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್ ಸಿದ್ಧಪಡಿಸಿದೆ. ಇದರಿಂದ ಯಾವುದೇ ತೊಂದರೆ ಎದುರಾಗದೇ ಶವ ಸಂಸ್ಕಾರ ನಡೆಸಲು ಸಾಧ್ಯವಾಗುತ್ತದೆ ಎಂದರು.

ಟ್ರಸ್ಟ್ ಗೌರವಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶದ ನಿವಾಸಿಗಳು ಹಲವಾರು ಕಾರಣಗಳಿಂದ ಸಾವನ್ನಪ್ಪಿದಾಗ, ಶವವನ್ನು ಗೌರವಯುತವಾಗಿ ಸಾಗಿಸಲು ಸಹಕಾರಿಯಾಗಲಿ ಎಂಬ ಉದ್ದೇಶದಿಂದ ಟ್ರಸ್ಟ್ ಶವ ಸಾಗಿಸುವ ವಾಹನ ಸಿದ್ಧಪಡಿಸಿದೆ.

ಈ ವೇಳೆ ಮಾಡ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನಸ್ವಾಮಿ, ಸರಗೂರು ಹೊಸಮಠದ ಸಹಜಾನಂದಸ್ವಾಮಿ, ಬಿಲಿಗೆರೆ ಹುಂಡಿ ಮಠದ ಶ್ರೀಗಳು, ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ಪದಾಧಿಕಾರಿಗಳಾದ ಕೆಬ್ಬೇಹುಂಡಿ ಮಾಯಪ್ಪ, ಅದೃಷ್ಟ ಮಾದಪ್ಪ, ಕಾರ್ ಮಲ್ಲಪ್ಪ, ತುರುಗನೂರು ಮಲ್ಲೇಶ್, ವಾಟಾಳು ಗುರುಪಾದ, ಮಾವಿನಹಳ್ಳಿ ಸೋಮಣ್ಣ, ಹೆಳವರಹುಂಡಿ ಬಸವ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ವೀರಶೈವ ಸೇವಾ ಸಮಿತಿ ಅಧ್ಯಕ್ಷ ಶಾಂತರಾಜು, ಕೇಬಲ್ ರಾಜಶೇಖರ್, ಹೆಳವರಹುಂಡಿ ಮೂರ್ತಿ, ಕೈಯಂಬಳ್ಳಿ ಅಶೋಕ್, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ವೀರಪ್ಪ ಒಡೆಯರಹುಂಡಿ ಸಂತೋಷ್, ಅಕ್ಕಿ ನಾಗಪ್ಪ, ಬಿ.ವೀರಭದ್ರಪ್ಪ, ಗುರುಮಲ್ಲ, ಕರೋಹಟ್ಟಿ ರಾಜಶೇಖರ, ಶ್ರೀರಂಗಪಟ್ಟಣ ನಾಗರಾಜು, ನಿಲಸೋಗೆ ಮಹಾದೇವ್ ಪ್ರಸಾದ್, ವಾಸುವಳ್ಳಿ ಉಮೇಶ್, ದೊಡ್ಡನಹುಂಡಿ ನಂಜುಂಡಸ್ವಾಮಿ, ಎಸ್‌ಬಿಟಿ ಸುರೇಶ್, ಆಡಿಟರ್ ಮಂಜುನಾಥ್ ಸೇರಿದಂತೆ ಹರ–ಗುರು–ಚರ ಮೂರ್ತಿಗಳು ಹಾಜರಿದ್ದರು.

ಅರಮನೆ ಆವರಣದಲ್ಲಿ ಅಭಿಮನ್ಯು ನೇತೃತ್ವದ ದಸರಾ ಗಜಪಡೆ ರಿಲ್ಯಾಕ್ಸ್

● ಜಂಬೂಸವಾರಿ ಯಶಸ್ಸಿನ ಹೀರೋಗಳನ್ನು ಕಣ್ತುಂಬಿಕೊಳ್ಳಲು ಜನರ ತವಕ ● ಯಶಸ್ವಿ ಟಾಸ್ಕ್; ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಅರಣ್ಯಾಧಿಕಾರಿಗಳು



ಅರಮನೆ ಆವರಣದಲ್ಲಿ ವಿಶ್ರಾಂತಿ ಮೂಡ್‌ನಲ್ಲಿರುವ ಗಜಪಡೆ ಬಳಿ ನೆರೆದಿರುವ ಪ್ರವಾಸಿಗರು.



ಮಾವುತರು, ಕಾವಾಡಿಗಳ ಮಕ್ಕಳು ಆಟೋಟದಲ್ಲಿ ಮಗ್ನರಾಗಿದ್ದರು.

ಮೈಸೂರು,ಅ.13(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಜಂಬೂ ಸವಾರಿಯ ಯಶಸ್ಸಿನ ಹೀರೋಗಳಾದ ಅಭಿಮನ್ಯು ನೇತೃತ್ವದ ದಸರಾ ಗಜಪಡೆ ಭಾನುವಾರ ಅರಮನೆ ಆವರಣದಲ್ಲಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದವು.

ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಜಂಬೂಸವಾರಿ ವೀಕ್ಷಿಸಲು ಸೇರಿದ್ದ ಅಪಾರ ಜನಸ್ತೋಮದ ನಡುವೆ ಅಂಬಾರಿ ಆನೆ ಅಭಿಮನ್ಯು ಸೇರಿದಂತೆ 11 ಆನೆಗಳು ಭಾಗಿಯಾಗಿ ಗಮನ ಸೆಳೆದಿದ್ದವು. ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಪ್ರಮುಖ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿರುವ ಗಜಪಡೆ ಅರಮನೆ ಆವರಣದ ಬಿಡಾರದಲ್ಲಿ ವಿರಮಿಸಿದವು.

ಭಾನುವಾರ ಬೆಳಗ್ಗಿನಿಂದ ಸಂಜೆವರೆಗೂ ಕುಸುರೆ, ಬೆಲ್ಲ, ಸೊಪ್ಪು, ಬೇಯಿಸಿದ ಧಾನ್ಯ ಒಳಗೊಂಡಂತೆ ತಯಾರಿಸಿದ್ದ ಪೌಷ್ಠಿಕ ಆಹಾರ ನೀಡಲಾಯಿತು. ಎಲ್ಲಾ ಆನೆಗಳಿಗೆ ಸ್ನಾನ ಮಾಡಿಸಿ, ಹಸಿ ಹುಲ್ಲು, ಆಲದ ಸೊಪ್ಪು, ಅರಳಿಸೊಪ್ಪನ್ನು ನೀಡಿ ಆರೈಕೆ ಮಾಡಲಾಯಿತು.

ವಿರಮಿಸಿದ ಆನೆಗಳು: ಗಜಪಡೆ ನಾಯಕ ಅಭಿಮನ್ಯು ಹಾಗೂ ಹಿರಿಯ ಆನೆ ವರಲಕ್ಷ್ಮೀ ಎಂದಿನಂತೆ ಕೋಡಿ ಸೋಮೇಶ್ವರ ದೇವಾಲಯದ ಬಳಿ ನಿರ್ಮಿಸಿದ್ದ ಪ್ರತ್ಯೇಕ ಶೆಡ್‌ನಲ್ಲಿ ಬೀಡು ಬಿಟ್ಟಿದ್ದರೆ, ಶಾಶ್ವತ ಶೆಡ್‌ನಲ್ಲಿ ಭೀಮ, ರೋಹಿತ, ಲಕ್ಷ್ಮೀ, ದೊಡ್ಡರವೆ ಲಕ್ಷ್ಮೀ, ಏಕಲವ್ಯ ಕಾಲ ಕಳೆದವು. ಮೈದಾನದಲ್ಲಿ ಮರದ ಕೆಳಗೆ ಮಹೇಂದ್ರ ಹಾಗೂ ಗೋಪಿ ವಿರಮಿಸಿದರೆ, ಭುವನೇಶ್ವರಿ ದೇವಾಲಯದ ಪಕ್ಕದಲ್ಲಿ ನಿರ್ಮಿಸಿದ್ದ ತಾತ್ಕಾಲಿಕ ಶೆಡ್‌ನಲ್ಲಿ ಧನಂಜಯ, ಪ್ರಶಾಂತ, ಕಂಜನ್, ಹಿರಣ್ಯ, ಸುಗ್ರೀವ ಆನೆಗಳು ಕಾಲ ಕಳೆದವು.

ಬಿಸಿ ನೀರಿನ ಸ್ನಾನ: 750 ಕೆಜಿ ತೂಕದ ಚಿನ್ನದ ಅಂಬಾರಿ ಸೇರಿದಂತೆ 1100 ಕೆಜಿ ಭಾರ ಹೊತ್ತು ಜಂಬೂಸವಾರಿಯಲ್ಲಿ ಸಾಗಿದ್ದ ಅಭಿಮನ್ಯುವಿಗೆ ಕಳೆದ ರಾತ್ರಿಯೇ ಬಿಸಿ ನೀರಿನಿಂದ ಸ್ನಾನ ಮಾಡಿಸಲಾಗಿತ್ತು. ಶಾರೀರಿಕ ನೋವು ನಿವಾರಣೆಗೆ ಬಿಸಿ ನೀರು ಸ್ನಾನ ಮಾಡಿಸುವ ಪರಿಪಾಠವಿದೆ.

ಆಟೋಟದಲ್ಲಿ ಮಗ್ನರಾಗಿದ್ದ ಮಕ್ಕಳು: ಜಂಬೂಸವಾರಿ ಮುಗಿದ ಹಿನ್ನೆಲೆಯಲ್ಲಿ ಮಾವುತರು, ಕಾವಾಡಿಗಳು ಆನೆಗಳ ಆರೈಕೆ ಮಾಡುವುದರೊಂದಿಗೆ ಜನರು ಆನೆಗಳ ಬಳಿ ನುಸುಳದಂತೆ ಎಚ್ಚರ ವಹಿಸಿದ್ದರು. ಇತ್ತ ಮಾವುತರು, ಕಾವಾಡಿಗಳ ಮಕ್ಕಳು ಆಟೋಟದಲ್ಲಿ ಮಗ್ನರಾಗಿದ್ದರು.

ಮಾವುತರು, ಕಾವಾಡಿಗಳ ಕುಟುಂಬದ ಮಹಿಳೆಯರು ಕಾಡಿಗೆ ಮರಳಲು ಬಟ್ಟೆ, ಪಾತ್ರೆ ತೊಳೆದು ಸಾಮಗ್ರಿಗಳನ್ನು ಪ್ಯಾಕ್ ಮಾಡಿಕೊಳ್ಳಲಾರಂಭಿಸಿದ್ದರು.

ನೀರಲ್ಲಿ ಮಿಂದೆದ್ದ ಆನೆಗಳು: ಗಜಪಡೆ ಭೀಮ, ಏಕಲವ್ಯ, ರೋಹಿತ, ಲಕ್ಷ್ಮೀ, ವರಲಕ್ಷ್ಮೀ, ಪ್ರಶಾಂತ, ಮಹೇಂದ್ರ ಸೇರಿದಂತೆ ಇನ್ನಿತರ ಆನೆಗಳು ಗಂಟೆ ಗಟ್ಟಲೇ ನೀರಲ್ಲಿ ಮಿಂದೆದ್ದವು.

ಆನೆ ಕಾಣಲು ಮುಗಿಬಿದ್ದ ಪ್ರವಾಸಿಗರು: ಅಭಿಮನ್ಯು ಸೇರಿದಂತೆ ದಸರಾ ಆನೆಗಳನ್ನು ವೀಕ್ಷಿಸಲು ಸಾಕಷ್ಟು ಜನರು ಆಗಮಿಸಿದ್ದರು. ಕೆಲವರು ಆನೆಯ ಬಳಿ ನಿಂತು ಫೋಟೋ ತೆಗೆಸಿಕೊಂಡರು. ಬಳಿಕ ಆನೆಗಳ ಮಜ್ಜನ ನೋಡಿ ಸಂಭ್ರಮಿಸಿದರು. ಹಿರಿಯರು–ಕಿರಿಯರು ಎನ್ನದೆ ಸಾವಿರಾರು ಜನರು ಭೇಟಿ ನೀಡಿದ್ದರು. ಚಿಣ್ಣರ ಸಂಭ್ರಮವಂತೂ ಮುಗಿಲು ಮುಟ್ಟಿತ್ತು. ಆನೆಗಳನ್ನು ಹತ್ತಿರದಿಂದ ನೋಡಿ ಖುಷಿಪಟ್ಟರು. ಆನೆ ಬಗ್ಗೆ ತಮ್ಮಲ್ಲಿದ್ದ ಕುತೂಹಲದ ಸಂಗತಿಗಳನ್ನು ಮಾವುತರಲ್ಲಿ ಚರ್ಚಿಸಿ ಪರಿಹಾರ ಕಂಡುಕೊಂಡರು. ಕೆಲವರು ತಾವು ತಂದಿದ್ದ ಬಾಳೆಹಣ್ಣು, ಸಿಹಿ ತಿಂಡಿಗಳನ್ನು ಮಾವುತರ ಮೂಲಕ ಆನೆಗಳಿಗೆ ತಿನ್ನಿಸಿ ಸಂತಸಪಟ್ಟರು. ತಾವು ತಂದಿದ್ದ ತಿಂಡಿಯನ್ನು ಅಲ್ಲಲ್ಲಿ ಕುಳಿತು ಸವಿದರು.

ಅಭಿಮನ್ಯು ಅಚ್ಚುಮೆಚ್ಚು: ಕ್ಯಾಪ್ಟನ್ ಅಭಿಮನ್ಯು ಹಾಗೂ ಭೀಮ, ಮಹೇಂದ್ರ, ಹೊಸ ಆನೆ ಏಕಲವ್ಯ ಶೆಡ್‌ಗಳ ಬಳಿಯೇ ಹೆಚ್ಚು ಜನ ಮತ್ತು ಮಕ್ಕಳು ಸೇರಿದ್ದರು. ಅದರಲ್ಲೂ ಮಾವುತ ವಸಂತನ ಜತೆ ಮಾತಿಗಿಳಿದು ಅಭಿಮನ್ಯು ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿದರು. ರಾಜವಂಶಸ್ಥೆ ವಿಶಾಲಾಕ್ಷಿದೇವಿ ಪುತ್ರಿ ಶ್ರುತಿ ಅವರು ಆನೆ ಶೆಡ್‌ಗಳ ಬಳಿ ಬಂದು ರೋಹಿತ ಮತ್ತು ಲಕ್ಷ್ಮಿಗೆ ಸೌತೆಕಾಯಿ ನೀಡಿದರು.

ಸವದತ್ತಿ ಯಲ್ಲಮ್ಮನ ದರ್ಶನ ಪಡೆದ ಸಿಎಂ; ಪತ್ನಿ ಹೆಸರಲ್ಲಿ ವಿಶೇಷ ಪೂಜೆ



ಬೆಳಗಾವಿ: ಮುಖ್ಯಮಂತ್ರಿ ಸಿಎಂ ಸಿದ್ದರಾಮಯ್ಯ ಭಾನುವಾರ ಶಕ್ತಿ ಪೀಠಗಳಲ್ಲಿ ಒಂದಾದ ಸವದತ್ತಿ ಯಲ್ಲಮ್ಮ ದೇಗುಲಕ್ಕೆ ಭೇಟಿ ನೀಡಿ ದರ್ಶನ ಪಡೆದರು.


ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಗೆ ಯಲ್ಲಮ್ಮ ಗುಡ್ಡಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಾದ್ಯ ಮೇಳಗಳೊಂದಿಗೆ ಸ್ವಾಗತಿಸಲಾಯಿತು. ಮಂತ್ರ ಘೋಷಗಳೊಂದಿಗೆ ದೇವಿಯ ದರ್ಶನಕ್ಕೆ ಅರ್ಚಕರು ಆಹ್ವಾನಿಸಿದರು. ಇದೇ ವೇಳೆ ದೇವಸ್ಥಾನದ ಅರ್ಚಕ ಕೊಟ್ಟ ಎರಡು ನಿಂಬೆ ಹಣ್ಣುಗಳನ್ನು ಕೈಯಲ್ಲಿ ಹಿಡಿದುಕೊಂಡು ದೇವಸ್ಥಾನ ಪ್ರವೇಶಿಸಿದ ಸಿದ್ದರಾಮಯ್ಯ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಪತ್ನಿ ಪಾರ್ವತಿ ಹೆಸರಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಅರ್ಚಕರು ಅವರ ಹೆಸರಲ್ಲಿ ಪೂಜೆ ಸಲ್ಲಿಸಿ, ತಿಲಕ ಇಟ್ಟು, ಮಂಗಳಾರತಿ ನೀಡಿ, ನಾಗಮೂರ್ತಿ ದೇವಿಯ ಬೆಳ್ಳಿ ಕಿರೀಟವನ್ನು ಸಿದ್ದರಾಮಯ್ಯ ಅವರ ತಲೆಗೆ ಮುಟ್ಟಿಸಿ ಆಶೀರ್ವಾದ ಮಾಡಿದರು. ದೇವಿಯ ಆರತಿ ಆಗುವವರೆಗೂ ದೇವಿ ಸನ್ನಿಧಾನದಲ್ಲಿ ನಿಂತು ದರ್ಶನ ಪಡೆದ ಸಿಎಂ, ತಾವೇ ಕುಂಕುಮ ಹಚ್ಚಿಕೊಂಡರು. ಬಳಿಕ 500 ರೂ. ಆರತಿ ತಟ್ಟೆಗೆ ಹಾಕಿದರು.

ದೇವಿ ಮುಂದೆ 10 ನಿಮಿಷ ಕುಳಿತು ಡಿಸಿಎಂ ಡಿ.ಕೆ.ಶಿವಕುಮಾರ ಪ್ರಾರ್ಥಿಸಿದರು. ದೇವಸ್ಥಾನದ ಹೊರಗೆ ಡಿಕೆಶಿ ಬರುವವರೆಗೆ ಸಿಎಂ ಸಿದ್ದರಾಮಯ್ಯ ಕಾದು ನಿಂತಿದ್ದರು. ಈ ವೇಳೆ ಸಚಿವರಾದ ಹೆಚ್.ಕೆ. ಪಾಟೀಲ್, ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳ್ಕರ್, ಶಾಸಕರಾದ ವಿಶ್ವಾಸ್ ವೈದ್ಯ, ಬಾಬಾ ಸಾಹೇಬ ಪಾಟೀಲ್, ಭರಮಗೌಡ ಕಾಗೆ, ಆಸಿಫ್ ಸೇಠ್, ಎನ್.ಹೆಚ್.ಕೋನರೆಡ್ಡಿ, ಚನ್ನರಾಜ ಹಟ್ಟಿಹೊಳಿ ಸೇರಿ ಮತ್ತಿತರರು ಸಿಎಂ ಸಿದ್ದರಾಮಯ್ಯ ಅವರಿಗೆ ಸಾಥ್ ಕೊಟ್ಟರು.

ದೇವಿ ದರ್ಶನ ಪಡೆದು ವಾಪಸ್ ಆಗುವಾಗ ಸಿಎಂ ಸಿದ್ದರಾಮಯ್ಯ ಅವರಿಗೆ ಸವದತ್ತಿ ಯಲ್ಲಮ್ಮ ದೇವಿಯ ಅರ್ಚಕ ರಾಜ್ಯದಲ್ಲಿರುವ ಅರ್ಚಕರ ವೇತನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದರು. ಸಂಬಂಧಿಸಿದ ಸಚಿವರ ಜೊತೆ ಚರ್ಚಿಸಿ ವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದರು.

ಜಾತಿಗಣತಿ ವರದಿ ಜಾರಿಗೆ ಅ.16ರಂದು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ



ಮೈಸೂರಿನ ಕನಕ ಭವನದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಭಾನುವಾರ ಸಭೆ ನಡೆಸಲಾಯಿತು.

ಮೈಸೂರು, ಅ.13(ಎಂಕೆ)– ಜಾತಿಗಣತಿ ವರದಿ ಜಾರಿಗೊಳಿಸಲು ಒತ್ತಾಯಿಸಿ ಅ.16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಶೋಷಿತ ಸಮುದಾಯ, ಹಿಂದುಳಿದ ವರ್ಗಗಳ ಮುಖಂಡರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಒಮ್ಮತದ ನಿರ್ಧಾರ ಕೈಗೊಂಡರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅ.18 ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿ ವರದಿಯನ್ನು ಮಂಡಿಸುವಂತೆ ಒತ್ತಾಯಿಸಿ ಅ.16 ರಂದು ಬೃಹತ್ ಪ್ರತಿಭಟನೆ ನಡೆಸಬೇಕು ಎಂದು ತೀರ್ಮಾನಿಸಲಾಯಿತು.

ಈ ವೇಳೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಜಾತಿಗಣತಿ ವರದಿಯನ್ನು ಕರ್ನಾಟಕ ಸರ್ಕಾರ ಅನುಷ್ಠಾನಗೊಳಿಸಬೇಕು. ಇದರ ಅನುಷ್ಠಾನದಿಂದ ಎಲ್ಲಾ ಸಮುದಾಯಗಳಿಗೂ ಸರ್ಕಾರದ ಸವಲತ್ತುಗಳು ದೊರೆಯಲಿವೆ. ಆದ್ದರಿಂದ ಪ್ರತಿಭಟನೆಗೆ ಶೋಷಿತ ಹಾಗೂ ಹಿಂದುಳಿದ ವರ್ಗಗಳ ಮುಖಂಡರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಮುಖಂಡರಾದ ರಾಮಚಂದ್ರಪ್ಪ, ಅನಂತ್ ನಾಯಕ, ರಾಮೇಗೌಡ, ಪುಟ್ಟಸಿದ್ದೇಗೌಡ, ರಾಮಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಶ್ವಂ (ತೆ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ವೆಟ್ಟೈಯನ್ (ತ):** ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, **ಮಾರ್ಟಿನ್ (ಕ):** ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	**ಜಿಗ್ರಾ (ಹಿಂ):** ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಮಾರ್ಟಿನ್ (ಕ):** ಮ.1.15ಕ್ಕೆ, **ಬ್ಲ್ಯಾಕ್ (ತ):** ಸಂ.4.30ಕ್ಕೆ.
ಸ್ಕ್ರೀನ್ 3	**ಮಾರ್ಟಿನ್ (ಕ):** ಬೆ.10.10ಕ್ಕೆ, ರಾ.7ಕ್ಕೆ, **ಇಬ್ಬನಿ ತಬ್ಬಿದ ಇಳೆಯಲಿ (ಕ):** ಮ.1.15ಕ್ಕೆ, **ಅನ್ನ (ಕ):** ಸಂ.4.30ಕ್ಕೆ, **ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ):** ರಾ.10ಕ್ಕೆ.
ಸ್ಕ್ರೀನ್ 4	**ಮಾರ್ಟಿನ್ (ಕ):** ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, **ವೆಟ್ಟೈಯನ್ (ತ):** ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದೇವರ 1 (ತೆ):** ಮ.12.20ಕ್ಕೆ, **ವೆಟ್ಟೈಯನ್ (ತ):** ಮ.3.35ಕ್ಕೆ, ಸಂ.6.40ಕ್ಕೆ, **ಮಾರ್ಟಿನ್ (ಕ):** ರಾ.9.45ಕ್ಕೆ.
ಸ್ಕ್ರೀನ್ 2	**ವೆಟ್ಟೈಯನ್ (ತ):** ಬೆ.10ಕ್ಕೆ, **ಮಾರ್ಟಿನ್ (ಕ):** ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	**ಮಾರ್ಟಿನ್ (ಕ):** ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, **ವೆಟ್ಟೈಯನ್ (ತ):** ರಾ.8.20ಕ್ಕೆ.
ಸ್ಕ್ರೀನ್ 4	**ವೆಟ್ಟೈಯನ್ (ಕ):** ಮ.12.25ಕ್ಕೆ, **ವೆಟ್ಟೈಯನ್ (ತ):** ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.


ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಈ ಬಾರಿ ದಸರಾದಲ್ಲಿ ಮೃಗಾಲಯ, ಕಾರಂಜಿ ಕೆರೆಗೆ 1.80 ಲಕ್ಷ ಜನ ಭೇಟಿ

ಮೂರು ವರ್ಷಗಳ ವೀಕ್ಷಕರ ಭೇಟಿಯ ಮಾಹಿತಿ ನೀಡಿದ ಮೃಗಾಲಯ



ದಸರಾ; ಹತ್ತು ದಿನಗಳ ವೀಕ್ಷಕರ ಸಂಖ್ಯೆ

ವರ್ಷ	ವೀಕ್ಷಕರು	ಆಯುಧಪೂಜೆ	ವಿಜಯದಶಮಿ
2024	1,79,714	23,382	36,467
2023	1,83,002	31,515	26,370
2022	1,69,993	25,236	38,751



ಮೈಸೂರು, ಅ.13(ಬಿಎಲ್‌ಯು)– ಮೈಸೂರು ಪ್ರವಾಸಿಗರ ನೆಚ್ಚಿನ ತಾಣ. ಅದರಲ್ಲೂ ದಸರಾ ವೇಳೆ ದೇಶ–ವಿದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿ, ನಾಡಹಬ್ಬದ ಸೊಬಗನ್ನು ಸವಿದು, ಸಂತೃಪ್ತರಾಗುತ್ತಾರೆ. ಎಲ್ಲಾ ಪ್ರವಾಸಿ ತಾಣಗಳಲ್ಲೂ ಪ್ರವಾಸಿಗರು ಕಿಕ್ಕಿರಿದಿರುತ್ತಾರೆ. ಹಾಗೆಯೇ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನಕ್ಕೆ ಈ ಬಾರಿಯ ದಸರಾ ವೇಳೆ ಸುಮಾರು 1.80 ಲಕ್ಷ ವೀಕ್ಷಕರು ಭೇಟಿ ನೀಡಿದ್ದಾರೆ.

ದಸರಾ ಮಹೋತ್ಸವಕ್ಕೆ ಚಾಲನೆ ದೊರೆತ ಅ.3ರಂದು 11,525 ಮಂದಿ, ಅ.4ರಂದು 11,172, ಅ.5ರಂದು 17,810, ಅ.6ರಂದು 26,238, ಅ.7ರಂದು 14,877, ಅ.8ರಂದು 10,044, ಅ.9ರಂದು 14,588, ಅ.10ರಂದು 12,997, ಅ.11 ಆಯುಧಪೂಜೆ ದಿನದಂದು 23,382, ಅ.12 ವಿಜಯದಶಮಿಯಂದು 36,467 ಹಾಗೂ ಇತರೆ 614 ಮಂದಿ ವೀಕ್ಷಕರು ಸೇರಿದಂತೆ ಒಟ್ಟು 1,79,714 ಮಂದಿ ಮೃಗಾಲಯ ಹಾಗೂ ಕಾರಂಜಿಕೆರೆ ವೀಕ್ಷಿಸಿದ್ದಾರೆ.

ಹತ್ತು ದಿನಗಳಲ್ಲಿ ವಿಜಯದಶಮಿ ಯಂದು ಅತೀ ಹೆಚ್ಚು 36,467 ಮಂದಿ ವೀಕ್ಷಕರು ಭೇಟಿ ನೀಡಿದ್ದು, ಕಳೆದ ವರ್ಷಕ್ಕಿಂತ 10 ಸಾವಿರ ಸಂಖ್ಯೆ ಹೆಚ್ಚಾಗಿದೆ. ಭಾನುವಾರ ಅ.29 ಹಾಗೂ ಆಯುಧ ಪೂಜೆ ದಿನದಂದೂ ಹೆಚ್ಚು ಸಂಖ್ಯೆಯಲ್ಲಿ ವೀಕ್ಷಿಸಿದ್ದಾರೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ತಿಳಿಸಿದ್ದಾರೆ.

ಹಿಂದಿನ 2 ವರ್ಷಗಳು: 2023ರ ದಸರಾ ವೇಳೆ 10 ದಿನಗಳಲ್ಲಿ 1,83,002 ವೀಕ್ಷಕರು ಹಾಗೂ 2022ರಲ್ಲಿ 1,69,993 ಮಂದಿ ವೀಕ್ಷಕರು ಮೃಗಾಲಯ ಹಾಗೂ ಕಾರಂಜಿ ಕೆರೆಗೆ ಭೇಟಿ ನೀಡಿದ್ದಾರೆ.

ಏಪ್ರಿಲ್–ಸೆಪ್ಟೆಂಬರ್: ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಪ್ರಸಕ್ತ ವರ್ಷ 18,36,163 ಮಂದಿ, 2023ರಲ್ಲಿ 18,94,446 ಹಾಗೂ 2022ರಲ್ಲಿ 14,61,153 ಮಂದಿ ವೀಕ್ಷಕರು ಭೇಟಿ ನೀಡಿದ್ದಾರೆ.

ದಸರಾ ಮಹೋತ್ಸವದ ವೇಳೆ ಮೃಗಾಲಯ ಹಾಗೂ ಕಾರಂಜಿಕೆರೆ ಆವರಣದ ಸ್ವಚ್ಛತೆ ಕಾಯ್ದುಕೊಳ್ಳುವುದರ ಜೊತೆಗೆ ಉತ್ತಮ ಸಹಕಾರ ನೀಡಿದ ಎಲ್ಲಾ ವೀಕ್ಷಕರು, ಆರಕ್ಷಕರು, ಸ್ವಯಂ ಸೇವಕರು ಹಾಗೂ ಮೃಗಾಲಯದ ಸಿಬ್ಬಂದಿ ವರ್ಗಕ್ಕೆ ಮೃಗಾಲಯ ಆಭಾರಿಯಾಗಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ಧನ್ಯವಾದ ತಿಳಿಸಿದ್ದಾರೆ.

ಜಂಬೂಸವಾರಿ ಜರುಗಿದ ಮಾರನೇ ದಿನ

ಅರಮನೆಗೆ 27,040 ಮಂದಿ ಭೇಟಿ



ಭಾನುವಾರ ಸಂಜೆ ಅರಮನೆ ವಿದ್ಯುತ್ ದೀಪಾಲಂಕಾರದಲ್ಲಿ ಬೆಳಗುವುದನ್ನು ನೋಡಲು ನೆರೆದಿದ್ದ ಭಾರೀ ಜನಸ್ತೋಮ.

ಮೈಸೂರು,ಅ.13(ಪಿಎಂ)– ಜಂಬೂಸವಾರಿ ಜರುಗಿದ ಮಾರನೇ ದಿನವಾದ ಭಾನುವಾರವೂ ಮೈಸೂರಿನಲ್ಲಿ ಜನದಟ್ಟಣೆ ಇತ್ತು. ಅರಮನೆ ಸುತ್ತಮುತ್ತ ಸೇರಿದಂತೆ ನಗರದ ಹೃದಯಭಾಗದಲ್ಲಿ ಎಲ್ಲಿ ನೋಡಿದರೂ ಜನರ ದಂಡು ಸಾಮಾನ್ಯವಾಗಿತ್ತು. ಅಂತೆಯೇ ಭಾನುವಾರ 27,040 ಮಂದಿ ಮೈಸೂರು ಅರಮನೆಗೆ ಭೇಟಿ ನೀಡಿ ಅದರ ಅಂದ–ಚಂದವನ್ನು ಕಣ್ತುಂಬಿಕೊಂಡಿದ್ದಾರೆ.

ಅಲ್ಲದೆ, ಅರಮನೆ ವೀಕ್ಷಣೆ ಅವಧಿ ಮುಗಿದ ಬಳಿಕ ಹೊರಾವರಣದಲ್ಲಿ ಕಾದು ಕುಳಿತಿದ್ದ ವೀಕ್ಷಕರು, ಲಕ್ಷ ಇಂಕ್ಯಾಂಡೇಸೆಂಟ್ ಬಲ್ಬ್‌ಗಳ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಿದ ಅರಮನೆಯ ಅಂದವನ್ನು ಕಂಡು ಪುಳಕಗೊಂಡರು. ಅಲ್ಲದೆ, ವಿದ್ಯುತ್ ದೀಪಾಲಂಕಾರದಿಂದ ಹೊಂಗಿರಣದ ಪ್ರಭೆಯಂತೆ ಬೆಳಗುತ್ತಿದ್ದ ಅರಮನೆಯ ಚಿತ್ರಣವನ್ನು ಕ್ಯಾಮರಾ ಹಾಗೂ ಮೊಬೈಲ್‌ಗಳಲ್ಲಿ ಸೆರೆ ಹಿಡಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, 23,315 ವಯಸ್ಕರು, 3,616 ಮಕ್ಕಳು ಹಾಗೂ 109 ವಿದೇಶಿ ವಯಸ್ಕರು ಸೇರಿದಂತೆ ಒಟ್ಟು 27,040 ಮಂದಿ ಭಾನುವಾರ ಅರಮನೆಗೆ ಭೇಟಿ ನೀಡಿ ವೀಕ್ಷಣೆ ಮಾಡಿದ್ದಾರೆ. ಅಲ್ಲದೆ, ಇಂದು ಅರಮನೆ ವಿದ್ಯುತ್ ದೀಪಾಲಂಕಾರ ಶುರುವಾಗುತ್ತಿದ್ದಂತೆ ಅರಮನೆ ಹೊರಾವರಣದಲ್ಲಿ ನೆರೆದಿದ್ದ ಭಾರೀ ಸಂಖ್ಯೆಯ ಜನ ಹರ್ಷಚಿತ್ತರಾದರು. ನನ್ನ ಅಂದಾಜಿನ ಪ್ರಕಾರ ಸುಮಾರು 80 ಸಾವಿರ ಮಂದಿ ಅರಮನೆ ದೀಪಾಲಂಕಾರ ನೋಡಿ ಸಂಭ್ರಮಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಫಲಪುಷ್ಪ ಪ್ರದರ್ಶನಕ್ಕೆ ಪ್ರವೇಶ ಉಚಿತವಾದರೂ ಟಿಕೆಟ್ ನೀಡಿ ಹಣ ವಸೂಲಿ ಮಾಡುತ್ತಿದ್ದ ಸಿಬ್ಬಂದಿ

ಪ್ರಶ್ನಿಸಿದವರ ಮೇಲೆ ಹರಿಹಾಯ್ದು; ತಿರುಗಿ ಬಿದ್ದಾಗ ಕೌಂಟರ್ ಬಂದ್; ಉಚಿತ ಪ್ರವೇಶ


ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಟಿಕೆಟ್ ನೀಡಿ ಹಣ ವಸೂಲಿ ಮಾಡುತ್ತಿರುವುದು

ಮೈಸೂರು,ಅ.13(ಜಿಎ)–ಇಂದಿನಿಂದ (ಭಾನುವಾರ)ದಸರಾ ಫಲಪುಷ್ಪ ಪ್ರದರ್ಶನಕ್ಕೆ ಪ್ರವಾಸಿಗರು ಮತ್ತು ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿದ್ದರೂ, ಪ್ರವಾಸಿಗರಿಗೆ ಟಿಕೆಟ್ ಪ್ರವೇಶ ಶುಲ್ಕ ವಸೂಲಿ ಮಾಡಿದ ಸಿಬ್ಬಂದಿ, ತಮ್ಮನ್ನು ಪ್ರಶ್ನಿಸಿದವರ ವಿರುದ್ಧವೇ ವಾಗ್ವಾದ ನಡೆಸಿದ್ದಾರೆ.

ದಸರಾ ಮಹೋತ್ಸವದ ಅಂಗವಾಗಿ ನಗರದ ಕುಪ್ಪಣ ಪಾರ್ಕ್‌ನಲ್ಲಿ ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನವನ್ನು ಅ.3ರಿಂದ 12ರವರೆಗೆ ಟಿಕೆಟ್ ಖರೀದಿಸಿ ನೋಡಲು ಅವಕಾಶ ಕಲ್ಪಿಸಲಾಗಿತ್ತು ಅ.13ರಿಂದ ಉಚಿತ ಪ್ರವೇಶವಿದ್ದರೂ ಕೆಲವರು ಅಕ್ರಮವಾಗಿ ಟಿಕೆಟ್ ನೀಡಿ ಹಣ ವಸೂಲಿ ಮಾಡಲು ಮುಂದಾಗಿದ್ದು, ಇದನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ವಾಗ್ವಾದ ನಡೆಯಿತು.

ಮೈಸೂರು ದಸರೆಯ ಪ್ರಮುಖ ಆಕರ್ಷಣೆಯಲ್ಲಿ ಫಲಪುಷ್ಪ ಪ್ರದರ್ಶವು ಒಂದಾಗಿದ್ದು, ಅದನ್ನು ವೀಕ್ಷಿಸಲು ಲಕ್ಷಾಂತರ ಪ್ರವಾಸಿಗರು ಆಗಮಿಸುವುದುಂಟು ಇದಕ್ಕಾಗಿ ಪ್ರತ್ಯೇಕ ಪ್ರವೇಶ ಶುಲ್ಕ ನಿಗದಿಪಡಿಸಲಾಗುತ್ತದೆ. ನಿಗದಿತ ಅವಧಿ ನಂತರ ಉಚಿತವಾಗಿ ವೀಕ್ಷಿಸಲು ಅನುವು ಮಾಡಿಕೊಡಲಾಗುತ್ತದೆ. ಈ ಬಾರಿ ಅವಧಿ ಮುಗಿದಿದ್ದರೂ, ಇಂದು ಟಿಕೆಟ್ ಕೌಂಟರ್‌ಗಳಲ್ಲಿ ಪ್ರವಾಸಿಗರಿಗೆ ಟಿಕೆಟ್ ನೀಡಿ ಹಣ ಪಡೆದುಕೊಳ್ಳಲು ಆರಂಭಿಸಿದರು. ಇದನ್ನು ಗಮನಿಸಿದ ಕೆಲವರು ಇಂದಿನಿಂದ ಉಚಿತವಾಗಿ ವೀಕ್ಷಿಸಲು ಅವಕಾಶವಿದೆ. ಏಕೆ ಟಿಕೆಟ್ ಪಡೆದುಕೊಳ್ಳಬೇಕು ಎಂದು ಪ್ರಶ್ನಿಸಿದಾಗ ಕೌಂಟರ್‌ನಲ್ಲಿ ಇದ್ದ ಯುವಕರು ಹಾಗೂ ಪ್ರವಾಸಿಗರ ನಡುವೆ ವಾಗ್ವಾದ ಆರಂಭವಾಗುತ್ತಿದ್ದಂತೆ ಟಿಕೆಟ್ ಕೌಂಟರ್‌ಗಳನ್ನು ಬಂದ್ ಮಾಡಲಾಯಿತು.

ಈ ಎಲ್ಲಾ ವಾಗ್ವಾದ ನಂತರ ಪ್ರವಾಸಿಗರು ಉಚಿತವಾಗಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಆರಂಭಿಸಿದರೆ, ಟಿಕೆಟ್ ಖರೀದಿಸಿ ಒಳಗೆ ಇದ್ದ ಪ್ರವಾಸಿಗರು ಈ ರೀತಿ ಮೋಸ ಏಕೆ ಮಾಡಬೇಕು. ಉಚಿತವಿದ್ದರೂ ಹಣ ಪಡೆದು ಟಿಕೆಟ್ ಹಂಚಿಕೆ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಇಂದು ಕಾಡಿನತ್ತ ದಸರಾ ಗಜಪಡೆ

ಮೈಸೂರು,ಅ.13(ಎಂಟಿವೈ)– ಜಂಬೂಸವಾರಿಯನ್ನು ಯಶಸ್ವಿಗೊಳಿಸಿದ ದಸರಾ ಗಜಪಡೆ, ಮಾವುತರು ಮತ್ತು ಕಾವಾಡಿಗಳು ನಾಳೆ(ಅ.14) ತಮ್ಮ ಕುಟುಂಬದೊಂದಿಗೆ ನಾಡಿನಿಂದ ಕಾಡಿನತ್ತ ಪಯಣ ಬೆಳೆಸಲಿದ್ದಾರೆ ಎಂದು ಡಿಸಿಎಫ್ ಡಾ.ಐ.ಪ್ರಭುಗೌಡ ತಿಳಿಸಿದ್ದಾರೆ.

ಬೆಳಗ್ಗೆ 11.45ರಿಂದ ಮಧ್ಯಾಹ್ನ 12.30ರ ನಡುವೆ ಅರಣ್ಯ ಇಲಾಖೆ ಹಾಗೂ ಅರಮನೆ ಮಂಡಳಿ ವತಿಯಿಂದ ಗಜಪಡೆಗೆ ಪೂಜೆ ನಡೆಯಲಿದೆ. ಬಳಿಕ ಲಾರಿಗಳ ಮೂಲಕ ಆನೆಗಳನ್ನು ಕ್ಯಾಂಪ್‌ಗಳಿಗೆ ಕಳುಹಿಸಲಾಗುತ್ತದೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಾ ಅವರು ತಿಳಿಸಿದರು.

ಜಂಬೂಸವಾರಿ ಯಶಸ್ವಿಯಾಗಲು ದಸರಾ ಗಜಪಡೆಯ ಆನೆಗಳು ಹಾಗೂ ಅವುಗಳ ಮಾವುತ, ಕಾವಾಡಿ ಸೇರಿದಂತೆ ಅರಣ್ಯ ಸಿಬ್ಬಂದಿಗಳ ತಂಡದ ಶ್ರಮವೇ ಕಾರಣ ಎಂದು ಇದೇ ವೇಳೆ ಹೇಳಿದರು.

ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ ಎಲ್ಲಾ ಆನೆಗಳು ಅತ್ಯುತ್ತಮ ಪ್ರದರ್ಶನ ನೀಡಿವೆ. ಅದರಲ್ಲೂ ಚಿನ್ನದ ಅಂಬಾರಿ ಹೊತ್ತಿದ್ದ ಅಭಿಮನ್ಯು ಹಾಗೂ ಇದೇ

ಜಂಬೂಸವಾರಿ ಯಶಸ್ವಿಗೆ ಗಜಪಡೆ ತಂಡದ ಶ್ರಮವೇ ಕಾರಣ


ಜಂಬೂಸವಾರಿಗಾಗಿ ಆನೆಗಳ ಶೃಂಗಾರಕ್ಕೆ ಬಳಸಿದ್ದ ಆಭರಣ, ಅಲಂಕಾರಿಕ ವಸ್ತುಗಳನ್ನು ಅರಮನೆಗೆ ಹಿಂದಿರುಗಿಸಲಾಯಿತು.

ಮೊದಲ ಬಾರಿಗೆ ಕುಮ್ಕಿ ಆನೆಯಾಗಿ ಜವಾಬ್ದಾರಿ ನಿಭಾಯಿಸಿದ ಲಕ್ಷ್ಮೀ ಹಾಗೂ ಹಿರಣ್ಯಾ ಆನೆಗಳು ಜಂಬೂಸವಾರಿ ಯಶಸ್ವಿಗೆ ತನ್ನದೇ ಆದ ಕೊಡುಗೆ ನೀಡಿವೆ ಎಂದರು.

ಈ ಬಾರಿ ಅರಮನೆ ಆವರಣದಲ್ಲಿ ಅಂಬಾರಿ ಸಾಗುವ ಮಾರ್ಗದಲ್ಲಿ ಮಾರ್ಪಾಡು ಮಾಡಲಾಗಿತ್ತು. ಇದರಿಂದ 500 ಮೀಟರ್ ಅಂತರ ಹೆಚ್ಚಾಗಿತ್ತು. ಆದರೂ ಅಭಿಮನ್ಯು ಅಂಬಾರಿ ಹೊತ್ತು ಸಾಗಿದ. ಜಂಬೂಸವಾರಿ ಯಶಸ್ಸಿನ ಹಿಂದೆ ಅಭಿಮನ್ಯು ಪಾತ್ರ ಹೆಚ್ಚಾಗಿದೆ. ಅರಮನೆಯಿಂದ ಬನ್ನಿ ಮಂಟಪದವರೆಗೂ ಎಲ್ಲಿಯೂ ನಿಲ್ಲದೆ ಯಶಸ್ವಿಯಾಗಿ ಹೆಜ್ಜೆ ಹಾಕಿದ ಎಂದು ಹರ್ಷ ವ್ಯಕ್ತಪಡಿಸಿದರು.

25 ನಿಮಿಷದಲ್ಲಿ ಅಂಬಾರಿ ಕಟ್ಟಿದರು: ನಮ್ಮ ಮಾವುತ, ಕಾವಾಡಿಗಳು ಕೇವಲ ಆನೆಗಳ ಪಾಲನೆ ಮಾತ್ರವಲ್ಲದೆ, ಅಂಬಾರಿ ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಕೇವಲ 25 ನಿಮಿಷದಲ್ಲಿಯೇ ಅಂಬಾರಿ ಕಟ್ಟಿದ್ದಾರೆ. ಮೆರವಣಿಗೆಯುದ್ದಕ್ಕೂ ಅಂಬಾರಿ ಸಣ್ಣ ಪ್ರಮಾಣದಲ್ಲೂ ಅಲುಗಾಡಲಿಲ್ಲ ಎಂದರು.

ಆನೆಗಳ ಆಭರಣ ವಾಪಸ್: ಮೆರವಣಿಗೆಗೆ ರಾಜಪೋಷಾಕಿನೊಂದಿಗೆ ಸಿಂಗಾರಗೊಂಡಿದ್ದ ಆನೆಗಳ ಮೇಲಿದ್ದ ವಸ್ತುಗಳು, ಗೆಜ್ಜೆ, ಆಭರಣ ಇತ್ಯಾದಿಗಳನ್ನು ಅರಮನೆ ಮಂಡಳಿ ಕಚೇರಿ ಭದ್ರತಾ ಕೊಠಡಿಯಲ್ಲಿ ಸುರಕ್ಷಿತವಾಗಿ ಇಡಲಾಯಿತು. ಅರಮನೆ ಮಂಡಳಿಯಿಂದ ನೀಡಲಾಗಿದ್ದ ಈ ಆಭರಣ, ಸಮವಸ್ತ್ರಗಳನ್ನು ಬನ್ನಿಮಂಟಪದಿಂದ ವಾಪಸ್ ಆದಾಗ ಶನಿವಾರ ರಾತ್ರಿಯೇ ತೆಗೆದು, ಕೋಡಿ ಸೋಮೇಶ್ವರ ದೇವಾಲಯದ ಬಳಿ ಇರುವ ಕೊಠಡಿಯಲ್ಲಿ ಇರಿಸಲಾಗಿತ್ತು ಭಾನುವಾರ ಬೆಳಗ್ಗೆ ಅವುಗಳನ್ನು ಒಂದೆಡೆ ಸೇರಿಸಿ ಅರಮನೆ ಮಂಡಳಿಗೆ ಹಿಂದಿರುಗಿಸಲಾಯಿತು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು